# ಅಧ್ಯಾಯ–೯

# ಆಡಳಿತ ಮತ್ತು ರಾಜಸ್ವ

ಭಾರತದಲ್ಲಿ ಜಿಲ್ಲೆಗಳು ಬಹು ಹಿಂದಿನಿಂದಲೂ ರಾಜ್ಯಾಡಳಿತದ ಪ್ರಮುಖ ಘಟಕಗಳಾಗಿವೆ. ಇತಿಹಾಸದುದ್ದಕ್ಕೂ ಅನೇಕ ರೂಪಗಳಲ್ಲಿ ಆಡಳಿತದ ಮುಖ್ಯ ಘಟಕವಾಗಿ ಜಿಲ್ಲೆಗಳನ್ನು ಪರಿಗಣಿಸುತ್ತಾ ಬರಲಾಗಿದೆ. ಭಾರತದಲ್ಲಿ ಪ್ರಪ್ರಥಮ ಐತಿಹಾಸಿಕ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೌರ್ಯರು ತಮ್ಮ ವಿಶಾಲ ಸಾಮ್ರಾಜ್ಯವನ್ನು ಸಮರ್ಥ ಮತ್ತು ಪರಿಣಾಮಕಾರಿ ಆಡಳಿತಕ್ಕಾಗಿ ಅನೇಕ ಪ್ರಾಂತಗಳನ್ನಾಗಿ ವಿಂಗಡಿಸಿದ್ದರು. ಈ ಪ್ರಾಂತಗಳನ್ನು 'ಆಹಾರ', 'ವಿಷಯ–ಮತ್ತು 'ಪ್ರದೇಶಗಳೆಂದು ವಿಂಗಡಿಸಿದ್ದರು. ಪ್ರತಿಯೊಂದು ಪ್ರಾಂತವೂ ರಾಜ್ಯಪಾಲರ ಆಡಳಿತದಲ್ಲಿರುತ್ತಿತ್ತು. ರಾಜಕುಮಾರರೂ ಒಮ್ಮೊಮ್ಮೆ ಪ್ರಾಂತಾಧಿಕಾರಿಗಳಾಗಿ ನೇಮಕಗೊಳ್ಳುತ್ತಿದ್ದರು. ಆಗ ಅವರನ್ನು ಕುಮಾರ ಮಹಾಮಾತ್ರರೆಂದು ಕರೆಯಲಾಗುತ್ತಿತ್ತು. ಇನ್ನುಳಿದ ಪ್ರಾಂತಾಧಿಕಾರಿಗಳನ್ನು ಮಹಾಮಾತ್ರರೆಂದು ಕರೆಯಲಾಗುತ್ತಿತ್ತು. ಕೇಂದ್ರದಲ್ಲಿದ್ದಂತೆ ಮಂತ್ರಿಗಳಿಂದ ಕೂಡಿದ ಸಮಾಲೋಚನಾ ಸಭೆಯೊಂದು ಪ್ರತೀ ಪ್ರಾಂತದಲ್ಲಿಯೂ ಇದ್ದು ಮಹಾಮಾತ್ರರಿಗೆ ಸಹಾಯ ಮಾಡುತ್ತಿತ್ತು ಎಂದು ಹೇಳಲಾಗಿದೆ. ಜೊತೆಗೆ ಬೇರೆ ಬೇರೆ ಅಧಿಕಾರಿಗಳೂ ಮಹಾಮಾತ್ರರಿಗೆ ಸಹಾಯ ಮಾಡಲು ನೇಮಕಗೊಳ್ಳುತ್ತಿದ್ದರು. ಅವರಲ್ಲಿ 'ಯೂತ' (ತೆರಿಗೆ ಸಂಗ್ರಹಕಾರ) 'ರಜುಕ' (ಕಂದಾಯ ವಸೂಲಿಕಾರ), 'ಸ್ಥಾನಿಕ' (ಜಿಲ್ಲಾಧಿಕಾರಿ) ಮುಂತಾದವರಿದ್ದರು. ಪ್ರಾಂತಗಳನ್ನು ಜಿಲ್ಲೆಗಳನ್ನಾಗಿ ವಿಂಗಡಿಸುತ್ತಿದ್ದು 'ಸ್ಥಾನಿಕ' ಎಂಬ ಪದನಾಮ ಹೊಂದಿದ್ದ ಅಧಿಕಾರಿಗಳು ಅವುಗಳ ಆಡಳಿತವನ್ನು ನಡೆಸುತ್ತಿದ್ದರು. ಸ್ಥಾನಿಕರಿಗೆ ನೆರವಾಗಲು 'ಗೋಪ' ಎಂಬ ಅಧಿಕಾರಿವರ್ಗ ಇರುತ್ತಿತ್ತು. ಆಡಳಿತದ ಸಣ್ಣ ಘಟಕ 'ಗ್ರಾಮ' ವಾಗಿತ್ತು. ಗ್ರಾಮಿಕ ಎಂಬ ಅಧಿಕಾರಿಯು ಗ್ರಾಮ ಸಭೆಯ ಸಹಾಯದಿಂದ ಅಲ್ಲಿನ ಆಡಳಿತವನ್ನು ನಡೆಸುತ್ತಿದ್ದನು.

ಗುಪ್ತರ ಕಾಲದಲ್ಲಿ (ಕ್ರಿ.ಶ.೩೨೦–ಕ್ರಿ.ಶ.೪೯೫) ಸಾಮ್ರಾಜ್ಯವನ್ನು ವಿಷಯ ಹಾಗೂ ಮಂಡಳಗಳನ್ನಾಗಿ ವಿಂಗಡಿಸಿದ್ದರು. ವಿಷಯದ ಅಧಿಕಾರಿಯನ್ನು ವಿಷಯಪತಿ ಅಥವಾ ಆಯುಕ್ತ ಎಂದು ಕರೆಯಲಾಗುತ್ತಿತ್ತು. ಭಾರತದ ಸರಿಸುಮಾರು ಎಲ್ಲಾ ಭಾಗಗಳಲ್ಲಿಯೂ ಈ ಸಾಮ್ರಾಜ್ಯಶಾಹಿ ಮಾದರಿ ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಅನುಸರಿಸಲ್ಪಡುತ್ತಿತ್ತು. ಹಿಂದೂ ರಾಜ್ಯಾಡಳಿತ ವ್ಯವಸ್ಥೆ ಕುರಿತಾದ ಗ್ರಂಥಗಳಲ್ಲಿ ಮುಖ್ಯವಾಗಿರುವ ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ, ಕಮಂದಕ ನೀತಿಸಾರ ಮೊದಲಾದವುಗಳು ದೇಶದಾದ್ಯಂತ ಆಡಳಿತದ ವ್ಯವಸ್ಥೆಯ ಮೇಲೆ ತಮ್ಮದೇ ಆದ ಪ್ರಭಾವವನ್ನು ಹೊಂದಿದ್ದವು. ಗಂಗ ದುರ್ವಿನೀತನನ್ನು ಮನುವಿಗೆ ಹೋಲಿಸಲಾಗಿದೆ. ಗಂಗ ನೀತಿಮಾರ್ಗನು ಶುಕ್ರನೀತಿಸಾರದ

ಪ್ರಕಾರವೇ ರಾಜ್ಯಾಡಳಿತವನ್ನು ನಿರ್ವಹಿಸುತ್ತಿದ್ದನೆಂದು ಹೇಳಲಾಗಿದೆ. ಗಂಗರ ರಾಜ್ಯಭಾರ ವ್ಯವಸ್ಥೆಯು ಮೌರ್ಯ ಮತ್ತು ಗುಪ್ತ ರಾಜ್ಯಭಾರದಂತೆ ಅನೇಕ ಸುಸಜ್ಜಿತ ವಿಭಾಗಗಳಿಂದ ಕೂಡಿದ್ದಿತು. ದಕ್ಷ ರಾಜ್ಯಭಾರಕ್ಕಾಗಿ ಸಾಮ್ರಾಜ್ಯವನ್ನು ನಾಡು, ವಿಷಯ, ವೇಂಠೆ, ಕಂಪಣ ಮುಂತಾದ ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಗ್ರಾಮವು ಆಡಳಿತದ ಮೂಲಭೂತ ಅಥವಾ ಅತಿ ಕನಿಷ್ಠ ಘಟಕವಾಗಿತ್ತು. ವಿಭಾಗಗಳನ್ನು ಸಾಮಾನ್ಯವಾಗಿ ಸಂಖ್ಯಾರೂಪಕದಲ್ಲಿ – ಗಂಗವಾಡಿ ೯೬,೦೦೦, ನೊಳಂಬವಾಡಿ ೩೨,೦೦೦, ಬನವಾಸಿ ೧೨,೦೦೦, ಪುನ್ನಾಡು ೧೦,೦೦೦, ತೊರೆನಾಡು ೫೦೦, ಕರೆನಾಡು ೭೦ ಹೀಗೆ ವಿಂಗಡಿಸಲಾಗಿತ್ತು. ಈ ಸಂಖ್ಯಾ ಪ್ರತ್ಯಯಗಳು ಕುಟುಂಬ, ಗ್ರಾಮ, ಜನಸಂಖ್ಯೆ ಇಲ್ಲವೆ ಕಂದಾಯ ಪ್ರಮಾಣವನ್ನು ಸೂಚಿಸುತ್ತದೆಂಬ ವಿಭಿನ್ನ ಅಭಿಪ್ರಾಯವನ್ನು ವಿದ್ವಾಂಸರು ಹೊಂದಿರುವುದರಿಂದ ಅದರ ನೈಜಾರ್ಥವೇನಿತ್ತೆಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ. ಪ್ರತಿ ಗ್ರಾಮದಲ್ಲಿಯೂ 'ಗ್ರಾಮಕೂಟಕ' ಅಥವಾ 'ಗಾವುಂಡ' ಪದನಾಮ ಹೊಂದಿರುತ್ತಿದ್ದ ಅಧಿಕಾರಿಯು ಗ್ರಾಮಾಡಳಿತವನ್ನು ನಡೆಸುತ್ತಿದ್ದನು. 'ರಾಷ್ಟ್ರಪತಿ', 'ವಿಷಯಪತಿ', 'ಆಯುಕ್ತಕ' ಮುಂತಾದ ಅಧಿಕಾರಿಗಳು ದೊಡ್ಡ ಆಡಳಿತ ಘಟಕಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ಚಕ್ರವರ್ತಿಯ ನೇರ ಆಡಳಿತಕ್ಕೆ ಸೇರಿದ್ದ ಪ್ರದೇಶವು 'ರಾಷ್ಟ್ರ' ಎಂಬ ಆಡಳಿತಾತ್ಮಕ ಘಟಕವಾಗಿತ್ತು. ಅದನ್ನು ಈಗಿನ ಜಿಲ್ಲೆಗೆ ಸಮಾನವಾದ ಆಡಳಿತ ವಿಭಾಗವೆನ್ನಬಹುದು. 'ವಿಷಯ' ರಾಷ್ಟ್ರಕ್ಕಿಂತ ಚಿಕ್ಕ ಆಡಳಿತ ಘಟಕ. ಭುಕ್ತಿ, ನಾಡು ಮುಂತಾದವು ಉಪಘಟಕಗಳಾಗಿದ್ದು ಗ್ರಾಮ ಅಥವಾ ಊರು ಮೂಲ ಆಡಳಿತ ಘಟಕವಾಗಿತ್ತು. ರಾಷ್ಟ್ರದ ಮುಖ್ಯಸ್ಥನನ್ನು ರಾಷ್ಟ್ರಪತಿ ಎಂದು ಕರೆಯಲಾಗುತ್ತಿದ್ದು ಆತ ಓರ್ವಸಾಮಂತ ರಾಜನ ಸ್ಥಾನಮಾನಗಳನ್ನು ಹೊಂದಿರುತ್ತಿದ್ದನು. ಭೂಕಂದಾಯ ವಸೂಲಿಯು ಆತನ ಪ್ರಮುಖ ಕಾರ್ಯಗಳಲ್ಲೊಂದಾಗಿತ್ತು. ಸ್ಥಳೀಯ ಹಕ್ಕುಬಾಧ್ಯತೆ ಮತ್ತು ವಿಶೇಷ ಸೌಕರ್ಯಗಳಿಂದ ಕೂಡಿದ ಒಳನಾಡುಗಳನ್ನು 'ನಾಡು' ಅಥವಾ ತಾಲೂಕುಗಳನ್ನಾಗಿ ಮರು ವಿಂಗಡಣೆ ಮಾಡುತ್ತಿದ್ದರು.

ಚೋಳರ ನಂತರ ಅಧಿಕಾರ ಪಡೆದುಕೊಂಡ ಹೊಯ್ಸಳರು (ಕ್ರಿ.ಶ.೧೦೦೦–ಕ್ರಿ.ಶ.೧೩೩೬) ಮೇಲೆ ವಿವರಿಸಿದ ವ್ಯವಸ್ಥೆಯನ್ನೇ ಮುಂದುವರೆಸಿದರು. ವಿಜಯನಗರದ ಅರಸರು ಸಹ ಹಿಂದಿನಿಂದ ಬಂದಿದ್ದ ಆಡಳಿತ ವ್ಯವಸ್ಥೆಯನ್ನು ಭಂಗಗೊಳಿಸಲಿಲ್ಲ. ಆದರೆ ಇವರ ಕಾಲದಲ್ಲಿ ಆಡಳಿತ ಘಟಕಗಳ (ಕ್ರಿ.ಶ.೧೩೩೬–ಕ್ರಿ.ಶ.೧೫೬೫) ವೈವಿಧ್ಯತೆ ಅಧಿಕವಾಗಿತ್ತು, ಆಗ ಜಾರಿಯಲ್ಲಿದ್ದ ಆಡಳಿತ ಘಟಕಗಳನ್ನು ದೇಶ, ರಾಜ್ಯ, ನಾಡು, ಸೀಮೆ, ವಳಿತ, ಸ್ಥಳ ಮತ್ತು ವೇಂಠೆ ಎಂದು ಹೆಸರಿಸಲಾಗಿತ್ತು. ವಿಜಯನಗರದಂತಹ ವಿಸ್ತಾರವಾದ ಸಾಮ್ರಾಜ್ಯದಲ್ಲಿ ಇಂತಹ ವೈವಿಧ್ಯತೆ ಸಹಜವಾಗಿತ್ತು. ಬ್ರಾಹ್ಮಣರು, ದೇವಸ್ಥಾನಗಳು ಹೊಂದಿದ್ದ ಜಮೀನುಗಳ ವಿವರಗಳನ್ನು ರಾಷ್ಟ್ರಪತಿಯೇ ನಿರ್ವಹಿಸಬೇಕಾಗಿತ್ತು. ವಿಷಯಪತಿ ಮತ್ತು ಭೋಗಪತಿಗಳು ತಮ್ಮ ಅಧೀನದಲ್ಲಿದ್ದ ಆಡಳಿತ ಘಟಕಗಳಲ್ಲಿ ಮೇಲಿನಂತೆಯೇ ಕಾರ್ಯನಿರ್ವಹಿಸುತ್ತಿದ್ದರೆಂದು ತಿಳಿಯಲಾಗಿದೆ. ಇವರಿಗೆ ಸಹಾಯಕರಾಗಿ 'ನಾಡಗಾವುಂಡ' ಮತ್ತು 'ದೇಶಗ್ರಾಮಕೂಟ' ಎಂಬ ಪದನಾಮವಿದ್ದ ಅಧಿಕಾರಿಗಳಿದ್ದರು. ಗ್ರಾಮ ಮುಖ್ಯ ಮತ್ತು ಗ್ರಾಮ ಲೆಕ್ಕಿಗರು ಗ್ರಾಮಾಡಳಿತವನ್ನು ನಡೆಸುತ್ತಿದ್ದರು. ಅವರ ಹುದ್ದೆಗಳು ಬಹುತೇಕ ಅನುವಂಶೀಕವಾಗಿದ್ದವು. ಗ್ರಾಮಗಳಿಂದ ಬರಬೇಕಾದ ರಾಜ್ಯಾದಾಯಕ್ಕೆ ಮಾತ್ರವಲ್ಲದೆ ಅಲ್ಲಿಯ ಶಾಂತಿ ಸುವ್ಯವಸ್ಥೆಗೂ ಅವರೇ ಜವಾಬ್ದಾರರಾಗಿರುತ್ತಿದ್ದರು.

ಮೊಗಲ್ ಸಾಮ್ರಾಟರು ಭಾರತದಲ್ಲಿ ಪರಂಪರಾಗತವಾಗಿ ಬಂದಿದ್ದ ಆಡಳಿತ ವ್ಯವಸ್ಥೆಯನ್ನೇ ಸೂಕ್ತ ಮಾರ್ಪಾಡುಗಳೊಂದಿಗೆ ಮುಂದುವರೆಸಿದರು. ಆಡಳಿತ ಮತ್ತು ರಾಜಸ್ವ ಸಂಗ್ರಹದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಪ್ರಾಂತ ಇಲ್ಲವೇ 'ಸುಭಾ' ಗಳಲ್ಲಿ ವಿಂಗಡಿಸಿದ್ದರು. ಸರಕಾರ ಅಥವಾ ಜಿಲ್ಲೆಗಳಲ್ಲಿ ಸುಭಾಗಳ ಒಳವಿಂಗಡಣೆ ಮಾಡಲಾಗಿತ್ತು. ಪ್ರತಿಯೊಂದು ಸರಕಾರವು ಅನೇಕ ಪರಗಣಗಳನ್ನು ಒಳಗೊಂಡಿರುತ್ತಿತ್ತು. ಪ್ರತಿ ಪರಗಣದಲ್ಲಿ ಅನೇಕ ಗ್ರಾಮಗಳಿರುತ್ತಿದ್ದವು. ಓರ್ವ ಮಿಲಿಟರಿ ಅಧಿಕಾರಿಯೂ ಆಗಿದ್ದ ಫೌಜುದಾರನು ಜಿಲ್ಲಾ(ಸರಕಾರ) ಆಡಳಿತದ ಮುಖ್ಯಸ್ಥನಾಗಿದ್ದನು. ಅಮಲ್ ಗುಜರ್ ಎಂಬ ಪದನಾಮವಿದ್ದ ಕಂದಾಯಾಧಿಕಾರಿಗೆ ಅಗತ್ಯ ನೆರವು ನೀಡುವುದೂ ಅವನ ಕರ್ತವ್ಯಗಳಲ್ಲೊಂದಾಗಿತ್ತು. ಪರಗಣಗಳು ಅತಿ ಸಣ್ಣ ಆಡಳಿತ ಮತ್ತು ಆರ್ಥಿಕ ಘಟಕಗಳೆನಿಸಿದ್ದು ಶೇಖ್‌ದಾರ್, ಅಮಿಲ್ ಮತ್ತು ಕಾರಕೂನ ಮುಂತಾದ ಅಧಿಕಾರಿಗಳಿರುತ್ತಿದ್ದರು. ಪರಗಣದ ಕಾರ್ಯಕಾರಿ ಅಧಿಕಾರಿಯು ಶೇಖ್‌ದಾರನೇ ಆಗಿರುತ್ತಿದ್ದನು. ಪೋತೇದಾರನು ಪರಗಣದ ಖಜಾನೆ ಅಧಿಕಾರಿಯಾಗಿರುತ್ತಿದ್ದನು. ಕಾರಕೂನರು ಎಲ್ಲಾ ಕೃಷಿಯೋಗ್ಯ ಭೂಮಿಯ ವಿವರಗಳು, ಬೆಳೆಗಳ

ವಿವರಗಳು, ಕೃಷಿಕರು ನೀಡಬೇಕಾಗಿದ್ದ ಕಂದಾಯದ ಲೆಕ್ಕ, ವಾರ್ಷಿಕ ಸಂಗ್ರಹಣೆ ಕಾರ್ಯ, ಬಾಕಿ ನಿಂತ ಕಂದಾಯದ ಲೆಕ್ಕಪತ್ರಗಳನ್ನಿಡುವುದು ಮುಂತಾದ ಜವಾಬ್ದಾರಿಯುತ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು.

ಮೊಗಲರ ಆಗಮನದೊಂದಿಗೆ ದಕ್ಷಿಣ ಭಾರತದ ಆಡಳಿತ ವ್ಯವಸ್ಥೆಯಲ್ಲಿಯೂ ಅವರ ಪ್ರಭಾವ ಕಂಡುಬರತೊಡಗಿತು. ಮೈಸೂರಿನ ದೊರೆ ಚಿಕ್ಕದೇವರಾಜ ಒಡೆಯರು (೧೬೭೩–೧೭೦೪) ಅನೇಕ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದರು. ಅವರ ಆಳ್ವಿಕೆಯ ಪ್ರಾರಂಭದಲ್ಲಿದ್ದ ೭೨ ಗಡಿಗಳು ಅಥವಾ ಆಡಳಿತದ ವಿಭಾಗಗಳನ್ನು ಪುನರ್ವಿಂಗಡಿಸಿ ಅವುಗಳ ಸಂಖ್ಯೆಯನ್ನು ೮೪ಕ್ಕೆ ಏರಿಸಿದರು. ಪ್ರತಿಯೊಂದು ಗಡಿಯನ್ನು ಕೆಲವು ಹೋಬಳಿಗಳನ್ನಾಗಿ ವಿಂಗಡಿಸಲಾಯಿತು. ಅವುಗಳ ಕೆಳಗೆ ಇರುತ್ತಿದ್ದ ೮ ರಿಂದ ೧೬ ಸಂಖ್ಯೆಯಷ್ಟು ಉಪಗ್ರಾಮಗಳನ್ನು ದೊಡ್ಡ ಗ್ರಾಮವೊಂದಕ್ಕೆ ಸೇರಿಸಿ, ಪ್ರತಿ ಹೋಬಳಿಯಲ್ಲಿದ್ದ ಅತಿ ದೊಡ್ಡ ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಘೋಷಿಸಿ ಆ ಹೋಬಳಿಗೆ ಅದೇ ಹೆಸರನ್ನಿಡಲಾಯಿತು. ಪ್ರತಿ ಹೋಬಳಿಗೆ ಓರ್ವ ಸುಭೇದಾರನನ್ನು ನೇಮಕ ಮಾಡಿ ಅವನ ಕೈಕೆಳಗೆ ಚಿಕ್ಕ ಪಾರುಪತ್ಯೆದಾರ (ಸಹಾಯಕ), ಮೂವರು ಲೆಕ್ಕಿಗರು (ಅಠವಣಿಗ) (scroll-writers), ಆರು ಗುಮಾಸ್ತರು (accountants) ಮತ್ತು ಓರ್ವ ರಾಯಸದವನು (scribe) ಇರುತ್ತಿದ್ದರು.

ಪ್ರತಿಯೊಂದು ಹಳ್ಳಿಯಲ್ಲಿಯೂ ಪರಂಪರಾಗತವಾಗಿ ನಡೆದು ಬಂದಿದ್ದ ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಿ ಅದಕ್ಕೆ ಬಾರಾಬಲೂತಿ ಎಂಬ ಅಂಕಿತ ನೀಡಿ ಭದ್ರ ಬುನಾದಿಯ ಮೇಲೆ ನೆಲೆಗೊಳಿಸಲಾಯಿತು. ಆ ವ್ಯವಸ್ಥೆಯಲ್ಲಿ ಗಾಮೀಣ ಆಡಳಿತವನ್ನು ಹನ್ನೆರಡು ಗ್ರಾಮೀಣ ನೌಕರರು ನಡೆಸಿಕೊಂಡು ಹೋಗುತ್ತಿದ್ದರು. ಅವರೆಂದರೆ, ಗೌಡ (Headman) (೨) ಶಾನುಭೋಗ (Accountant) (೩) ಜೋತಿಷಿ (Astrologer) (೪) ಕಮ್ಮಾರ (Black-smith) (೫)ಅಕ್ಕಸಾಲಿ (Goldsmith) (೬) ಕುಂಬಾರ (Potter) (೭) ಅಗಸ (Washerman) (೮) ಕೆಲಸಿ (Barbar) (೯) ತೋಟಿ (Scavenger) (೧೦) ತಳವಾರ (Watchman) (೧೧) ನೀರುಗಂಟಿ (Regular of tank sluices) ಮತ್ತು (೧೨) ಬಡಗಿ (Carpenter).

ಚಿಕ್ಕದೇವರಾಜ ಒಡೆಯರ ಕಟ್ಟುಪಾಡುಗಳ ಪ್ರಕಾರ ಬಾರಾಬಲೂತಿಯವರ ಸಂಭಾವನೆ ಅಥವಾ ರುಸುಂಗಳನ್ನು ಅವರವರ ಹಕ್ಕುಗಳಿಗನುಸಾರವಾಗಿ ನಿಗದಿಪಡಿಸಲಾಗಿತ್ತು. ಅವುಗಳನ್ನು ಸಾಮಾನ್ಯವಾಗಿ ರೈತರೇ ವಸ್ತು ರೂಪದಲ್ಲಿ ಸಲ್ಲಿಸಬೇಕಾಗಿತ್ತು. ಗೌಡನಿಗೆ ಮನೆ ತೆರಿಗೆ ನೀಡುವುದರಿಂದ ಮತ್ತು ಬಿಟ್ಟಿ ಚಾಕರಿ ಮಾಡುವುದರಿಂದ ವಿನಾಯಿತಿಯ ಜೊತೆಯಲ್ಲಿ ಕೆಲವು ಕಾಣಿಕೆಗಳು ಮತ್ತು ಕಡ್ಡಾಯ ಪಾವತಿಗಳು ಸಹ ಸಿಗುತ್ತಿದ್ದವು. ಗ್ರಾಮ ಲೆಕ್ಕಿಗನ ಅರ್ಧ ವೇತನವನ್ನು ನಗದು ರೂಪದಲ್ಲಿ ಮತು ಉಳಿದರ್ಧ ವೇತನವನ್ನು ವಸ್ತು ರೂಪದಲ್ಲಿ ನೀಡಲಾಗುತ್ತಿತ್ತು. ಇದಲ್ಲದೆ ರೈತರಿಂದ ನೇರವಾಗಿ ವರ್ಷಕ್ಕೊಮ್ಮೆ ಕಾಲು (೧/೪), ಅರ್ಧ (೧/೨), ಮುಕ್ಕಾಲು (೩/೪), ಅಥವಾ ಒಂದರಂತೆ ಹಣ ಆಯಾ ರೈತನ ಅಂತಸ್ತಿಗೆ ಅನುಗುಣವಾಗಿ ಸಲ್ಲುತ್ತಿತ್ತು. ಇದನ್ನು ಕಡತದ ಕಾಣಿಕೆಯ ಹಣ ಎಂದು ಕರೆಯುತ್ತಿದ್ದರು. ಗ್ರಾಮದ ಉಳಿದ ನೌಕರರಿಗೂ ಅವರದೇ ಆದ ಪ್ರತ್ಯೇಕ ರುಸುಮುಗಳು ರೈತರಿಂದ ಸಲ್ಲುತ್ತಿದ್ದವು. ಜ್ಯೋತಿಷಿ, ಶಾನುಭೋಗ, ತೋಟಿ, ತಳವಾರ ಮತ್ತು ಕೆರೆ–ನೀರುಗಂಟಿ ಇವರುಗಳಿಗೂ ಒಂದರಿಂದ ಆರು ವರಹಗಳ ಕಂದಾಯ ಮೌಲ್ಯವಿದ್ದ ಕಂದಾಯ ರಹಿತ 'ಮಾನ್ಯ–ಭೂಮಿ'ಯನ್ನು ಜೀವನ ನಿರ್ವಹಣೆಗೆಂದು ಪಡೆಯುತ್ತಿದ್ದರು. ಇದಲ್ಲದೆ ಗ್ರಾಮದ ಪ್ರತಿಯೊಬ್ಬ ರೈತನೂ ಮೇಲಿನ ೧೨ ಗ್ರಾಮದಲ್ಲಿನ ಅಧಿಕಾರಿಗಳಿಗೆ 'ಹೊರೆಹುಲ್ಲು ಮೊರ ಭತ್ತ' ದಂತೆ ದವಸ ಧಾನ್ಯ ಗಳನ್ನು ಸುಗ್ಗಿಯ ಕಾಲದಲ್ಲಿ ಕೊಡುತ್ತಿದ್ದರು.

ಚಿಕ್ಕದೇವರಾಜ ಒಡೆಯರು ಔರಂಗಜೇಬನ ಆಸ್ಥಾನಕ್ಕೆ ಕಳುಹಿಸಿದ್ದ ಕರಣಿಕ ಲಿಂಗಣ್ಣಯ್ಯನೆಂಬ ವಕೀಲನು ಮೊಗಲರ ಸ್ನೇಹ ಮತ್ತು ವಿಶ್ವಾಸ ಗಳಿಸಿಕೊಂಡು "ರಾಜಾ ಜಗದೇವ್" ಎಂಬ ಕಿತಾಬು ಹಾಗೂ "ರಾಜ ಚಿಕ್ಕದೇವರಾಜ್ ಮಹಮದ್ ಷಾಯಿ" ಎಂಬ ಮೊಹರನ್ನು ಅನೇಕ ಬಿರುದುಗಳೊಂದಿಗೆ ೧೭೦೦ರಲ್ಲಿ ಮೈಸೂರಿಗೆ ತಂದನು. ಅವನಿಂದ ಮೊಗಲರ ಆಡಳಿತ ಪದ್ಧತಿ ಮತ್ತು ಅಠಾರಾ ಕಛೇರಿ ಎಂಬುದಾಗಿದ್ದ ಅಧಿಕ ಸ್ಥಾನಗಳ ವಿವರಣೆಯನ್ನು ಕೇಳಿ ಪ್ರೇರಿತರಾದ ಒಡೆಯರು ಮೈಸೂರಿನಲ್ಲಿಯೂ ಅದೇ ರೀತಿ ೧೮ ಚಾವಡಿಗಳನ್ನು ಮಾಡಿ ಪ್ರತಿಯೊಂದು ಚಾವಡಿಗೂ ಪ್ರತ್ಯೇಕವಾದ ಗೊತ್ತುಗಾರ, ದಫ್ತರದವರು, ಗುಮಾಸ್ತರು, ರಾಯಸದವರು, ದಫೇದಾರ, ಊಳಿಗದವರು, ಕಾವಲುಗಾರ ಮುಂತಾದವರನ್ನು ನೇಮಕ ಮಾಡಿದರು. ಸಿ. ಹಯವದನರಾವ್ ಹೇಳುವಂತೆ "ಹದಿನೆಂಟು ಇಲಾಖೆಗಳ (ಅಠಾರ ಕಛೇರಿ) ಕಲ್ಪನೆಯನ್ನು

ಮೊಗಲರ ಆಡಳಿತಾತ್ಮಕ ಸಂಪ್ರದಾಯ ಮತ್ತು ಕಾರ್ಯವಿಧಾನದಿಂದ ತೆಗೆದುಕೊಂಡಿದ್ದರೂ, ಚಿಕ್ಕದೇವರಾಜ ಒಡೆಯರು ರೂಪಿಸಿದ ಇಲಾಖೆಗಳ ತಪಶೀಲುಗಳು ಅವಶ್ಯಕ ಅಂಶಗಳಲ್ಲಿ ದೇಶಿಯವಾಗಿದ್ದುವಲ್ಲದೆ ಸ್ಥಳೀಯ ಅವಶ್ಯಕತೆಗಳಿಗೆ ಹೊಂದಿಕೊಂಡಿದ್ದವು. ಅನೂಚಾನವಾಗಿ ಬಂದ ಸಂಸ್ಥೆಗಳನ್ನು ಸುಧಾರಿಸುವ ಮೂಲಕ ಅವುಗಳನ್ನು ತನ್ನದೇ ಕಾಲದ ಸ್ಥಿತಿಗತಿಗಳೊಂದಿಗೆ ಹೆಚ್ಚು ಖಚಿತವಾದ ಮತ್ತು ನವೀನತೆಯ ದಿಕ್ಕಿನಲ್ಲಿ ಸರಿಪಡಿಸುವ ಒಂದು ಬಲವಾದ ಧೋರಣೆ ಅವರಲ್ಲಿದ್ದುದು ಕಂಡುಬರುತ್ತದೆ". ಈ ಸುಧಾರಣೆಗಳು ಕಾರ್ಯತಃ ಎಷ್ಟೊಂದು ಪ್ರಯೋಜನಕಾರಿಯಾಗಿದ್ದುವೆಂದರೆ ಮುಂದೆ ಬ್ರಿಟಿಷರ ಆಡಳಿತ ಕಾಲದಲ್ಲಿಯೂ (೧೮೩೧-೧೮೮೧) ಸಚಿವಾಲಯವನ್ನು ಅಠಾರಾ ಕಛೇರಿ ಎಂದೇ ಕರೆಯುವ ರೂಢಿ ಮುಂದುವರೆಯಿತು.

ಹೈದರನು ಆಡಳಿತದ ಜವಾಬ್ದಾರಿಯನ್ನು (೧೭೬೧-೧೭೮೨) ವಹಿಸಿಕೊಂಡ ನಂತರ ಅನೇಕ ಬದಲಾವಣೆಗಳನ್ನು ಮಾಡಿದನು. ಅವನ ಕಾಲದಲ್ಲಿ ಒಟ್ಟು ೧೪೪ ಜಿಲ್ಲೆಗಳಿದ್ದವು. ಇಡೀ ರಾಜ್ಯವನ್ನು ಅಸಮ ವಿಸ್ತೀರ್ಣವುಳ್ಳಂತಹ ೧೬ ಸುಭಾಗಳನ್ನಾಗಿ ವಿಂಗಡಿಸಲಾಗಿತ್ತು. ನಾಗರಿಕ ಮತ್ತು ಮಿಲಿಟರಿ ಅಧಿಕಾರಿಗಳಿಬ್ಬರನ್ನು ಹೊಂದಿರುತ್ತಿದ್ದ ಸುಬೇದಾರರು ಅವರವರ ಪ್ರದೇಶದಲ್ಲಿನ ಆಡಳಿತದ ವ್ಯವಹಾರಗಳನ್ನು ನಿಯಂತ್ರಿಸುತ್ತಿದ್ದರು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಓರ್ವ ಅಮಿಲ್ ಮತ್ತು ಉಪ ಸುಬೇದಾರನೆಂದು ನೇಮಕವಾದ ಅಧಿಕಾರಿಗಳು ಸುಬೇದಾರನಿಗೆ ಸಹಾಯಕರಾಗಿರುತ್ತಿದ್ದರು.

ಪ್ರತಿಯೊಂದು ತಾಲೂಕನ್ನು ಸಣ್ಣದಾಗಿ ವಿಂಗಡಿಸಿ ಹೋಬಳಿಗಳನ್ನಾಗಿ ವಿಂಗಡಿಸಲಾಯಿತು. ಸಾಮಾನ್ಯವಾಗಿ ನಾಲ್ಕರಿಂದ ಒಂಬತ್ತು ಸಹಸ್ರ ಪಗೋಡಾಗಳವರೆಗೆ ಹುಟ್ಟುವಳಿ ಇರುತ್ತಿದ್ದ ಆ ಹೋಬಳಿಗಳು ಶೇಖದಾರ ಅಥವಾ ಪಾರುಪತ್ಯೆದಾರ ಎಂಬ ಅಧಿಕಾರಿಯ ಉಸ್ತುವಾರಿಯಲ್ಲಿದ್ದವು. ಊರ ಗೌಡನಿಂದ ಕಂದಾಯವನ್ನು ವಸೂಲು ಮಾಡಿ ಅಮಲ್ದಾರನ ಕಛೇರಿಗೆ ತಲುಪಿಸುವ ಜವಾಬ್ದಾರಿ ಶೇಖದಾರನದಾಗಿತ್ತು. ಅವನ ಸಹಾಯಕ್ಕಾಗಿ ಇಬ್ಬರು ಲೆಕ್ಕಿಗರು ಇರುತ್ತಿದ್ದರು. ಇವರಿಗೆಲ್ಲಾ ಸರಕಾರದಿಂದ ನಿಗದಿತ ಸಂಬಳ ದೊರೆಯುತ್ತಿತ್ತು. ಗ್ರಾಮ ಮಟ್ಟದಲ್ಲಿ ಪರಂಪರಾಗತ ಆಯಗಾರ ಪದ್ಧತಿ ಇನ್ನೂ ಸಕ್ರಿಯವಾಗಿತ್ತು. ಗ್ರಾಮಾಡಳಿತದ ಮುಖ್ಯಸ್ಥನನ್ನು ಗೌಡ/ಪಟೇಲ ಎಂದು ಕರೆಯುತ್ತಿದ್ದರು. ಇವನ ಜೊತೆಗೆ ಹಳ್ಳಿಯ ನಾಲ್ವರು ಹಿರಿಯರು ಸೇರಿ ಪಂಚಾಯತಿ ಎಂಬ ವ್ಯವಸ್ಥೆ ಇದ್ದು ಗ್ರಾಮದ ಎಲ್ಲಾ ವಿವಾದಗಳನ್ನು ಬಗೆಹರಿಸಲು ಯತ್ನಿಸುತ್ತಿದ್ದರು. ಗ್ರಾಮದ ಎಲ್ಲಾ ಲೆಕ್ಕಗಳನ್ನು ಶಾನುಭೋಗನೇ ನಿರ್ವಹಿಸುತ್ತಿದ್ದನು. ಹೈದರಾಲಿಯ ನಂತರ ಅಧಿಕಾರಕ್ಕೆ ಬಂದ ಟಿಪ್ಪುಸುಲ್ತಾನ (೧೭೮೨-೧೭೯೯) ನ ಕಾಲದಲ್ಲಿ ಮೇಲಿನ ವ್ಯವಸ್ಥೆಯನ್ನೇ ಮುಂದುವರೆಸುತ್ತಾ ಕೆಲವು ಬದಲಾವಣೆಗಳನ್ನು ಮಾತ್ರ ಮಾಡಿದನು.

ಟಿಪ್ಪುಸುಲ್ತಾನನ ಪತನಾನಂತರ(೧೭೯೨-೧೭೯೯) ಬ್ರಿಟಿಷರಿಂದ ಮರುಸ್ಥಾಪನೆಯಾದ ಒಡೆಯರ್ ಮನೆತನದ ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯-೧೮೬೮) ಅಪ್ರಾಪ್ತ ವಯಸ್ಕರಾಗಿದ್ದುದರಿಂದ ಆ ಅವಧಿಯಲ್ಲಿ ದಿವಾನ್ ಪೂರ್ಣಯ್ಯನು ರೀಜೆಂಟನೂ ಆಗಿ ಆಡಳಿತವನ್ನು ನಡೆಸಬೇಕಾಯಿತು. ಬ್ರಿಟಿಷರ ಆಡಳಿತ ಕಾಲದಲ್ಲಿ ಸಂಸ್ಥಾನವನ್ನು ವಿಭಾಗ, ಜಿಲ್ಲೆ, ತಾಲೂಕು ಮತ್ತು ಹೋಬಳಿ ಎಂದು ಅನುಕ್ರಮವಾಗಿ ವಿಂಗಡಿಸಲಾಯಿತು. ಪ್ರತಿಯೊಂದು ಆಡಳಿತ ಘಟಕವೂ ಓರ್ವ ಜವಾಬ್ದಾರಿಯುತ ಅಧಿಕಾರಿಯ ನಿಯಂತ್ರಣದಲ್ಲಿದ್ದು ಅವನು ತನ್ನ ಮೇಲಿನ ಅಧಿಕಾರಿಯ ಅಧೀನದಲ್ಲಿರುತ್ತಿದ್ದನು. ಸಾಮಾನ್ಯವಾಗಿ ಸಣ್ಣ ಸಣ್ಣ ವೃತ್ತಗಳು ಮತ್ತು ಉಪವಿಭಾಗಗಳಾಗಿ ವಿಂಗಡಣೆಯಾಗಿರುತ್ತಿದ್ದ ಜಿಲ್ಲೆಗಳ ಸಮೂಹವನ್ನು ಪ್ರಾಂತ ಎಂದು ಪರಿಗಣಿಸಲಾಗಿತ್ತು. ಆಡಳಿತ ಘಟಕಗಳಲ್ಲಿ ಅತ್ಯಂತ ಮುಖ್ಯವಾದುದು ಜಿಲ್ಲೆಯಾಗಿತ್ತು. ವಿಭಾಗೀಯ ಅಧಿಕಾರಿಗಳನ್ನು ೧೮೬೧ ರಿಂದ ಸೂಪರಿಂಟೆಂಡೆಂಟ್ ಎಂದು ಕರೆಯುತ್ತಿದ್ದರು. ಆಗ ಜಿಲ್ಲಾಧಿಕಾರಿಗಳನ್ನು ಡೆಪ್ಯುಟಿ ಸೂಪರಿಂಟೆಂಡೆಂಟ್ ಎಂದು ಕರೆಯುತ್ತಿದ್ದರು. ಕಬ್ಬನ್ ಕಮಿಷನರಾಗಿದ್ದಾಗ ನಾಲ್ಕು ವಿಭಾಗಗಳಿದ್ದವು. ಎಲ್.ಬಿ. ಬೌರಿಂಗ್ ಮುಖ್ಯ ಕಮೀಷನರಾಗಿದ್ದಾಗ ಅಂದರೆ ೧೮೬೨ರಲ್ಲಿ ಅವುಗಳ ಸಂಖ್ಯೆಯನ್ನು ಮೂರಕ್ಕಿಳಿಸಿದನು.

ಕಳೆದ ಶತಮಾನದ ಆರಂಭದಲ್ಲಿ ರಾಜ್ಯದ ಸಾರ್ವಜನಿಕ ಆಡಳಿತ, ವ್ಯಕ್ತಿ ಮತ್ತು ಆಸ್ತಿಯ ರಕ್ಷಣೆ ನೀಡುವುದು ಹಾಗೂ ಸರ್ಕಾರದ ವಿವಿಧ ಇಲಾಖೆಗಳ ನಿರ್ವಹಣೆಗೆ ಅಗತ್ಯವಾದ ಹಣಕಾಸು ಬಿಡುಗಡೆಗೆ ಮಾತ್ರ ಸೀಮಿತವಾಗಿತ್ತು. ನಂತರ ಪೊಲೀಸ್, ಬಂದಿಖಾನೆ ಮತ್ತು ನ್ಯಾಯಾಂಗ ರಕ್ಷಣಾ ಇಲಾಖೆಗಳನ್ನು ರೂಪಿಸಲಾಯಿತು. ಭೂಕಂದಾಯ, ಅಬಕಾರಿ, ಮುದ್ರಾಂಕ ಮತ್ತು ನೋಂದಣಿ ಆಡಳಿತಕ್ಕೆ ಪ್ರಮುಖ ಆದಾಯ ಮೂಲಗಳಾದವು. ಲೋಕೋಪಯೋಗಿ ಇಲಾಖೆಯನ್ನು ಸರ್ಕಾರದ ಒಂದು ಪ್ರಮುಖ ಘಟಕವಾಗಿ ಸ್ಥಾಪಿಸಲಾಯಿತು. ಜನರ ಸಾಮಾಜಿಕ ಮತ್ತು ಆರ್ಥಿಕ

ಸುಧಾರಣೆಗೆ ಹಂತಹಂತವಾದ ಉಪಕ್ರಮಕ್ಕೆ ಕೃಷಿ, ಶಿಕ್ಷಣ, ಸಾರ್ವಜನಿಕ ಆರೋಗ್ಯ, ಕೈಗಾರಿಕೆ ಮತ್ತು ವಾಣಿಜ್ಯ, ಸಹಕಾರ ಇತ್ಯಾದಿ ಅಭಿವೃದ್ಧಿ ಇಲಾಖೆಗಳ ಸ್ಥಾಪನೆಯಾಯಿತು. ಹೆಚ್ಚುತ್ತಿರುವ ಮಹತ್ವದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ದೊರೆತ ಬಳಿಕ ಜನತೆಯ ಸರ್ವಾಂಗೀಣ ಕಲ್ಯಾಣಕ್ಕೆ ತ್ವರಿತ ಚಾಲನೆ ನೀಡಲು ಹಲವು ಸರಣಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಯಿತು.

ಬ್ರಿಟಿಷ್ ಕಮಿಷನರ್ ಆಡಳಿತದಲ್ಲಿ ೧೮೬೨ರಲ್ಲಿ ರಾಜ್ಯದಲ್ಲಿ ಎಂಟು ಜಿಲ್ಲೆಗಳಿದ್ದು ಅವುಗಳಲ್ಲಿ ತುಮಕೂರು ಜಿಲ್ಲೆಯೂ ಒಂದಾಗಿತ್ತು. ಒಟ್ಟು ಎಂಟು ಜಿಲ್ಲೆಗಳು ಮತ್ತು ಮೂರು ವಿಭಾಗಗಳು ಇದ್ದವು. ಪ್ರತಿ ವಿಭಾಗಕ್ಕೂ ಸೂಪರಿಂಟೆಂಡೆಂಟ್ ಮತ್ತು ಪ್ರತಿ ಜಿಲ್ಲೆಗೂ ಡೆಪ್ಯುಟಿ ಸೂಪರಿಂಟೆಂಡೆಂಟ್ ಇರುತ್ತಿದ್ದರು. ೧೮೭೯ರಲ್ಲಿ ಆದ ಬದಲಾವಣೆಯಲ್ಲಿ ವಿಭಾಗೀಯ ಕಮಿಷನರ್ ಹುದ್ದೆಗಳನ್ನು ರದ್ದುಗೊಳಿಸಿ ರಾಜ್ಯಕ್ಕೆ ಒಂದು ಮುಖ್ಯ ಕಮಿಷನರ್ ಹುದ್ದೆಯನ್ನು ಸೃಜಿಸಲಾಯಿತು. ಜಿಲ್ಲಾಧಿಕಾರಿಗಳು ಜಿಲ್ಲೆಗಳಿಗೆ, ಅಸಿಸ್ಟೆಂಟ್ ಕಮಿಷನರ್ ಉಪವಿಭಾಗಗಳ ಹಾಗೂ ಅಮಲ್ದಾರ್ ತಾಲೂಕುಗಳ ಉಸ್ತುವಾರಿ ಅಧಿಕಾರಿಗಳನ್ನಾಗಿ ಮಾಡಲಾಯಿತು. ೧೮೬೩ರಲ್ಲಿ ಚಿತ್ರದುರ್ಗ ವಿಭಾಗ ಇದ್ದದ್ದು ಜಿಲ್ಲೆಯಾಯಿತು. ತುಮಕೂರು ಜಿಲ್ಲೆಯು ಹೊಸದಾಗಿ ಆದ ನಂದಿದುರ್ಗ ವಿಭಾಗಕ್ಕೆ ಸೇರಿತು. ೧೮೬೬ರಲ್ಲಿ ಶಿರಾ ತಾಲೂಕನ್ನು ಚಿತ್ರದುರ್ಗ ಜಿಲ್ಲೆಯಿಂದ ತುಮಕೂರಿಗೆ ವರ್ಗಾಯಿಸಲಾಯಿತು. ೧೮೭೯ರಲ್ಲಿ ಎಲ್ಲಾ ವಿಭಾಗಗಳೂ ರದ್ದಾದವು. ಚಿತ್ರದುರ್ಗ ಜಿಲ್ಲೆ ೧೮೮೨ರಲ್ಲಿ ಉಪವಿಭಾಗದ ಬದಲು ತುಮಕೂರು ಜಿಲ್ಲೆಗೆ ಸೇರಿತು. ಹುಳಿಯಾರು ಚಿತ್ರದುರ್ಗ ಜಿಲ್ಲೆ ಬೂದಿಹಾಳ್ ತಾಲೂಕಿನ ಕೇಂದ್ರಸ್ಥಾನವಾಗಿತ್ತು. ೧೮೮೬ರಲ್ಲಿ ಮುಖ್ಯಪಟ್ಟಣ ಹಾಗೂ ಉಪ ತಾಲೂಕಾಗಿದ್ದು, ನಂತರ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ವಿಲೀನಗೊಳಿಸಲಾಯಿತು.

೧೮೭೦–೧೮೮೨ರಲ್ಲಿ ಮೊದಲ ಸರ್ವೆ ಅಸೆಸ್‌ಮೆಂಟ್ ಸಮಯದಲ್ಲಿ, ತುಮಕೂರು ಜಿಲ್ಲೆ ಶಿರಾ, ತುಮಕೂರು, ಮದ್ದಗಿರಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ಹೊನ್ನವಳ್ಳಿ, ಕುಣಿಗಲ್ ಮತ್ತು ಕಡಬಾ ತಾಲೂಕುಗಳನ್ನೊಳಗೊಂಡಿತ್ತು. ೧೮೮೧–೮೨ರಲ್ಲಿ ಕೊರಟಗೆರೆ ತಾಲೂಕು ೩೩೦ ಹಳ್ಳಿಗಳನ್ನೊಳಗೊಂಡಿದ್ದು, ಅದನ್ನು ಒಡೆದು ಉಪತಾಲೂಕನ್ನಾಗಿ ಮಾಡಿ (೧೪೦ ಹಳ್ಳಿಗಳೊಂದಿಗೆ) ಮಧುಗಿರಿ ತಾಲೂಕಿಗೆ ಸೇರಿಸಲಾಯಿತು. ಉಳಿದ ೧೯೦ ಗ್ರಾಮಗಳನ್ನು ಶಿರಾ ಹಾಗೂ ತುಮಕೂರು ತಾಲೂಕುಗಳಿಗೂ, ಬೆಂಗಳೂರು ಜಿಲ್ಲೆಯ ನೆಲಮಂಗಲ, ದೊಡ್ಡಬಳ್ಳಾಪುರ ತಾಲೂಕುಗಳಿಗೂ ಮತ್ತು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕುಗಳಿಗೂ ಸೇರಿಸಲಾಯಿತು. ತುರುವೇಕೆರೆಯು ಕಡಬಾ ತಾಲೂಕಿನಿಂದ ತಿಪಟೂರು ತಾಲೂಕಿಗೆ ಸೇರಿದ ಉಪತಾಲೂಕಾಯಿತು. ಈಗಿನ ಗುಬ್ಬಿ ತಾಲೂಕು ಹಿಂದೆ ಕಡಬಾ ತಾಲೂಕಿಗೆ ಸೇರಿದ್ದು, ತಿಪಟೂರು ತಾಲೂಕನ್ನು ೧೮೮೬ರವರೆಗೂ ಹೊನ್ನವಳ್ಳಿ ತಾಲೂಕೆಂದು ಕರೆಯಲಾಗುತ್ತಿತ್ತು.

೧೯೧೫ರಲ್ಲಿ ಜಿಲ್ಲೆಯಲ್ಲಿ ಎರಡು ಉಪವಿಭಾಗಗಳು, ಎಂಟು ತಾಲೂಕು ಮತ್ತು ಎರಡು ಉಪ ತಾಲೂಕುಗಳಿದ್ದವು. ತುಮಕೂರು ಮತ್ತು ಕುಣಿಗಲ್ ತಾಲೂಕುಗಳು ನೇರವಾಗಿ ಜಿಲ್ಲಾಧಿಕಾರಿಗಳ ಆಡಳಿತಕ್ಕೆ ಒಳಪಟ್ಟಿದ್ದವು. ಮದ್ದಗಿರಿ, ಶಿರಾ, ಪಾವಗಡ ಮತ್ತು ಕೊರಟಗೆರೆ ಉಪತಾಲೂಕುಗಳನ್ನು ಮಧುಗಿರಿ ಉಪವಿಭಾಗಕ್ಕೆ ಸೇರಿಸಿ ಗುಬ್ಬಿ, ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ ತಾಲೂಕು ಹಾಗೂ ತುರುವೇಕೆರೆ ಉಪ ತಾಲೂಕುಗಳು ಗುಬ್ಬಿ ಉಪವಿಭಾಗಕ್ಕೆ ಸೇರಿಸಲ್ಪಟ್ಟಿತ್ತು. ೧೯೨೭ರಲ್ಲಿ ಮದ್ದಗಿರಿಯು ಮಧುಗಿರಿ ಎಂಬುದಾಗಿ ಮರುನಾಮಕರಣವಾಯಿತು. ೧೯೨೮ರಲ್ಲಿ ಉಪತಾಲೂಕಾಗಿದ್ದ ಕೊರಟಗೆರೆ ತಾಲೂಕಾಯಿತು. ೧೯೩೮ರಲ್ಲಿ ತುರುವೇಕೆರೆ ತಾಲೂಕಾಯಿತು. ಗುಬ್ಬಿ ಉಪವಿಭಾಗವನ್ನು ರದ್ದುಗೊಳಿಸಿ ತುಮಕೂರು ಉಪವಿಭಾಗಕ್ಕೆ ಸೇರಿಸಿ ತಿಪಟೂರು, ತುರುವೇಕೆರೆ ಮತ್ತು ಚಿಕ್ಕನಾಯಕನಹಳ್ಳಿ ಸೇರಿ (ಗುಬ್ಬಿ ಉಪವಿಭಾಗ ತಿಪಟೂರು) ತಿಪಟೂರು ಉಪವಿಭಾಗಕ್ಕೆ ಸೇರಿಸಲಾಯಿತು.

ಬೆಂಗಳೂರು ವಲಯದಲ್ಲಿದ್ದ ನಾಲ್ಕು ಜಿಲ್ಲೆಗಳಲ್ಲಿ ತುಮಕೂರು ಸಹ ಒಂದಾಗಿದ್ದು, ಬೆಂಗಳೂರು, ಕೋಲಾರ ಮತ್ತು ಚಿತ್ರದುರ್ಗ ಉಳಿದ ಮೂರು ಜಿಲ್ಲೆಗಳಾಗಿದ್ದವು. ನಂತರ ಬೆಂಗಳೂರು ನಗರ, ದಾವಣಗೆರೆ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಶಿವಮೊಗ್ಗ ಜಿಲ್ಲೆಗಳು ಸೇರಲ್ಪಟ್ಟವು. ತುಮಕೂರು ಜಿಲ್ಲೆಯಲ್ಲಿ ೧೦ ಕಂದಾಯ ತಾಲೂಕುಗಳಿವೆ. ಆಡಳಿತಾತ್ಮಕ ಅನುಕೂಲತೆಗಾಗಿ ಈ ೧೦ ತಾಲೂಕುಗಳನ್ನು ಮೂರು ಕಂದಾಯ ಉಪ ವಿಭಾಗಗಳಾಗಿ ವಿಂಗಡಿಸಲಾಗಿದ್ದು, ತುಮಕೂರು, ತಿಪಟೂರು ಮತ್ತು ಮಧುಗಿರಿ ಮೂರು ಉಪ ವಿಭಾಗಗಳ ಕೇಂದ್ರ ಸ್ಥಾನಗಳಾಗಿವೆ. ಉಪವಿಭಾಗಗಳಲ್ಲಿ ಸೇರಿರುವ ತಾಲೂಕುಗಳು ಈ ಕೆಳಕಂಡಂತಿವೆ. ೧. ತುಮಕೂರು ಉಪ ವಿಭಾಗ – ತುಮಕೂರು, ಗುಬ್ಬಿ ಮತ್ತು ಕುಣಿಗಲ್

ತಾಲೂಕುಗಳು, ೨. ತಿಪಟೂರು ಉಪ ವಿಭಾಗ – ತಿಪಟೂರು, ಚಿಕ್ಕನಾಯಕನಹಳ್ಳಿ ಮತ್ತು ತುರುವೇಕೆರೆ ತಾಲೂಕುಗಳು, ೩. ಮಧುಗಿರಿ ಉಪ ವಿಭಾಗ – ಮಧುಗಿರಿ, ಶಿರಾ, ಕೊರಟಗೆರೆ ಮತ್ತು ಪಾವಗಡ ತಾಲೂಕುಗಳು. ಈ ಹತ್ತೂ ತಾಲೂಕುಗಳನ್ನು ಮತ್ತೆ ಹೋಬಳಿಗಳಾಗಿ ವಿಭಾಗಿಸಲಾಗಿದೆ. ಈ ಹೋಬಳಿಗಳು ಹಲವು ಗ್ರಾಮಗಳನ್ನು ಒಳಗೊಂಡಿವೆ. (ವಿವರಗಳಿಗೆ ಅಧ್ಯಾಯ–೧ ನೋಡಿ).

## ವಿಭಾಗಾಧಿಕಾರಿಗಳು: ಪ್ರಾದೇಶಿಕ ಆಯುಕ್ತರು

ಕರ್ನಾಟಕ ಏಕೀಕರಣವಾದ ದಿನದಿಂದಲೇ ಹೊಸ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಯಿತು (೧ನೇ ನವೆಂಬರ್ ೧೯೫೬). ಸರ್ಕಾರದ ಆದೇಶ ಸಂಖ್ಯೆ ಎಸ್‌ಎಸ್೪೮೧೭–೯೧೭/ಎಸ್‌ಆರ್‌ಡಿ ೨–೫೬.೨ ದಿನಾಂಕ ೨೪ನೇ ಅಕ್ಟೋಬರ್, ೧೯೫೬, ವಿಭಾಗೀಯ ಆಯುಕ್ತರನ್ನು ನೇರವಾಗಿ ಕಂದಾಯ ಮತ್ತು ಸ್ಥಳೀಯ ಸ್ವಯಮಾಧಿಕಾರ ಇಲಾಖೆಗಳ ಆಡಳಿತ, ಶಾಂತಿ ಸುವ್ಯವಸ್ಥೆ ಮತ್ತು ಅಭಿವೃದ್ಧಿ ಚಟುವಟಿಕೆಗಳ ಸಮನ್ವಯ ಕಾರ್ಯಗಳಿಗೆ ಜವಾಬ್ದಾರರನ್ನಾಗಿ ಮಾಡಲಾಯಿತು. ಕರ್ನಾಟಕ ಭೂಕಂದಾಯ ಅಧಿನಿಯಮ ೧೯೬೪ರ ಕಲಂ೭(೨)ರ ಪ್ರಕಾರ, ಸರಕಾರದ ನಿಯಂತ್ರಣಕ್ಕೊಳಪಟ್ಟು, ವಿಭಾಗಾಧಿಕಾರಿಯು ತನ್ನ ವಿಭಾಗದ ಪ್ರಮುಖ ಕಂದಾಯಾಧಿಕಾರಿಯಾಗಿದ್ದರು ಮತ್ತು ವಿಭಾಗದ ವ್ಯಾಪ್ತಿಯಲ್ಲಿ ಅವರಿಗೆ ಅಧೀನರಾಗಿರುವ ಎಲ್ಲಾ ಅಧಿಕಾರಿಗಳ ಮೇಲೆ ಅಧೀಕ್ಷಕರ ಅಧಿಕಾರ ಚಲಾಯಿಸಬಲ್ಲವರಾಗಿದ್ದರು.

ವಿಭಾಗಾಧಿಕಾರಿಯು ವಿಭಾಗೀಯ ಮಟ್ಟದಲ್ಲಿನ ಎಲ್ಲಾ ಇಲಾಖೆಗಳ ಮುಖ್ಯ ಸಮನ್ವಯಾಧಿಕಾರಿಯಾಗಿದ್ದರು. ವಿಭಾಗಾಧಿಕಾರಿಯಾಗಿ ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಮಾಡಲಾದ ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದು, ಪೌರಾಡಳಿತ, ರಾಷ್ಟ್ರೀಯ ವಿಸ್ತರಣಾ ಸೇವಾ ಘಟಕಗಳು, ತಾಲೂಕು ಅಭಿವೃದ್ಧಿ ಮಂಡಳಿ, ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಶಿಫಾರಸ್ಸುಗಳು ಮುಂತಾದವುಗಳೆಲ್ಲಾ ಅವರ ಮೂಲಕವೇ ಸರ್ಕಾರಕ್ಕೆ ಕಳುಹಿಸಲಾಗುತ್ತಿತ್ತು. ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳಲ್ಲಿ ಮೇಲ್ಮನವಿ ಪ್ರಾಧಿಕಾರ ಹೊಂದಿದ್ದರು. ಅನೇಕ ವಿಷಯಗಳಲ್ಲಿ ಯೋಜನೆ, ಕಾಮಗಾರಿಗಳಿಗೆ ಮಂಜೂರಾತಿ ನೀಡುವ ಅಧಿಕಾರ ಅವರಿಗಿತ್ತು. ಅವರ ವಿಭಾಗದಲ್ಲಿ ಬರುವ ಎಲ್ಲಾ ಕಂದಾಯ ಇಲಾಖೆಯ ಕಛೇರಿಗಳ ತಪಾಸಣೆಯನ್ನು ನಡೆಸುವ ಜವಾಬ್ದಾರಿ ವಿಭಾಗಾಧಿಕಾರಿಯದಾಗಿತ್ತು. ಅವರು ಜಿಲ್ಲಾಧಿಕಾರಿಗಳಿಗೆ, ಯೋಜನಾಧಿಕಾರಿಗಳಿಗೆ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಸಮುದಾಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಿ ಮುನ್ನಡೆವ ಬಗ್ಗೆ ಸಲಹೆ–ಸೂಚನೆಗಳನ್ನು ನೀಡುತ್ತಿದ್ದರು. ತಹಸೀಲ್ದಾರ, ಅಭಿವೃದ್ಧಿ ಅಧಿಕಾರಿ ಮುಂತಾದ ಕಂದಾಯ ಇಲಾಖೆಯ ಅಧಿಕಾರಿಗಳ ನೇಮಕಾತಿ, ತೈನಾತಿ ಮತ್ತು ರಜೆ ಮಂಜೂರಾತಿ ಮುಂತಾದ ವಿಷಯಗಳು ವಿಭಾಗೀಯ ಆಯುಕ್ತರ ಜವಾಬ್ದಾರಿಗಳಾಗಿದ್ದವು. ಅವರ ವಿಭಾಗದ ಎಲ್ಲಾ ಸರಕಾರಿ ಇಲಾಖೆಗಳ ಕೆಲಸಗಳಲ್ಲಿ ಅಂತರ ಇಲಾಖಾ ಸಮನ್ವಯ ತರಲು ಪ್ರತಿ ಮೂರು ತಿಂಗಳಿಗೊಮ್ಮೆ ಸಮನ್ವಯ ಸಮಿತಿಯ ಸಭೆಯನ್ನು ಕರೆಯುತ್ತಿದ್ದರು. ಅಂತಹ ಸಭೆಗಳಲ್ಲಿ ಬೇರೆ ಬೇರೆ ಇಲಾಖೆಗಳ ಕೆಲಸಕಾರ್ಯಗಳಲ್ಲಿ ದೀರ್ಘಕಾಲದಿಂದ ವಿಲೇವಾರಿಯಾಗದೆ ಇರುವ ವಿಷಯಗಳನ್ನು ಜಾಗ್ರತೆಯಾಗಿ ತೀರ್ಮಾನಿಸಿ ಪೂರ್ಣಗೊಳಿಸಲು ಪ್ರಯತ್ನ ಮಾಡಲಾಗುತ್ತಿತ್ತು. ವಿಭಾಗೀಯ ಆಯುಕ್ತರಿಗೆ ಸಾಮಾನ್ಯವಾಗಿ ಕಂದಾಯ ಮತ್ತು ಕಾರ್ಯಗಳನ್ನು ಗಮನಿಸುವ ಇಬ್ಬರು ಪತ್ರಾಂಕಿತ ಸಹಾಯಕ ಅಧಿಕಾರಿಗಳು ಮತ್ತು ಪತ್ರಾಂಕಿತ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬಂದಿ ಆಡಳಿತ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರು.

ವಿಭಾಗಾಧಿಕಾರಿಗಳು ಈ ಹಿಂದೆ ಸಂವಿಧಾನಾತ್ಮಕವಾಗಿ ಮೇಲ್ಮನವಿ ಮತ್ತು ಪುನರ್ ಪರಿಶೀಲನೆ (Appeal and re-vision) ಪ್ರಾಧಿಕಾರಿಯಾಗಿ ಈ ಮುಂದೆ ಕಾಣಿಸಿರುವ ನಿಯಮ–ಅಧಿನಿಯಮಗಳಡಿ ಅಧಿಕಾರವನ್ನು ಚಲಾಯಿಸುತ್ತಿದ್ದರು.

೧) ಭಾರತೀಯ ವಿಸ್ಫೋಟಕಗಳ ಅಧಿನಿಯಮ, ೧೯೪೦,

೨) ಭಾರತೀಯ ಆಯುಧ ಅಧಿನಿಯಮ, ೧೯೫೯.

೩) ಕರ್ನಾಟಕ ಸಿನೆಮಾ (ವಿನಿಯಮನ) ಅಧಿನಿಯಮ, ೧೯೬೪ ಮತ್ತು ಸಿನಿಮ್ಯಾಟೋಗ್ರಾಫಿಕ್ ಅಧಿನಿಯಮ.

೪) ಕರ್ನಾಟಕ ಎಕ್ಸಿಬಿಷನ್ ಆಫ್ ಫಿಲ್ಮ್ಸ್ ಅಂಡ್ ಟಿ.ವಿ. ಸ್ಕ್ರೀನ್ ಥ್ರೂ ವಿ.ಸಿ.ಆರ್. (ವಿನಿಯಮನ) ಅಧಿನಿಯಮ, ೧೯೮೪

೫) ಕರ್ನಾಟಕ ನೀರಾವರಿ ಅಧಿನಿಯಮ, ೧೯೬೫.

೬) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, ೧೯೯೯

೭) ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪

೮) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧

೯) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, ೧೯೬೯

೧೦) ಕರ್ನಾಟಕ ಪೌರಸಭೆಗಳ ಅಧಿನಿಯಮ, ೧೯೬೪

೧೧) ಕರ್ನಾಟಕ ಇನಾಮುಗಳು ಮತ್ತು ನಿರ್ದಿಷ್ಟ ಇನಾಮುಗಳ ರದ್ಧತಿ ಅಧಿನಿಯಮ (೧೯೫೪,೧೯೫೫,೧೯೭೭)

೧೨) ಕರ್ನಾಟಕ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ, ಮೀಸಲಾತಿ, ಇತ್ಯಾದಿ) ಅಧಿನಿಯಮ, ೧೯೯೩.

೧೩) ಕರ್ನಾಟಕ ಭೂ ಸ್ವಾಧೀನ ಅಧಿನಿಯಮ, ೧೯೬೧

೧೪) ಕರ್ನಾಟಕ ನಾಗರೀಕ ಸೇವೆಗಳ ನಿಯಮಗಳು, ೧೯೫೭

೧೫) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿಗಳ ಅಧಿನಿಯಮ, ೧೯೯೭

೧೬) ಕರ್ನಾಟಕ ಟ್ರೆಝರ್ ಟ್ರೋವ್(ಗುಪ್ತ ನಿಧಿ) ಅಧಿನಿಯಮ,

೧೭) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, ೧೯೯೩

೧೮) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, ೧೯೭೪ ಇನ್ನೂ ಮುಂತಾದವು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ನಾಲ್ಕು ವಿಭಾಗಾಧಿಕಾರಿಗಳ ಕಛೇರಿಗಳನ್ನು ರದ್ದುಗೊಳಿಸಲಾಯಿತು. ಆದರೆ, ಜಿಲ್ಲೆ, ಉಪವಿಭಾಗ ಮತ್ತು ತಾಲೂಕುಮಟ್ಟದ ಉಸ್ತುವಾರಿ ಹಾಗೂ ಆಡಳಿತಾತ್ಮಕ ನಿಯಂತ್ರಣ ಪ್ರಾಧಿಕಾರವನ್ನು ಸೃಷ್ಟಿಸುವ ಪರ್ಯಾಯ ವ್ಯವಸ್ಥೆಯನ್ನು ಮಾಡಲಿಲ್ಲವಾದ್ದರಿಂದ ಆಡಳಿತದಲ್ಲಿ ಕೆಳಕಂಡ ಪ್ರತಿಕೂಲ ಪರಿಣಾಮಗಳು ಸಂಭವಿಸಿದವು.

ಅ) ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಆಡಳಿತಾತ್ಮಕ ನಿಯಂತ್ರಣವು ಕ್ರಮವಾಗಿ ಹತೋಟಿ ತಪ್ಪುತ್ತಿತ್ತು.

ಆ) ವಿಭಾಗ ಮಟ್ಟದಲ್ಲಿ ನಿಯಂತ್ರಣಾಧಿಕಾರಿಯಾಗಿದ್ದ ವಿಭಾಗಾಧಿಕಾರಿಗಳು ವಿವಿಧ ಅಧಿನಿಯಮಗಳು ಮತ್ತು ನಿಯಮಗಳಡಿಯಲ್ಲಿ ನ್ಯಾಯಿಕ ಸ್ವರೂಪದ ಪ್ರಾಧಿಕಾರಿಗಳಾಗಿದ್ದರು. ವಿಭಾಗೀಯ ಕಛೇರಿಗಳ ರದ್ಧತಿಯಿಂದಾಗಿ, ಆ ಕಾರ್ಯಗಳು ವಿಶೇಷವಾಗಿ ಬಾಧಿತವಾಗಿ ಅತೀ ಹೆಚ್ಚಿನ ಪ್ರಕರಣಗಳು ಬಾಕಿ ಉಳಿಯುವಂತಾಯಿತು.

ಇ) ಮೇಲೆ ಪಟ್ಟಿ ಮಾಡಿರುವ ಅಧಿನಿಯಮ–ನಿಯಮಗಳಡಿಯಲ್ಲಿ ಬರತಕ್ಕ ಪ್ರಕರಣಗಳನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕಾರಕ್ಕೆ ವರ್ಗಾಯಿಸಿದ್ದು. ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ.

ಈ) ವಿಭಾಗ ಮಟ್ಟದಲ್ಲಿ ಈ ಹಿಂದೆ ಪರಿಶೀಲಿಸಲಾಗುತ್ತಿದ್ದ ಹಲವಾರು ವಿಷಯಗಳನ್ನು/ಪ್ರಕರಣಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಬೇಕಾದ ಅಗತ್ಯ ಉಂಟಾಯಿತು. ಹೀಗೆ ಸರ್ಕಾರದ ಮಟ್ಟದಲ್ಲಿ ಸಂಭವಿಸಿರುವ ಹೆಚ್ಚುವರಿ ಕಾರ್ಯಬಾಹುಳ್ಯತೆ ಮತ್ತು ಒತ್ತಡವನ್ನು ನಿವಾರಿಸಿಕೊಳ್ಳಲು ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿಗಳಲ್ಲಿ ಮರಳಿ ಸ್ಥಾಪಿಸಲು ಕರ್ನಾಟಕ ಸಚಿವ ಸಂಪುಟವು ತನ್ನ ದಿನಾಂಕ ೧೯–೦೮–೨೦೦೫ ರಂದು ನಡೆದ ಸಭೆಯಲ್ಲಿ ಅಂಗೀಕರಿಸಿತು. ಅದು ಹೊಸ ಪ್ರಾದೇಶಿಕ ಆಯುಕ್ತರುಗಳು ಕಂದಾಯ ಇಲಾಖೆಯ ಕಾರ್ಯಕ್ರಮಗಳ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳ ಮೇಲುಸ್ತುವಾರಿಯನ್ನು ಕೂಡ ಮಾಡಬೇಕೆಂದು ತೀರ್ಮಾನಿಸಿತು.

ಈ ತೀರ್ಮಾನದ ಪ್ರಕಾರ ಕಂ.ಇ–೯ ಬಿ.ಎಂ.ಎಂ.೨೦೦೬ ದಿನಾಂಕ ೮–೯–೨೦೦೫ರಂತೆ ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿಗಳಲ್ಲಿ ಸಹಾಯಕ ಸಿಬ್ಬಂದಿ ಸಹಿತ

ಸ್ಥಾಪನೆ ಮಾಡಿ ರಾಜ್ಯ ಸರಕಾರವು ಆದೇಶ ಹೊರಡಿಸಿತು. ಬೆಂಗಳೂರು ಪ್ರಾದೇಶಿಕ ಆಯುಕ್ತರು ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಕೋಲಾರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿರುತ್ತಾರೆ. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಅಧೀನರಾಗಿ ಕಾರ್ಯನಿರ್ವಹಿಸುವರು.

**ಪ್ರಾದೇಶಿಕ ಆಯುಕ್ತರ ಕಛೇರಿಗಳು ಈ ಕೆಳಕಾಣಿಸಿರುವ ಕಾರ್ಯಗಳನ್ನು ನಿರ್ವಹಿಸುತ್ತವೆ**

೧. ಸಿಬ್ಬಂದಿಗಳ ನಿರ್ವಹಣೆ, ಅಭಿವೃದ್ಧಿ, ತರಬೇತಿ ಮತ್ತು ಕಂದಾಯ ಇಲಾಖೆಯ ಮಾನವ ಸಂಪನ್ಮೂಲದ ಇತರ ವಿಷಯಗಳು.

೨. ಜಿಲ್ಲೆ, ಉಪವಿಭಾಗ, ತಾಲೂಕು, ಹೋಬಳಿ ಮತ್ತು ಗ್ರಾಮಮಟ್ಟದ ಕಂದಾಯದ ಲೆಕ್ಕ ಮತ್ತು ಲೆಕ್ಕ ಪರಿಶೋಧನೆಗಳ ನಿರ್ವಹಣೆ ಹಾಗೂ ವಾರ್ಷಿಕ ತಪಾಸಣೆ, ಅನಿರೀಕ್ಷಿತ ತಪಾಸಣೆ ಹಾಗೂ ಪರಿಶೀಲನೆ ಮತ್ತು ವಾರ್ಷಿಕ ಕಡ್ಡಾಯ ಜಮಾಬಂದಿ ನಡೆಸುವುದು.

೩. ಈ ಹಿಂದೆ ವಿಭಾಗಾಧಿಕಾರಿಗಳು ವಿವಿಧ ನಿಯಮ–ಅಧಿನಿಯಮಗಳಡಿಯಲ್ಲಿ ಚಲಾಯಿಸುತ್ತಿದ್ದ ಶಾಸನಬದ್ಧ (ಮೇಲ್ಮನವಿ ಮತ್ತು ಪುನರಾವಲೋಕನ) ಅಧಿಕಾರ.

೪. ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಭೂಮಾಪನ ಮತ್ತು ಭೂದಾಖಲೆಗಳ ಕಾರ್ಯ, ಮುಜರಾಯಿ ಕಛೇರಿಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿದ ಕೆಲಸಗಳ ಮೇಲುಸ್ತುವಾರಿ ಅಧಿಕಾರ.

೫. ಅಧೀನ ಕಛೇರಿಗಳಲ್ಲಿ ಕಾನೂನುಬದ್ಧವಾಗಿ, ಸರಕಾರದ ಸೂಚನೆಗಳು/ ಆಜ್ಞೆಗಳ ಪ್ರಕಾರ ಮತ್ತು ಸ್ಥಾಯೀ ಆದೇಶಗಳನ್ವಯ ಕೆಲಸ–ಕಾರ್ಯಗಳ ನಿರ್ವಹಣೆಯಾಗುತ್ತಿರುವ ಕುರಿತು ತಪಾಸಣೆ ಮಾಡುವುದು.

೬. ನೈಸರ್ಗಿಕ ವಿಕೋಪ ಹಾಗೂ ಬರ ಪರಿಹಾರ ವಿಷಯಗಳ ಮೇಲ್ವಿಚಾರಣೆ, ನಿಯಂತ್ರಣ ಮತ್ತು ಬೆಳೆ ಕಟಾವು ಪ್ರಯೋಗ ಮತ್ತು ಭೂ ಕಂದಾಯ ಮಾಫಿ ಕಾರ್ಯಗಳ ಅಧಿಕಾರ.

೭. ರಾಜ್ಯದಲ್ಲಿನ ಎಲ್ಲಾ ರೀತಿಯ ಚುನಾವಣೆಗಳ ಮೇಲ್ವಿಚಾರಣೆ.

೮. ಭೂ ಮಂಜೂರಾತಿ, ಭೂ ಸ್ವಾಧೀನ, ಭೂ ಸುಧಾರಣೆ, ಭೂ ಕಂದಾಯ ವಸೂಲಿ, ಭೂ ಮಾಪನ ಮತ್ತು ಕಂದಾಯ ಇಲಾಖೆಯ ಗಣಕೀಕರಣ ಕಾರ್ಯಗಳ ಮೇಲುಸ್ತುವಾರಿ.

೯. ಜಿಲ್ಲೆ, ಉಪವಿಭಾಗ ಮತ್ತು ತಾಲೂಕು ಕಛೇರಿಗಳಿಗೆ ಹಣಕಾಸು ಬಿಡುಗಡೆ, ವಾರ್ಷಿಕ ಆಯವ್ಯಯ ತಯಾರಿಕೆ, ಶಾಸನ ಸಭೆಗಳ ಪ್ರಶ್ನೆಗಳಿಗೆ ಉತ್ತರಿಸುವುದು, ಶಾಸಕಾಂಗದ ಉಪಸಮಿತಿಗಳಿಗೆ ವರದಿ ಸಲ್ಲಿಸುವುದು ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಗತಿ ಪರಿಶೀಲನೆ ಮಾಡುವುದು.

೧೦. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರಕಾರಿ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಿಂಗಳಿಗೊಮ್ಮೆಯಾದರೂ ವಿಮರ್ಶಿಸುವುದು ಮತ್ತು ಪರಿಶೀಲಿಸುವುದು.

೧೧. ಆರ್ಥಿಕ ಮತ್ತು ಭೌತಿಕ ಗುರಿ ಸಾಧಿಸುವಲ್ಲಿ ಕೊರತೆಯಾದಾಗ ಕಾರಣಗಳನ್ನು ಪತ್ತೆ ಹಚ್ಚಿ ಸಕಾಲಿಕ ಪರಿಹಾರೋಪಾಯಗಳನ್ನು ಸೂಚಿಸಿ ಅದರಂತೆ ಕ್ರಮ ಜರುಗಿಸುವುದು. ಅಂತಹ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಗಳ ಮುಖ್ಯಸ್ಥರು, ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಜರುಗಿಸುವುದು.

ನಾಲ್ಕು ಪ್ರಾದೇಶಿಕ ಕಛೇರಿಗಳಿಗೆ ಭಾರತೀಯ ಆಡಳಿತ ಸೇವೆ (ಐ.ಎ.ಎಸ್) ಹಿರಿಯ ವೇತನ ಶ್ರೇಣಿ (ಸೂಪರ್‌ಟೈಮ್ ಸ್ಕೇಲ್) ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಪ್ರಾದೇಶಿಕ ಆಯುಕ್ತರ ಪ್ರಕಾರ್ಯಗಳಲ್ಲಿ ನೆರವಾಗಲು ಇಬ್ಬರು ಹಿರಿಯ ವೇತನ ಶ್ರೇಣಿ (ಸೂಪರ್‌ಟೈಮ್ ಸ್ಕೇಲ್) ಅಧಿಕಾರಿಗಳಿರುತ್ತಾರೆ. ಅವರುಗಳೆಂದರೆ, (ಅ) ಹೆಚ್ಚುವರಿ ಆಯುಕ್ತರು (ಕಂದಾಯ ಆಡಳಿತ); ಮತ್ತು ಹೆಚ್ಚುವರಿ ಆಯುಕ್ತರು (ಭೂ ನಿರ್ವಹಣೆ, ಯೋಜನೆಗಳು ಮತ್ತು ಇನ್ನಿತರೆ ವಿಷಯಗಳು). ಇವರಲ್ಲದೆ ಅಗತ್ಯ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗವನ್ನು ಸಹ ಸೃಷ್ಟಿಸಿ ಪ್ರಾದೇಶಿಕ ಕಛೇರಿಗಳಿಗೆ ನೀಡಲಾಗಿದೆ.

## ಜಿಲ್ಲಾಧಿಕಾರಿ (ಡೆಪ್ಯುಟಿ ಕಮಿಷನರ್)

ಜಿಲ್ಲೆಯು ಆಡಳಿತದ ಅತ್ಯಂತ ಮಹತ್ವದ ಘಟಕವಾದರೆ, ಜಿಲ್ಲಾಧಿಕಾರಿಯು ಅದರ ಅತ್ಯಂತ ನಿರ್ಣಾಯಕ ವ್ಯಕ್ತಿಯಾಗಿರುತ್ತಾನೆ. ಬ್ರಿಟಿಷ್ ಆಡಳಿತದ ಪ್ರಾರಂಭದ ದಿನಗಳಿಂದ ಅವಳಿ ಸರಕಾರ (Dyarchy) ಕಾಲ (೧೯೨೧–೩೨) ದವರೆಗೆ ಜಿಲ್ಲಾಧಿಕಾರಿಯೊಬ್ಬನೇ ಜಿಲ್ಲಾ ಆಡಳಿತದ ಮುಖ್ಯಸ್ಥನಾಗಿದ್ದನು. ಅವಳಿ ಸರಕಾರದ ಅವಧಿಯು ಅವನ ಸತ್ವ ಪರೀಕ್ಷೆಯ ಕಾಲವಾಗಿತ್ತು. ಸಂಪರ್ಕ ಸಾಧನಗಳ ಅತ್ಯದ್ಭುತ ಬೆಳವಣಿಗೆ, ಶೈಕ್ಷಣಿಕ ಅಭಿವೃದ್ಧಿ, ಪತ್ರಿಕೋದ್ಯಮದ ಏಳಿಗೆ, ಸ್ಥಾನಿಕ ಆಡಳಿತ ಸಂಸ್ಥೆಗಳ ಪ್ರಾರಂಭ ಮತ್ತು ತಾಂತ್ರಿಕ ವಿಭಾಗಗಳ ಅಭಿವೃದ್ಧಿ, ಜಿಲ್ಲಾಧಿಕಾರಿಯ ಸ್ಥಾನಮಾನದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದವು. ಜಿಲ್ಲಾಧಿಕಾರಿಯ ಮುಖ್ಯ ಗಮನವು ೧೯೩೭ರ ತನಕ ಸಾರ್ವಜನಿಕ ಶಾಂತಿ ಸುವ್ಯವಸ್ಥೆ, ಕಂದಾಯ ಸಂಗ್ರಹಣೆ, ತ್ವರಿತ ನ್ಯಾಯದಾನ, ಭೂದಾಖಲೆಗಳ ವ್ಯವಸ್ಥೆ ಮತ್ತು ನಿರ್ವಹಣೆ ಮುಂತಾದ ವಿಷಯಗಳ ಮೇಲೆ ಕೇಂದ್ರೀಕೃತವಾಗಿತ್ತು. ಅವನ ಕಾರ್ಯಕ್ಷೇತ್ರವು ೧೯೩೫ರಿಂದ ವಿಸ್ತರಿಸಿ ಗ್ರಾಮೀಣಾಭಿವೃದ್ಧಿ, ಸಹಕಾರ ಚಳವಳಿಯ ಪ್ರಗತಿ ಮತ್ತು ಗ್ರಾಮಪಂಚಾಯತಿಗಳನ್ನು ಆವರಿಸಿತು. ದ್ವಿತೀಯ ಜಾಗತಿಕ ಯುದ್ಧ ಸೃಷ್ಟಿಸಿದ ಸಮಸ್ಯೆಗಳು ಜಿಲ್ಲಾಧಿಕಾರಿಯ ಕರ್ತವ್ಯಗಳು, ಪ್ರಕಾರ್ಯಗಳ ವ್ಯಾಪ್ತಿ ಮತ್ತು ವಿವಿಧತೆಯನ್ನು ಮತ್ತಷ್ಟು ವಿಸ್ತರಿಸಿದವು. ಭಾರತವು ಪರತಂತ್ರದಿಂದ ಬಿಡುಗಡೆ ಸಾಧಿಸಿದ ನಂತರ ಎದುರಿಸಬೇಕಾಗಿ ಬಂದ ಸಮಸ್ಯೆಗಳು ಜಿಲ್ಲಾಧಿಕಾರಿಯ ಕಾರ್ಯಭಾರವನ್ನು ಮತ್ತಷ್ಟು ಹೆಚ್ಚಿಸಿದವು. ೧೯೫೨ ರಿಂದ ಆರಂಭವಾದ ಆರ್ಥಿಕ ಮತ್ತು ಸಾಮಾಜಿಕಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ೧೯೫೯ರಲ್ಲಿ ಚಾಲನೆಗೊಂಡ ಪಂಚಾಯತ್‌ರಾಜ್ ಪದ್ಧತಿಯು ಜಿಲ್ಲಾಧಿಕಾರಿಯ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಹೊಸ ಭಾಷ್ಯವನ್ನೇ ಬರೆದವು. ಕಂದಾಯ ಸಂಗ್ರಹ, ಶಾಂತಿ ಸುವ್ಯವಸ್ಥೆ ಸ್ವಲ್ಪ ಸ್ವಲ್ಪವಾಗಿ ಹಿಂದೆಗೆದು ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿ, ಸಮಾಜ ಸೇವೆ ಕಾರ್ಯಗಳು ಜಿಲ್ಲಾಧಿಕಾರಿಯ ಆದ್ಯತಾ ವಿಷಯಗಳಾಗಿ ಹೊರಹೊಮ್ಮಿದವು. ಸ್ಥೂಲವಾಗಿ ಜಿಲ್ಲಾಧಿಕಾರಿಯು ಕೆಳಕಾಣಿಸಿರುವ ಸಾಮಾನ್ಯ ಕರ್ತವ್ಯಗಳನ್ನು ನಿರ್ವಹಿಸುವರು.

**ಜಿಲ್ಲಾಧಿಕಾರಿಯ ಸಾಮಾನ್ಯ ಕರ್ತವ್ಯಗಳು:** ೧) ನ್ಯಾಯಾಂಗ ದಂಡಾಧಿಕಾರತ್ವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು; ೨) ಸರ್ಕಾರಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಸಾರ್ವಜನಿಕ ದೂರು ಮತ್ತು ಮನವಿಗಳ ನಿರ್ವಹಣೆ; ೩) ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ; ೪) ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು; ೫) ಜನಗಣತಿ, ಜಾನುವಾರು ಗಣತಿ, ಕೃಷಿ ಗಣತಿಯೇ ಮುಂತಾದ ಗಣತಿ ಕಾರ್ಯಗಳನ್ನು ನಡೆಸುವುದು; ೬) ಎಲ್ಲಾ ಔಪಚಾರಿಕ ಸಮಾರಂಭಗಳಲ್ಲಿ ಜಿಲ್ಲಾ ಮಟ್ಟದಲ್ಲಿ ರಾಜ್ಯದ ಪರವಾಗಿ ಶಿಷ್ಟಾಚಾರ ಕಾರ್ಯ ನಿರ್ವಹಣೆ; ೭) ಪ್ರಕೃತಿ ವಿಕೋಪ ನಿರ್ವಹಣೆ, ನೈಸರ್ಗಿಕ ಮತ್ತು ಅನೈಸರ್ಗಿಕ ವಿಕೋಪಗಳಿಂದ ಬಾಧಿತರಾದವರಿಗೆ ಪರಿಹಾರ, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾರ್ಯ ನಿರ್ವಹಣೆ; ೮) ವೃದ್ಧಾಪ್ಯ ವೇತನ ಮತ್ತಿತರ ಸಾಮಾಜಿಕ ಸುರಕ್ಷತೆ ಯೋಜನೆಗಳ ನಿರ್ವಹಣೆ; ೯) ಜನನ, ಮರಣ ಮತ್ತು ವಿವಾಹಗಳ ನೋಂದಣಿ; ೧೦) ಆದಾಯ, ಜಾತಿ, ಧರ್ಮ, ನಿವಾಸ, ರಾಷ್ಟ್ರೀಯತೆ, ಅಲ್ಪಸಂಖ್ಯಾತರ ಸ್ಥಾನಮಾನ ಇತ್ಯಾದಿಗಳ ಬಗ್ಗೆ ಪ್ರಮಾಣ ಪತ್ರ ನೀಡಿಕೆ; ೧೧) ಗುಪ್ತ ನಿಧಿ ನಿಯಂತ್ರಣ; ೧೨) ಮೋಟಾರು ವಾಹನಗಳ ಅಧಿನಿಯಮದಡಿಯಲ್ಲಿ ಜಿಲ್ಲಾಮಟ್ಟದಲ್ಲಿ ಸಾರಿಗೆ ವಿಷಯಗಳ ನಿರ್ವಹಣೆ; ೧೩) ಜಿಲ್ಲಾ ಮಟ್ಟದ ಎಲ್ಲಾ ನ್ಯಾಯಾಲಯಗಳಲ್ಲಿ ಸರ್ಕಾರಿ ವ್ಯಾಜ್ಯ ನಿರ್ವಹಣೆ; ೧೪) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ (ಗ್ರಾಮೀಣಾಭಿವೃದ್ಧಿ ಹೊರತು ಪಡಿಸಿ) ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಸಮನ್ವಯ ಹಾಗೂ ಪರಿವೀಕ್ಷಣೆ ಕಾರ್ಯ ನಿರ್ವಹಣೆ; ೧೫) ಜಿಲ್ಲಾ ಆಡಳಿತದಡಿ ಬರುವ ಇತರೆ ಇಲಾಖೆಗಳಾದ ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಪುರಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆ ಇವಕ್ಕೆಲ್ಲಾ ಪ್ರತ್ಯೇಕ ಅಧಿಕಾರಿಗಳಿದ್ದರೂ, ಜಿಲ್ಲಾ ಮಟ್ಟದಲ್ಲಿ ಈ ಇಲಾಖೆಗಳ ಕಾರ್ಯನಿರ್ವಹಣೆಯ ಹೊಣೆಗಾರಿಕೆ ಜಿಲ್ಲಾಧಿಕಾರಿಯದಾಗಿದೆ.

**ಜಿಲ್ಲಾಧಿಕಾರಿಗಳ ಕಂದಾಯ ಆಡಳಿತದ ಕರ್ತವ್ಯಗಳು:** ಜಿಲ್ಲೆಯಲ್ಲಿಯ ಭೂ ದಾಖಲೆಗಳ ನಿರ್ವಹಣೆ ಮತ್ತು ಜಮೀನುಗಳ ಮಾಪನ; ೨) ಭೂಕಂದಾಯ, ನೀರು ತೆರಿಗೆ, ಮತ್ತಿತರ ಸರ್ಕಾರಿ ಬಾಕಿ, ಉಪಕರಗಳು ಮತ್ತು ತೆರಿಗೆಗಳ ವಸೂಲಾತಿ; ೩) ಗ್ರಾಮಠಾಣ, ಗೋಮಾಳ, ಗುಂಡು ತೋಪು, ಕೆರೆ ಅಂಗಳ, ಉಪವನಗಳು ಮುಂತಾದ ಸಾಮುದಾಯಿಕ ಜಮೀನುಗಳೂ ಸೇರಿದಂತೆ ಎಲ್ಲಾ ಸರ್ಕಾರಿ ಜಮೀನುಗಳ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ; ೪) ಭೂ ಮಂಜೂರಾತಿ; ೫) ಭೂ

ಸುಧಾರಣೆ ಮತ್ತು ಗೇಣಿದಾರಿಕೆಯ ನಿಬಂಧನೆಗಳ ನಿರ್ವಹಣೆ; ೬) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜಮೀನು ರಕ್ಷಣೆ; ೭) ಭೂ ಪರಿವರ್ತನೆ; ೮) ಸ್ಥಿರಾಸ್ತಿಗಳ ಮೇಲಿನ ಬಾಡಿಗೆ ನಿಯಂತ್ರಣ; ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವುದು; ೯) ಸ್ಥಿರಾಸ್ತಿಗಳ ವ್ಯವಹಾರ, ಉಯಿಲು, ಒಪ್ಪಂದ ಮುಂತಾದವುಗಳ ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳ ವಸೂಲಾತಿ; ಮತ್ತು ಹಿಂದೂ ಧಾರ್ಮಿಕ ಸ್ಥಳಗಳ ನಿಯಂತ್ರಣ ಮತ್ತು ಅಭಿವೃದ್ಧಿ.

ಜಿಲ್ಲಾಧಿಕಾರಿಯವರು ಈ ಕೆಳಕಾಣಿಸಿರುವ ಮುಖ್ಯವಾದ ಅಧಿನಿಯಮಗಳಡಿ ದತ್ತವಾಗಿರುವ ಅಧಿಕಾರಗಳನ್ನು ತಮ್ಮ ವಿವಿಧ ಕರ್ತವ್ಯಗಳ ನಿರ್ವಹಣೆ ಸಂಬಂಧ ಚಲಾಯಿಸುವರು.

೧) ಭಾರತೀಯ ಸ್ಫೋಟಕಗಳ ಅಧಿನಿಯಮ, ೧೯೪೦

೨) ಭಾರತೀಯ ಶಸ್ತ್ರಾಸ್ತ್ರಗಳ ಅಧಿನಿಯಮ, ೧೯೫೫

೩) ಭಾರತೀಯ ಪೆಟ್ರೋಲಿಯಂ ಅಧಿನಿಯಮ,

೪) ಭಾರತೀಯ ಪಾಲುಗಾರಿಕೆ ಅಧಿನಿಯಮ, ೧೯೩೨

೫) ಕರ್ನಾಟಕ ಸಿನೆಮಾ (ರೆಗ್ಯುಲೇಷನ್) ಅಧಿನಿಯಮ, ೧೯೫೪

೬) ಕರ್ನಾಟಕ ವಿಸಿಪಿ ಮೂಲಕ ಟೆಲಿವಿಷನ್ ಪರದೆ ಮೇಲೆ ಚಲನಚಿತ್ರ ಪ್ರದರ್ಶನ ಅಧಿನಿಯಮ, ೧೯೮೪.

೭) ಕರ್ನಾಟಕ ನೀರಾವರಿ ಅಧಿನಿಯಮ ೧೯೬೫

೮) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, ೧೯೬೧

೯) ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪

೧೦) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧

೧೧) ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ, ೧೯೬೯

೧೨) ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, ೧೯೬೪

೧೩) ನೈಸರ್ಗಿಕ ವಿಕೋಪ ನಿರ್ವಹಣೆ ಪ್ರಾಧಿಕಾರ ಅಧಿನಿಯಮ.

೧೪) ಕರ್ನಾಟಕ ಭೂ ಸ್ವಾಧೀನ ಅಧಿನಿಯಮ, ೧೯೬೧

೧೫) ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಧರ್ಮದತ್ತಿಗಳ ಅಧಿನಿಯಮ ೧೯೯೭

೧೬) ಕರ್ನಾಟಕ ಗುಪ್ತ ನಿಧಿ ಅಧಿನಿಯಮ, ೧೯೬೨

೧೭) ಕರ್ನಾಟಕ ಮುದ್ರಾಂಕಗಳ ಅಧಿನಿಯಮ,೧೯೫೭

೧೮) ಕರ್ನಾಟಕ ಜಿಲ್ಲಾಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಅಧಿನಿಯಮ, ೧೯೯೩

೧೯) ಕರ್ನಾಟಕ ಕೃಷಿ ಸಾಲ ಅಧಿನಿಯಮ

೨೦) ಮೋಟಾರು ವಾಹನಗಳ ಅಧಿನಿಯಮ, ೧೯೩೯

೨೧) ರಿಜಿಸ್ಟ್ರೇಷನ್ ಅಧಿನಿಯಮ, ೧೯೦೮

೨೨) ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ

೨೩) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ,

೨೪) ಭಾರತೀಯ ದಂಡ ಸಂಹಿತೆ ಶಾಂತಿಪಾಲನೆ, ಸಾರ್ವಜನಿಕ ದಂಡಸಂಹಿತೆ ಪ್ರಕ್ರಿಯಾ ಉಪದ್ರವಗಳು ಮತ್ತು ಇತರೆ ವಿಷಯಗಳು  ಕಾರ್ಯಕಾರಿ ದಂಡಾಧಿಕಾರಿಗಳಿಗೆ ಸಂಬಂಧಿಸಿದಂತಿರುವ)

೨೫) ಭಾರತೀಯ ಪಾಲುದಾರಿಕೆ ಅಧಿನಿಯಮ, ೧೯೩೨

೨೬) ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು (ನಿರ್ದಿಷ್ಟ ಜಮೀನುಗಳ ವರ್ಗಾವಣೆ ತಡೆ) ಅಧಿನಿಯಮ, ೧೯೭೮.

೨೭) ಪಾಸ್‌ಪೋರ್ಟ್ ಅಧಿನಿಯಮ ೧೯೬೭

೨೮) ಭಿಕ್ಷಾವೃತ್ತಿ ನಿಷೇಧ ಅಧಿನಿಯಮ ೧೯೭೫

೨೯) ಜೀತಪದ್ಧತಿ ನಿರ್ಮೂಲನಾ ಅಧಿನಿಯಮ ೧೯೭೬

೩೦) ಇನಾಂ ರದ್ದಿಯಾತಿ ಅಧಿನಿಯಮಗಳು ಇತ್ಯಾದಿ.,

ಕಂದಾಯ ವಿವಾದಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯು ಬಹುಮಟ್ಟಿನ ನ್ಯಾಯಿಕ ಕರ್ತವ್ಯಗಳನ್ನು ನಿರ್ವಹಿಸುವರು. ಅವರು ಜಿಲ್ಲೆಯ ಕಾರ್ಯಕಾರಿ ನ್ಯಾಯಾಧೀಶರಾಗಿರುವ ಕಾರಣ ಕಾಯ್ದೆ ಮತ್ತು ಸುವ್ಯವಸ್ಥೆಗೆ ಜವಾಬ್ದಾರರಾಗಿರುತ್ತಾರೆ. ಉಪ ವಿಭಾಗೀಯ ಮತ್ತು ತಾಲೂಕು ಕಾರ್ಯಕಾರಿ ನ್ಯಾಯಾಧೀಶರುಗಳ ಮೇಲಧಿಕಾ- ರಿಯೂ ಆಗಿರುತ್ತಾರೆ. ಕಾನೂನು ಸುವ್ಯವಸ್ಥೆ ನಿರ್ವಹಣೆ ಸಂಬಂಧದಲ್ಲಿ ಪೋಲೀಸ್ ಬಲದ ಮೇಲೆ ಸಹ ಇವರಿಗೆ ನಿಯಂತ್ರಣ ಇರುತ್ತದೆ; ಅಲ್ಲದೆ, ಸೆರೆಮನೆಗಳು ಮತ್ತು ಬಂದೀಖಾನೆಗಳ ನಿರ್ವಹಣೆ ಸಂಬಂಧ ಇವರಿಗೆ ಮೇಲುಸ್ತುವಾರಿ ಅಧಿಕಾರವಿರುತ್ತದೆ. ಜಿಲ್ಲಾ ದಂಡಾಧಿಕಾರಿಯಾಗಿರುವ ಕಾರಣದಿಂದ ಜಿಲ್ಲಾಧಿಕಾರಿಗೆ ಭಾರತೀಯ ಶಸ್ತ್ರಾಸ್ತ್ರ ಅಧಿನಿಯಮ ಮತ್ತು ಭಾರತೀಯ ಸಿಡಿಮದ್ದುಗಳ ಅಧಿನಿಯಮ ಪ್ರಕಾರ ಲೈಸನ್ಸುಗಳು ಮತ್ತು ಪರವಾನಗಿಗಳನ್ನು ವಿತರಿಸುವ ಅಧಿಕಾರ ಇರುತ್ತದೆ. ಕರ್ನಾಟಕ ಸಿನಿಮಾಟೋಗ್ರಾಪ್ ಅಧಿನಿಯಮ ಪ್ರಕಾರ ಲೈಸನ್ಸು ನೀಡುವ ಪ್ರಾಧಿಕಾರವಾಗಿರುತ್ತಾರೆ.

ಜಿಲ್ಲಾಧಿಕಾರಿಯು ಉಪ ಅಭಿವೃದ್ಧಿ ಆಯುಕ್ತರೂ ಆಗಿರುವುದರಿಂದ ಜಿಲ್ಲೆಯ ಸಮುದಾಯ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಮೇಲುಸ್ತುವಾರಿ ನಡೆಸುವರು. ಜಿಲ್ಲೆಯಲ್ಲಿರುವ ಅನೇಕ ಇಲಾಖೆಗಳ ತರಹೇವಾರಿ ಅಭಿವೃದ್ಧಿ ಚಟುವಟಿಕೆಗಳ ಮಾರ್ಗದರ್ಶಿತ್ವ ಮತ್ತು ಸಮನ್ವಯ ಕಾರ್ಯಗಳನ್ನು ಜಿಲ್ಲಾ ಅಭಿವೃದ್ಧಿ ಮಂಡಳಿಯ ಪದನಿಮಿತ್ತ (ಎಕ್ಸ್-ಅಫಿಷಿಯೊ) ಅಧ್ಯಕ್ಷರ ಸ್ಥಾನದಿಂದ ನಿರ್ವಹಿಸುವರು. ಹಲವು ಪ್ರಕಾರದ ಕರ್ತವ್ಯ ನಿರ್ವಹಣೆಯಲ್ಲಿ ಜಿಲ್ಲಾಧಿಕಾರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವ ಅಧಿಕಾರಿ ಸಿಬ್ಬಂದಿಯಲ್ಲಿ ಹಿಂದೆ ಕೇಂದ್ರ ಸ್ಥಾನಿಕ ಸಹಾಯಕ, ಅಪರ ಜಿಲ್ಲಾಧಿಕಾರಿ, ಕಛೇರಿ ಸಹಾಯಕ, ಆಹಾರ ವಸ್ತುಗಳ ಸಹಾಯಕ, ಮುಜರಾಯಿ ಸಹಾಯಕ, ಭೂದಾಖಲೆಗಳ ಸಹಾಯಕ, ಯೋಜನಾ ನಿರ್ದೇಶಕರು; ಜಿಲ್ಲಾ ನಗರಾಭಿವೃದ್ಧಿ ಕೋಶ, ಮುಂತಾದವರಿರುತ್ತಾರೆ.

### ಸಹಾಯಕ ಆಯುಕ್ತರು (ಅಸಿಸ್ಟೆಂಟ್ ಕಮಿಷನರ್)

ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರರ ನಡುವಿನ ಸಂಪರ್ಕದ ಕೊಂಡಿಯಾಗಿ ಸಹಾಯಕ ಆಯುಕ್ತರು ಕಾರ್ಯ ನಿರ್ವಹಿಸುತ್ತಾರೆ. ಇವರು ಕಂದಾಯ ಆಡಳಿತ ಮತ್ತು ದಂಡಾಧಿಕಾರಗಳೆರಡನ್ನೂ ಚಲಾಯಿಸುತ್ತಾರೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ತಹಸೀಲ್ದಾರರು ನೀಡುವ ಆದೇಶಗಳ ಮೇಲ್ಮನವಿ ಪ್ರಾಧಿಕಾರವಾಗಿ ಸಹಾಯಕ ಆಯುಕ್ತರು ಇರುತ್ತಾರೆ. ಭೂ ಕಂದಾಯ ಕಾಯ್ದೆಯಡಿ ಜಿಲ್ಲಾಧಿಕಾರಿಯವರಿಂದ ದತ್ತವಾಗುವ ಅಧಿಕಾರಗಳನ್ನು ಇವರು ಚಲಾಯಿಸುವರು. ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ನೆಯ ಕಲಂಗಳಲ್ಲಿ ಮತ್ತು ಇನ್ನುಳಿದ ರಾಜ್ಯ ಕಾಯ್ದೆಗಳಲ್ಲಿ ಜಿಲ್ಲಾಧಿಕಾರಿಗೆ ಕೊಡಮಾಡಿರುವ ಅಧಿಕಾರಗಳಲ್ಲಿ ಹಲವನ್ನು ಉಪವಿಭಾಗದ ಸಹಾಯಕ ಆಯುಕ್ತರಿಗೂ ವಿಸ್ತರಿಸಲಾಗಿದೆ. ಸಹಾಯಕ ಆಯುಕ್ತರು ಭೂ ಸ್ವಾಧೀನ ಅಧಿಕಾರಿಯಾಗಿ ಮತ್ತು ಅಭಿವೃದ್ಧಿ ತೆರಿಗೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುವರು. ಕರ್ನಾಟಕ ಭೂ ಸುಧಾರಣಾ ಅಧಿನಿಯಮದ (೧೯೬೧) ಅಡಿಯಲ್ಲಿ ಇವರು ತಾಲೂಕು ಮತ್ತು ಉಪವಿಭಾಗದ ಟ್ರಿಬ್ಯುನಲ್‌ಗಳ ಅಧ್ಯಕ್ಷರೂ ಆಗಿರುತ್ತಾರೆ. ಇವರ ಬಹುಮುಖ್ಯ ಕಾರ್ಯಗಳೆಂದರೆ- ತಹಸೀಲ್ದಾರರು, ಕಂದಾಯ ನಿರೀಕ್ಷಕರು ಮತ್ತು ಗ್ರಾಮಾಧಿಕಾರಿಗಳ ಕೆಲಸಕಾರ್ಯಗಳ ಮೇಲುಸ್ತುವಾರಿಯನ್ನು ಆಗಿಂದಾಗ್ಗೆ ತಪಾಸಣೆ ನಡೆಸುವ ಮೂಲಕ ಪರಿಶೀಲನೆ ಹಾಗೂ ಭೂ ಕಬಳಿಕೆ ಮುಂತಾದವುಗಳನ್ನು ಪತ್ತೆಹಚ್ಚಿ ಸರ್ಕಾರದ ಹಿತಾಸಕ್ತಿಗಳ ರಕ್ಷಣೆ ಮಾಡುವುದು. ತಹಸೀಲ್ದಾರರು ನೀಡುವ ಆದೇಶಗಳನ್ನು ಪ್ರಶ್ನಿಸಿ ಸಲ್ಲಿಸಲಾಗುವ ಮೇಲ್ಮನವಿಗಳನ್ನು ಆಲಿಸುವುದು ಮತ್ತು ಭೂಸ್ವಾಧೀನ ಸಂಬಂಧದ ಮೊಕದ್ದಮೆಗಳ ವಿಲೇವಾರಿ, ವಾರ್ಷಿಕ ಜಮಾಬಂದಿ ನಡೆಸುವುದು. ಬೆಳೆಗಳು ಮತ್ತು ಗಡಿ ಗುರುತುಗಳ ಪರಿವೀಕ್ಷಣೆ ಕಾರ್ಯ, ಹಕ್ಕು ದಾಖಲಾತಿಯ ತಪಾಸಣೆ (ಭೂಮಿ, 'ಇ' ಆಡಳಿತ) ಭೂ ಕಂದಾಯ ವಸೂಲಾತಿ, ಅಭಿವೃದ್ಧಿ ತೆರಿಗೆ ಸಂಗ್ರಹ ಮತ್ತು ತಕಾವಿ/ಸರ್ಕಾರಿ ಸಾಲಗಳ ಮರುಪಾವತಿ ಕಾರ್ಯಗಳ ಮೇಲುಸ್ತುವಾರಿ ಮುಂತಾದವು.

ಇವರು ಉಪವಿಭಾಗದ ದಂಡಾಧಿಕಾರಿಯಾಗಿದ್ದು, ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ನೀಡಲಾಗಿರುವ ಅನೇಕ

ಅಧಿಕಾರಗಳನ್ನು ಚಲಾಯಿಸುವರು. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಯ ರಕ್ಷಣೆ, ಸಾರ್ವಜನಿಕ ಶಾಂತಿ ಭಂಗ ಸಂಭವವೆಂದು ಕಂಡುಬಂದಾಗ ಪ್ರತಿಬಂಧಕಾತ್ಮಕ ಕ್ರಮಗಳನ್ನು ಆದೇಶಿಸುವುದು ಮುಂತಾದವು. ತಮ್ಮ ಉಪವಿಭಾಗದ ವ್ಯಾಪ್ತಿಯಲ್ಲಿ ಕಾಯ್ದೆ ಸುವ್ಯವಸ್ಥೆ ಪರಿಸ್ಥಿತಿ ಕುರಿತಂತೆ ಜಿಲ್ಲಾಧಿಕಾರಿಗೆ ಆಗಿಂದಾಗ್ಗೆ ವರದಿ ಮಾಡುವ ಜವಾಬ್ದಾರಿ ಇವರದೇ ಆಗಿದೆ. ಅವರ ಉಪವಿಭಾಗಕ್ಕೆ ಸಂಬಂಧಿಸಿದ ಒಂದು ಅಥವಾ ಹೆಚ್ಚಿನ ರಾಜ್ಯ ಶಾಸಕಾಂಗದ ಚುನಾವಣಾ ಕ್ಷೇತ್ರದ ನಿರ್ವಚನಾಧಿಕಾರಿಯಾಗಿಯೂ ಸಹಾಯಕ ಆಯುಕ್ತರು ಕಾರ್ಯನಿರ್ವಹಿಸಬೇಕು.

ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ನೀಡಲು ಪ್ರಮಾಣ ಪತ್ರ ನೀಡುವಿಕೆ, ವಿದ್ಯುತ್ ದುರ್ಬಳಕೆ ತಡೆಗಟ್ಟುವುದು, ಕಸ್ಟೋಡಿಯಲ್ ಡೆತ್, ಸೊಲೇಷಿಯಂ ಫಂಡ್‌ನಿಂದ ಪರಿಹಾರ ನೀಡುವಿಕೆ (Hit and Run case) ಮತೀಯ ಗಲಭೆಯ ಸಂತ್ರಸ್ಥರಿಗೆ ಪರಿಹಾರ, ಸಾಲ್ವೆನ್ಸಿ ಸರ್ಟಿಫಿಕೇಟ್ (ಎರಡು ಲಕ್ಷದವರೆಗೆ), ಜನನ ಮರಣ ದಾಖಲಾತಿ, ಆರಾಧನಾ ಯೋಜನೆ, ರಾಷ್ಟ್ರೀಯ ಕೌಟುಂಬಿಕ ನೆರವು ಯೋಜನೆ, ಭೂ ಕಂದಾಯ ಕಾಯ್ದೆ ಕಲಂ ೯೪ ಎಬಿಸಿ ಕೆಳಗೆ ಸಕ್ರಮೀಕರಣ, ಭೂ ಪರಿವರ್ತನೆ, ಸಾರ್ವಜನಿಕ ಉಪದ್ರವ ನಿವಾರಣೆ, ಪಡಿತರ ಚೀಟಿ, ಪಡಿತರ ಸಾಮಾಗ್ರಿಗಳ ಸಮರ್ಪಕ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಅನುಷ್ಠಾನದಲ್ಲಿ ಕೆಳಗಿನ ಅಧಿಕಾರಿಗಳ ಕೆಲಸಗಳನ್ನು ಪರಿಶೀಲಿಸುವುದು, ಸಾರ್ವಜನಿಕ ನಿಗಾ ವಹಿಸುವುದು ಮತ್ತು ಮೇಲಿನ ಅಧಿಕಾರಿಗಳ ಕೆಲಸ ಕಾರ್ಯಗಳಲ್ಲಿ ಸಹಕರಿಸುವುದು ಮುಂತಾದ ಜವಾಬ್ದಾರಿ ಹೊಂದಿರುತ್ತಾರೆ.

**ತಹಸೀಲ್ದಾರರು**

ತಹಸೀಲ್ದಾರರು ಉಪವಿಭಾಗಾಧಿಕಾರಿಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ ಒಂದು ತಾಲೂಕಿನ ಮೇಲೆ ಅಧಿಕಾರ ಹೊಂದಿರುವ ಅಧಿಕಾರಿಯಾಗಿರುತ್ತಾರೆ. ತಮ್ಮ ಮೇಲಧಿಕಾರಿಯ ಮೂಲಕ ಜಿಲ್ಲಾಧಿಕಾರಿಗೆ ಜವಾಬ್ದಾರರಾಗಿರುವ ಇವರು ತಾಲೂಕಿನಲ್ಲಿ ಸರಕಾರದ ಪ್ರತಿನಿಧಿ ಎನಿಸಿಕೊಂಡಿರುತ್ತಾರೆ. ತಮ್ಮ ತಾಲೂಕಿನಲ್ಲಿ ಭೂ ಕಂದಾಯ ವಸೂಲಾತಿಗೆ ಜವಾಬ್ದಾರರಾದ ಇವರು ತಾಲೂಕು ಆಡಳಿತಕ್ಕೆ ಸಂಬಂಧಿಸಿದಂತೆ ಭೂಕಂದಾಯ ಅಧಿನಿಯಮ, ಭೂ ಸುಧಾರಣಾ ಅಧಿನಿಯಮ ಮುಂತಾದ ಕಾಯ್ದೆಗಳಡಿ ದತ್ತವಾಗಿರುವ ಅಧಿಕಾರದಡಿ ಅನೇಕ ಕರ್ತವ್ಯಗಳನ್ನು ನಿರ್ವಹಿಸುವರು. ಗ್ರಾಮಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರು ದಕ್ಷತೆ ಮತ್ತು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕಾದುದು ತಹಸೀಲ್ದಾರರ ಕರ್ತವ್ಯಗಳಲ್ಲೊಂದು. ಇವರು ಹಕ್ಕು ಬದಲಾವಣೆ, ವಿವಾದಾತ್ಮಕ ಮೊಕದ್ದಮೆಗಳ ಸಂಬಂಧ ಸೂಕ್ತ ಆದೇಶ ಅಥವಾ ತೀರ್ಪುಗಳನ್ನು ನೀಡಬೇಕು, ಬೆಳೆ ವಹಿಗಳನ್ನು ಪರಾಮರ್ಶಿಸಬೇಕು ಮತ್ತು ಗ್ರಾಮಠಾಣೆಗಳನ್ನು ತಪಾಸಿಸಬೇಕು. ಭೂ ಸುಧಾರಣಾ ಕಾಯ್ದೆಯ ಉಲ್ಲಂಘನೆ ಪ್ರಕರಣಗಳ ವಿರುದ್ಧ ಕ್ರಮ ಪ್ರಾರಂಭಿಸುವ ಜವಾಬ್ದಾರಿ ತಹಸೀಲ್ದಾರರದೇ ಆಗಿರುತ್ತದೆ; ಅಲ್ಲದೇ, ಭೂ ಅಭಿವೃದ್ಧಿಗಾಗಿ ಪಡೆದುಕೊಂಡ ಸಾಲಗಳಿಂದ ನಡೆಸಿರುವ ಕಾರ್ಯಗಳನ್ನು ಇವರೇ ತಪಾಸಣೆ ಮಾಡಬೇಕು. ತಾಲೂಕು ಮಟ್ಟದ ಸಮಸ್ಯೆಗಳಾದ ಸರ್ಕಾರಿ ಭೂಮಿ ಒತ್ತುವರಿ, ಭೂ ಕೃಷಿ ಭೂಮಿಗೆ ಮಂಜೂರಾದ ಸಾಲಗಳ ಮರುವಸೂಲಾತಿ, ಕಂದಾಯ, ನೀರಾವರಿ ಶುಲ್ಕ, ಪೋಟ್‌ಹಿಸ್ಸಾ ಅಳತೆ ವೆಚ್ಚ ಮುಂತಾದ ಸರ್ಕಾರಿ ಬಾಕಿಗಳ ವಸೂಲಾತಿ ಮುಂತಾದವನ್ನು ಇವರೇ ನಿರ್ವಹಿಸಬೇಕು. ಭೂ ಕಂದಾಯ ಅಧಿನಿಯಮ, ಭೂ ಸುಧಾರಣಾ ಅಧಿನಿಯಮ ಮತ್ತು ತಾಲೂಕಿನ ಆಡಳಿತ ಕುರಿತಾದ ನಿಯಮಗಳ ಜಾರಿ ಇವರಿಗೇ ಸೇರಿವೆ. ಆಹಾರ ಧಾನ್ಯ ಎತ್ತುವಳಿ (ಲೆವಿ), ನ್ಯಾಯ ಬೆಲೆ ಅಂಗಡಿಗಳ ಮೂಲಕ ಅಗತ್ಯವಸ್ತುಗಳ ಹಂಚಿಕೆ, ಅಗತ್ಯವಸ್ತುಗಳ ದಾಸ್ತಾನು ತನಿಖೆ ಇವರದೆ ಜವಾಬ್ದಾರಿ. ಅಗತ್ಯ ವಸ್ತುಗಳ ಅಧಿನಿಯಮ ಮತ್ತು ನಿಯಮಗಳಂತೆ ತಹಸೀಲ್ದಾರರಿಗೆ ಅನೇಕ ಅಧಿಕಾರ ಮತ್ತು ಜವಾಬ್ದಾರಿಗಳಿವೆ. ವೃದ್ಧರ ಪಿಂಚಣಿ, ವಿಧವೆಯರು ಮತ್ತು ಅಂಗವಿಕಲರಿಗೆ ಮಾಸಾಶನ ಮಂಜೂರಾತಿ ಅಧಿಕಾರ ಇವರಿಗೇ ಇದೆ. ಚುನಾವಣೆಗಳಿಗೆ ಸಂಬಂಧಿಸಿದಂತೆ ಇವರು ವಿಧಾನಸಭಾ ಕ್ಷೇತ್ರದ ಸಹಾಯಕ ನಿರ್ವಚನಾಧಿಕಾರಿ(ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್) ಯಾಗಿ ಕಾರ್ಯ ನಿರ್ವಹಿಸುವರು. ಮತದಾರರ ಪಟ್ಟಿ ತಯಾರಿಕೆ, ಪರಿಷ್ಕರಣೆ ಮತ್ತು ಚುನಾವಣಾ ಯಂತ್ರದ ಉಸ್ತುವಾರಿ ಇವರದೆ ಜವಾಬ್ದಾರಿಗಳಾಗಿವೆ. ಇವರು ತಾಲೂಕು ದಂಡಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುವರು. ಭೂ ನ್ಯಾಯಮಂಡಳಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವರು. ಜಾತಿ, ಆದಾಯ, ಮುಂತಾದ ಪ್ರಮಾಣಪತ್ರಗಳನ್ನು ಇವರೇ ನೀಡುವರು. ಜನನ-ಮರಣ, ರಾಷ್ಟ್ರೀಯತೆ ಮತ್ತು ಸಾಲ್ವೆನ್ಸಿ ಪ್ರಮಾಣಪತ್ರಗಳನ್ನು ನೀಡುವ ಅಧಿಕಾರವೂ ಇವರಿಗಿದೆ. ಕರ್ನಾಟಕ ಸಾಲ ವಿಮೋಚನೆ ಅಧಿನಿಯಮ, ಕರ್ನಾಟಕ ಮನರಂಜನಾ ಅಧಿನಿಯಮ, ಶಸ್ತ್ರಾಸ್ತ್ರ ಕಾಯ್ದೆ (೧೯೫೮) ಮತ್ತು ಶಸ್ತ್ರಾಸ್ತ್ರ ನಿಯಮಗಳು

ಮುಂತಾದ ಕಾಯ್ದೆಗಳನ್ನು ಜಾರಿಗೊಳಿಸುವುದು ಇವರ ಜವಾಬ್ದಾರಿ. ವಾರ್ಷಿಕ ಜಮಾಬಂದಿ ಕಾಲದಲ್ಲಿ ಎಲ್ಲಾ ಲೆಕ್ಕಪತ್ರಗಳನ್ನು ನಿಯಮಾನುಸಾರ ಸಿದ್ಧಗೊಳಿಸಿ ಒದಗಿಸಬೇಕಾದ್ದು ಇವರ ಕರ್ತವ್ಯವಾಗಿದೆ. ಭೂ ಕಂದಾಯ ಮಾಫಿ ಸಂಬಂಧ ತಹಸೀಲ್ದಾರರ ಪಾತ್ರ ಬಹಳ ಮುಖ್ಯವಾದುದು. ಸುಸ್ತಿದಾರರಿಂದ ಸರ್ಕಾರಿ ಬಾಕಿಗಳ ವಸೂಲಾತಿಗಾಗಿ ಅವರ ಆಸ್ತಿಪಾಸ್ತಿಗಳನ್ನು ವಿಲೇವಾರಿ ಮಾಡುವ ಅಧಿಕಾರ, ಭೂದಾಖಲೆಗಳ ನಿರ್ವಹಣೆ ಮತ್ತು ಮೋಜಣಿ ವ್ಯವಸ್ಥೆಗಳೆರಡೂ ತಹಸೀಲ್ದಾರರ ಕಾರ್ಯಭಾರದಲ್ಲಿವೆ. ಜಮೀನಿನ ಹಕ್ಕು ದಾಖಲೆಗಳನ್ನು ಕಾಲೋಚಿತಗೊಳಿಸುವುದು ಕೂಡ ಸೇರಿವೆ. ಸರ್ಕಾರದ ಆದೇಶ ಕಂ.ಇ.೨೯ ಎಂಪಿಎಸ್ ೨೦೦೨(ಭಾ-೧) ದಿನಾಂಕ ೩-೬-೨೦೧೧ರಂತೆ ತಹಸೀಲ್ದಾರ್ ಕಛೇರಿಯ ಒಂದು ಶಿರಸ್ತೇದಾರ್ ಹುದ್ದೆ ಉಪವಿಭಾಗಾಧಿಕಾರಿ ಕಛೇರಿಯ ವ್ಯವಸ್ಥಾಪಕ ಹುದ್ದೆಯನ್ನು 'ಬಿ'ಗ್ರೇಡ್ ತಹಸೀಲ್ದಾರ್ ಹುದ್ದೆಯಲ್ಲಿ ಮೇಲ್ದರ್ಜೆಗೇರಿಸಲಾಗಿದೆ.

## ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರ್)

ಪ್ರತಿಯೊಂದು ತಾಲೂಕು ಒಂದು ಸಮುದಾಯ ಅಭಿವೃದ್ಧಿ ಘಟಕವಾಗಿದೆ. ಇದಕ್ಕೆ ಓರ್ವ ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬಿ.ಡಿ.ಓ.) ಇದ್ದು ತಾಲೂಕಿನ ಎಲ್ಲಾ ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ ಮಾಡುತ್ತಾರೆ. ಮೊದಲು ತಾಲೂಕು ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಇವರು ತಾಲೂಕು ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಯೂ ಆಗಿದ್ದರು. ಈಗ ಪಂಚಾಯತ್ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯಂತೆ ಅಸ್ತಿತ್ವಕ್ಕೆ ಬಂದಿರುವ ತಾಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ. ಆದರೆ ಏಪ್ರಿಲ್ ೧, ೧೯೮೭ರಿಂದ ಇವರ ಕಂದಾಯ ಪ್ರಕಾರ್ಯಗಳನ್ನು ಹಿಂತೆಗೆದುಕೊಳ್ಳಲಾಗಿದ್ದು ತಾಲೂಕು ಪಂಚಾಯತ್ ಉಸ್ತುವಾರಿಯಲ್ಲಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಇವರ ಮುಖ್ಯ ಕರ್ತವ್ಯವಾಗಿದೆ. ಇವರಿಗೆ ನೆರವಾಗಲು ಓರ್ವ ವ್ಯವಸ್ಥಾಪಕ ಮತ್ತು ಇತರೆ ಸಿಬ್ಬಂದಿ ಇರುತ್ತಾರೆ.

## ಶಿರಸ್ತೇದಾರ

ಪ್ರತಿಯೊಂದು ತಾಲೂಕಿನಲ್ಲಿ ತಹಸೀಲ್ದಾರರಿಗೆ ಸಹಾಯಕರಾಗಿ ಶಿರಸ್ತೇದಾರ ಅಥವಾ ಉಪ ತಹಸೀಲ್ದಾರರ ನೇಮಕವಾಗಿರುತ್ತದೆ. ಕರ್ನಾಟಕ ಭೂ ಕಂದಾಯ ನಿಯಮಾವಳಿ, ೧೯೬೬, ಪ್ರಕಾರ ಶಿರಸ್ತೇದಾರ ಅಥವಾ ತತ್ಸಮಾನ ಅಥವಾ ಹೆಚ್ಚಿನ ಅಧಿಕಾರವುಳ್ಳ ಇಲಾಖೆಯ ಬೇರೆ ಅಧಿಕಾರಿಯು ಹಕ್ಕು ದಾಖಲೆಗಳ ತಯಾರಿಕೆ ಮತ್ತು ನಿರ್ವಹಣೆ ಸಂಬಂಧ ಉಂಟಾಗುವ ವಿವಾದಗಳನ್ನು ಆಲಿಸಿ ಸೂಕ್ತ ಆದೇಶಗಳನ್ನು ನೀಡಬಹುದಾಗಿದೆ. ನಾಡಕಛೇರಿಯ ಕಾರ್ಯಭಾರ ಇರುವ ಶಿರಸ್ತೇದಾರರು ಕರ್ನಾಟಕ ಭೂ ಕಂದಾಯ ನಿಯಮಾವಳಿ, ೧೯೬೬ ಯ ೯೪ನೇ ಕಲಂನ ಅಡಿಯಲ್ಲಿ ಸರ್ಕಾರಿ ಜಮೀನಿನ ಅನಧಿಕೃತ ಸ್ವಾಧೀನಾನುಭವದ ಮೊಕದ್ದೆಮಗಳನ್ನು ವಿಲೇವಾರಿ ಮಾಡುವ ಅಧಿಕಾರವನ್ನು ಪಡೆದಿರುತ್ತಾರೆ. ಇತ್ತೀಚೆಗೆ ಗಣಕೀಕರಣ ಕಾರ್ಯದ ಮೇಲ್ವಿಚಾರಣೆ, ಹಕ್ಕು ಬದಲಾವಣೆ ಸಂಬಂಧಿತ ಆದೇಶಗಳ ನಮೂದು ಮಾಡುವುದು ಮುಂತಾದ ಪ್ರಕಾರ್ಯಗಳು ಇವರ ಕರ್ತವ್ಯ ವ್ಯಾಪ್ತಿಗೆ ಸೇರಿವೆ. ತಾಲೂಕು ಶಿರಸ್ತೇದಾರ್, ಹಕ್ಕು ದಾಖಲೆ ಶಿರಸ್ತೇದಾರ್, ಚುನಾವಣಾ ಶಿರಸ್ತೇದಾರ್, ಸಂಧ್ಯಾ ಸುರಕ್ಷಾ ಯೋಜನೆ ಶಿರಸ್ತೇದಾರ್ ಹಾಗೂ ಹೆಚ್ಚುವರಿ ಶಿರಸ್ತೇದಾರ್ ಎಂಬುದಾಗಿ ಐದು ಜನ ಶಿರಸ್ತೇದಾರರಿದ್ದು, ಇತ್ತೀಚಿನ ಆದೇಶದಂತೆ ಒಂದು ಹುದ್ದೆಯನ್ನು ಗ್ರೇಡ್-೨ ತಹಶೀಲ್ದಾರ್ ದರ್ಜೆಗೇರಿಸಿದೆ.

## ನಾಡಕಛೇರಿ

ಆಡಳಿತವನ್ನು ವಿಕೇಂದ್ರೀಕರಿಸುವ ನಿಟ್ಟಿನಲ್ಲಿ ಪ್ರಾಯೋಗಿಕವಾಗಿ ಪ್ರತೀ ತಾಲೂಕಿನ ಆಯ್ದ ಹೋಬಳಿ ಕೇಂದ್ರದಲ್ಲಿ ಆಗಸ್ಟ್ ೧೫, ೧೯೮೬ ರಿಂದ ನಾಡಕಛೇರಿಯನ್ನು ತೆರೆಯಲಾಯಿತು. ನಾಡಕಛೇರಿಯ ಮುಖ್ಯಸ್ಥರಾಗಿ ಓರ್ವ ಶಿರಸ್ತೇದಾರ ಅಥವಾ ಉಪ ತಹಸೀಲ್ದಾರನಿರುತ್ತಾನೆ. ಇವರಿಗೆ ತಾಲೂಕು ಮಟ್ಟದಲ್ಲಿ ತಹಸೀಲ್ದಾರರು ಚಲಾಯಿಸುತ್ತಿದ್ದ ಅಧಿಕಾರಗಳನ್ನು ಪ್ರತಿ ನಿಯುಕ್ತಿಗೊಳಿಸುವ ಮೂಲಕ ಹೋಬಳಿಯ ಮಟ್ಟದಲ್ಲಿಯೇ ರೈತಾಪಿ ಜನರ ಕುಂದುಕೊರತೆಗಳನ್ನು ಸಾಧ್ಯವಾದ ಮಟ್ಟಿಗೆ ಈಡೇರಿಸಲು ಅನುಕೂಲ ಮಾಡಿಕೊಡಲಾಗಿದೆ; ಇದರಿಂದಾಗಿ ಅನಗತ್ಯವಾಗಿ ತಮ್ಮ ಕೆಲಸಗಳಿಗಾಗಿ ತಾಲೂಕು ಕಛೇರಿಗೆ ಭೇಟಿ ನೀಡುವ ಶ್ರಮವನ್ನು ರೈತರಿಗೆ ಉಳಿಸಲಾಗಿದೆ. ನಾಡಕಛೇರಿಯ ಉಪಯುಕ್ತತೆಯನ್ನು ಕಂಡುಕೊಂಡ ಸರ್ಕಾರವು ಆಗಸ್ಟ್ ೧೫, ೧೯೮೭ ರಿಂದ ಪ್ರತೀ ತಾಲೂಕಿನ ಎರಡನೆಯ ಹೋಬಳಿಗೆ ಈ ಪ್ರಯೋಗವನ್ನು ವಿಸ್ತರಿಸಿ ಸರ್ಕಾರದ ಆದೇಶ ಕಂ.ಇ.೩೩ ಡಿಎಸ್‌ಪಿ ೨೦೧೨ ದಿನಾಂಕ ೫-೬-೨೦೧೨ರಂತೆ ೭೭೨ ಹೋಬಳಿಗಳಲ್ಲಿ ನಾಡಕಛೇರಿ

ಪ್ರಾರಂಭಿಸಿದೆ. ಈಗಾಗಲೇ ರಾಜ್ಯದಲ್ಲಿ ೩೨೯ ನಾಡಕಛೇರಿಗಳಿದ್ದು, ೧೭೬ ಕಸಬಾ ಹೋಬಳಿಗಳ ಬಾಬ್ತು ತಾಲೂಕು ಕಛೇರಿಯಲ್ಲಿಯೇ ಸಾರ್ವಜನಿಕ ಸೇವೆ ಒದಗಿಸಲಾಗುವುದು. ಈ ಜಿಲ್ಲೆಯಲ್ಲಿ ೪೦ ಹೋಬಳಿಗಳಲ್ಲಿ ನಾಡಕಛೇರಿಗಳಿವೆ.

ವೃದ್ಧರ ಮಾಸಾಶನ, ವಿಧವಾ ವೇತನ, ಅಂಗವಿಕಲರ ಭತ್ಯೆ, ನೈಸರ್ಗಿಕ ವಿಕೋಪಗಳಾದ ಬೆಂಕಿ ಅನಾಹುತ, ಪ್ರವಾಹಪೀಡೆ ಸಂದರ್ಭಗಳಲ್ಲಿ ಪರಿಹಾರ, ಹಕ್ಕು ಬದಲಾವಣೆ ಪ್ರಕರಣಗಳ ಇತ್ಯರ್ಥ, ಅವಶ್ಯಕ ಸಾಮಗ್ರಿಗಳ ಸಂಗ್ರಹಣಾ ತನಿಖೆ ಮತ್ತು ಜಪ್ತಿ ಕ್ರಮ, ಸರ್ಕಾರದ ವರಮಾನಗಳ ವಸೂಲಾತಿ ಮತ್ತು ಖಜಾನೆಗೆ ಜಮೆ ಮಾಡುವುದು, ಬೇಡಿಕೆ ವಸೂಲಿ ಮತ್ತು ಬಾಕಿ (ಡಿ.ಸಿ.ಬಿ) ಲೆಕ್ಕಪತ್ರಗಳ ನಿರ್ವಹಣೆ, ನೀರುದರ, ಅಭಿವೃದ್ಧಿ ಕೊಡುಗೆಗಳ ವಸೂಲಿ, ದಂಡ ವಸೂಲಿ, ಕಂದಾಯ ಮತ್ತು ಗ್ರಾಮಾಡಳಿತ ಕುರಿತಾದ ದಾಖಲೆಪತ್ರಗಳ ಪ್ರಮಾಣಿತ ಪ್ರತಿಗಳನ್ನು ನೀಡುವುದು, ಜನನ–ಮರಣ, ಮುಜರಾಯಿ ಸಂಸ್ಥೆಗಳು, ಪಡಿತರ ಚೀಟಿ (ಕಾರ್ಡ್), ಚುನಾವಣಾ ಕಾರ್ಯ, ಮೇಲಧಿಕಾರಿಗಳು ಸೂಚಿಸುವ ಇನ್ನಿತರೆ ಕೆಲಸ ಕಾರ್ಯಗಳು. ನಾಡಕಛೇರಿಗಳಿಗೆ ವರ್ಗಾಯಿಸಲಾಗಿರುವ ಮುಖ್ಯ ಪ್ರಕಾರ್ಯಗಳಾಗಿವೆ. ನಾಡಕಛೇರಿಯ ಮುಖ್ಯಸ್ಥರ ನೆರವಿಗೆ ಒಬ್ಬ ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರ ಮತ್ತು "ಡಿ" ವೃಂದದ ಒಬ್ಬ ನೌಕರನ ಸೇವೆಯನ್ನು ಒದಗಿಸಲಾಗಿದ್ದು ಇದೀಗ ಒಬ್ಬೊಬ್ಬ ಗ್ರಾಮ ಲೆಕ್ಕಾಧಿಕಾರಿ ಹುದ್ದೆಯನ್ನು ಸೃಜಿಸಲಾಗಿದೆ.

### ಕಂದಾಯ (ರಾಜಸ್ವ) ನಿರೀಕ್ಷಕರು (ರೆವೆನ್ಯು ಇನ್ಸ್‌ಪೆಕ್ಟರ್)

ಹೋಬಳಿಗೆ ಒಬ್ಬರಂತೆ ಕಂದಾಯ ಅಥವಾ ರಾಜಸ್ವ ನಿರೀಕ್ಷಕರಿದ್ದು, ಇವರು ತಹಸೀಲ್ದಾರರ ಕಾರ್ಯಕಾರಿ ಸಹಾಯಕರಾಗಿರುತ್ತಾರೆ. ಪ್ರತಿಯೊಂದು ತಾಲೂಕನ್ನು ಅನೇಕ ಹೋಬಳಿಗಳನ್ನಾಗಿ ವಿಭಜಿಸಲಾಗಿರುತ್ತದೆ. ಇವುಗಳನ್ನು ಕಂದಾಯ (ರಾಜಸ್ವ) ವಲಯ ಎಂದೂ ಕರೆಯುವ ರೂಢಿ ಇದೆ. ಪ್ರತಿಯೊಂದು ರಾಜಸ್ವ ವಲಯದಲ್ಲಿಯೂ ನಿರ್ದಿಷ್ಟ ಗ್ರಾಮಗಳು ಮತ್ತು ಹಳ್ಳಿಗಳು ಸೇರ್ಪಡೆಯಾಗಿರುತ್ತವೆ. ಇದು ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪, ಪ್ರಕಾರ ಒಂದು ಆಡಳಿತ ಘಟಕವಾಗಿರುತ್ತದೆ. ಒಂದು ರಾಜಸ್ವ ವಲಯಕ್ಕೆ ಓರ್ವ ಕಂದಾಯ ನಿರೀಕ್ಷಕನನ್ನು ನೇಮಕ ಮಾಡಲಾಗುತ್ತಿದ್ದು, ಇದರಲ್ಲಿ ವಿಸ್ತೀರ್ಣಕ್ಕನುಗುಣವಾಗಿ ೧೦ ರಿಂದ ೨೦ ಗ್ರಾಮಲೆಕ್ಕಿಗರಿರುತ್ತಾರೆ. ಕಂದಾಯ ನಿರೀಕ್ಷಕರು ತಮ್ಮ ವಲಯದ ಎಲ್ಲಾ ಗ್ರಾಮಲೆಕ್ಕಿಗರೊಡನೆ ಸಂಪರ್ಕದಲ್ಲಿರಬೇಕು ಮತ್ತು ಮೇಲಧಿಕಾರಿಯಾದ ತಹಸೀಲ್ದಾರರ ನಿರ್ದೇಶನದಂತೆ ಕಾರ್ಯನಿರ್ವಹಿಸಬೇಕು. ಭೂ ಕಂದಾಯ ಅಧಿನಿಯಮ, ೧೯೬೪, ಮತ್ತು ಭೂ ಸುಧಾರಣಾ ಅಧಿನಿಯಮ ೧೯೬೧, ಇವುಗಳ ಕಾರ್ಯಾಚರಣೆಗೆ ಇವರು ಹೊಣೆಗಾರರಾಗಿರುತ್ತಾರೆ. ಮುಖ್ಯವಾಗಿ ಓರ್ವ ಕಂದಾಯ ಅಧಿಕಾರಿಯಾಗಿದ್ದರೂ, ಇವರು ಅನೇಕ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ. ಇವುಗಳೆಂದರೆ ಬೆಳೆ ಕಟಾವು ಪ್ರಯೋಗ, ಪ್ರಕೃತಿ ವಿಕೋಪ, ಅಭಾವ ಪರಿಸ್ಥಿತಿ, ಆಹಾರ ವಿತರಣೆ, ಲೆವಿ ಸಂಗ್ರಹಣೆ, ಮತದಾರರ ಪಟ್ಟಿ ತಯಾರಿಕೆ, ಚುನಾವಣಾ ಕೆಲಸ ಕಾರ್ಯಗಳು, ಗ್ರಾಮಸಭೆ, ಮೇಲಾಧಿಕಾರಿಗಳಿಂದ ಬರುವ ಪತ್ರಗಳಿಗೆ ವರದಿ ನೀಡುವುದು, ಶಿಷ್ಟಾಚಾರ ನಿರ್ವಹಣೆ ಇನ್ನೂ ಮುಂತಾದವುಗಳು. ಭೂ ಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ದರ, ತಕಾವಿ ಮುಂತಾದ ಸರ್ಕಾರಿ ಸಾಲಗಳ ವಸೂಲಾತಿ; ಗ್ರಾಮಲೆಕ್ಕಿಗರ ಲೆಕ್ಕಪುಸ್ತಕಗಳ ಪರಿಶೀಲನೆ, ಸರ್ಕಾರಿ ಭೂಮಿಗಳ ಸೀಮಾ ತಪಾಸಣೆ ಇತ್ಯಾದಿ. ಸರ್ಕಾರದ ಭೂದಾಖಲೆಗಳ ತಯಾರಿಕೆ, ಭೂ ಸ್ವಾಧೀನ ಮತ್ತು ಇತರೆ ರಾಜಸ್ವಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ತಯಾರಿಸಿ ತಹಸೀಲ್ದಾರರಿಗೆ ಒಪ್ಪಿಸುವುದು ಇವರ ಜವಾಬ್ದಾರಿಯಾಗಿದೆ. ಗಣಕೀಕೃತ ಹಕ್ಕು ಬದಲಾವಣೆಗೆ ಆದೇಶ ಮಾಡುವುದು, ನಿರ್ವಾಹಕರು ನಮೂದಿಸಿದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವುದು, ಹಕ್ಕು ಬದಲಾವಣೆ ವಹಿಯಲ್ಲಿ ಗ್ರಾಮ ಲೆಕ್ಕಿಗರು ಅಗತ್ಯ ನಮೂದುಗಳನ್ನು ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು, 'ಭೂಮಿ' ಮುಂತಾದ ಜವಾಬ್ದಾರಿಗಳೂ ಸೇರಿವೆ.

### ಗ್ರಾಮಲೆಕ್ಕಿಗರು (ವಿಲೇಜ್ ಅಕೌಂಟೆಂಟ್)

ಈಗ ಗ್ರಾಮಲೆಕ್ಕಿಗರ ಹುದ್ದೆಯು ಅನುವಂಶಿಕವಾದುದಲ್ಲ. ಗ್ರಾಮಲೆಕ್ಕಿಗರನ್ನು ಜಿಲ್ಲಾ ನೇಮಕಾತಿ ಸಮಿತಿ ಮೂಲಕ ಜಿಲ್ಲಾಧಿಕಾರಿ ನೇಮಕ ಮಾಡುತ್ತಾರೆ. ಇವರನ್ನು ಗ್ರಾಮಕ್ಕೆ ಅಥವಾ 'ವೃತ್ತ' ಎಂದು ಕರೆಯಲಾಗುವ ಗ್ರಾಮಗಳ ಗುಂಪಿಗೆ ನೇಮಕ ಮಾಡಲಾಗುವುದು. ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪ ರಲ್ಲಿ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ಗೊತ್ತುಪಡಿಸಿರುವ ಕರ್ತವ್ಯಗಳನ್ನು ಇವರು ನೆರವೇರಿಸಬೇಕು. ಗ್ರಾಮಲೆಕ್ಕಿಗರು ರಾಜಸ್ವ ನಿರೀಕ್ಷಕನ ಪರ್ಯಾವೇಕ್ಷಣೆ ಮತ್ತು ನಿಯಂತ್ರಣಕ್ಕೆ ನೇರವಾಗಿ

ಒಳಪಟ್ಟಿರುತ್ತಾರೆ. ಗ್ರಾಮಲೆಕ್ಕಿಗನು ಗ್ರಾಮಮಟ್ಟದಲ್ಲಿ ಕಂದಾಯ ಆಡಳಿತದ ಮುಖ್ಯ ಕಾರ್ಯನಿರ್ವಾಹಕನಾಗಿರುವುದರಿಂದ, ಕಂದಾಯ ವಸೂಲಿ ಹಾಗೂ ಹಕ್ಕು ದಾಖಲೆ ನಿರ್ವಹಣೆ ಮುಖ್ಯ ಕೆಲಸವಾಗಿರುತ್ತದೆ. ಗ್ರಾಮಸ್ಥರಿಗೆ ಲಭ್ಯವಿರುವುದಕ್ಕಾಗಿ ತನ್ನ ವೃತ್ತದ ಮುಖ್ಯ ಗ್ರಾಮದಲ್ಲಿ ವಾಸ ಮಾಡಬೇಕೆಂಬ ನಿಯಮವಿದೆ.

ಪಂಚಾಯತಿಯ ವರಮಾನವು ವರ್ಷಕ್ಕೆ ೧೨,೦೦೦ ರೂಪಾಯಿಗಳಿಗಿಂತ ಕಡಿಮೆ ಇರುವಲ್ಲಿ ಅಥವಾ ಪಂಚಾಯಿತಿ ಪ್ರತ್ಯೇಕ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಂಡಿರದಿದ್ದಲ್ಲಿ, ಗ್ರಾಮಲೆಕ್ಕಿಗನು ಪಂಚಾಯತಿಯ ಪದನಿಮಿತ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಬೇಕಾಗಿತ್ತು. ಪಂಚಾಯತಿ ಕಾರ್ಯದರ್ಶಿಯು ಕರ್ನಾಟಕ ಗ್ರಾಮ ಪಂಚಾಯತಿಗಳ ಅಧಿನಿಯಮ, ೧೯೬೪ನ್ನು ಕಾರ್ಯರೂಪಕ್ಕೆ ತರಲು ಜವಾಬ್ದಾರನಾಗಿರುತ್ತಿದ್ದನು. ತನ್ನ ಮಟ್ಟದಲ್ಲಿ ಕಂದಾಯ ಆಡಳಿತದ ಎಲ್ಲ ವಿಷಯಗಳ ಬಗ್ಗೆ ಗ್ರಾಮಲೆಕ್ಕಿಗನು ಜವಾಬ್ದಾರನಾಗಿರುತ್ತಾನೆ. ಕಂದಾಯವನ್ನು ವಸೂಲು ಮಾಡುವುದು, ಪಹಣಿ ಪತ್ರಿಕೆಯಲ್ಲಿ ಬೆಳೆಗಳ ನಮೂದುಗಳನ್ನು ಮಾಡುವುದು. ಮಹಜರುಗಳನ್ನು ಏರ್ಪಡಿಸುವುದು, ನೋಟೀಸುಗಳನ್ನು ಜಾರಿ ಮಾಡುವುದು ಮತ್ತು ಅವನ ವರಿಷ್ಠಾಧಿಕಾರಿಗಳು ವಹಿಸಬಹುದಾದ ಕೆಲಸಗಳನ್ನು ನಿರ್ವಹಿಸುತ್ತಾನೆ; ತನ್ನ ವೃತ್ತದಲ್ಲಿ ಬರುವ ಗ್ರಾಮಗಳ ಜನನ ಮರಣ, ಖೇತ್ವಾರು, ಹಕ್ಕುದಾಖಲಾತಿ, ಪಹಣಿ, ಗೇಣಿ,ಬೆಳೆ ತನಿಖೆ ವಹಿ, ಖಾತೆ ಖಿರ್ದಿ, ರಸೀತಿ ಪುಸ್ತಕ, ಮ್ಯುಟೇಷನ್ ವಹಿ, ಮುಂತಾದ ರಿಜಿಸ್ಟರುಗಳನ್ನು ನಿರ್ವಹಿಸುವುದು. ವಾರ್ಷಿಕ ಲೆಕ್ಕಪತ್ರಗಳನ್ನು ಜುಲೈ ಒಂದನೇ ದಿನಾಂಕಕ್ಕೆ (ಸಾಲ್ವಾದಿ) ಸಿದ್ಧಪಡಿಸಿ ಜಮಾಬಂದಿಗೆ ಒಪ್ಪಿಸುವುದು ಇತ್ಯಾದಿ. ಈಗ ಇಲಾಖೆಯ ಹಕ್ಕು ದಾಖಲಾತಿ ಗಣಕೀಕರಣ ಕಾರ್ಯದಲ್ಲಿ ಇವರದು ಮುಖ್ಯ ಪಾತ್ರ. ಹಕ್ಕು ಬದಲಾವಣೆ ವಹಿ ಬರೆಯುವುದರ ಜೊತೆಗೆ ಅದರಲ್ಲಿ ಗಣಕಯಂತ್ರ ನಮೂದು, ಸಿ.ಇ ಸಂಖ್ಯೆ ಇರುವುದನ್ನು ಖಾತರಿ ಪಡಿಸಿಕೊಳ್ಳುವುದು. ಹಕ್ಕು ಬದಲಾವಣೆಗೆ ತರುವ ಮುನ್ನ ಅದು ಗಣಕಯಂತ್ರದಲ್ಲಿ ನಮೂದಾಗಿರುವಂತೆ ಖಚಿತಪಡಿಸಿಕೊಂಡು ನಂತರ ಹಕ್ಕು ಬದಲಾವಣೆ ವಹಿಯಲ್ಲಿ ಸಂಖ್ಯೆ ಸಹಿತ ಗಣಕಯಂತ್ರ ನಮೂದು ಸಂಖ್ಯೆ ದಾಖಲಿಸಬೇಕು.

**ಗ್ರಾಮ ಸಹಾಯಕ**

ಸರ್ಕಾರದ ಆದೇಶದ ಆರ್‌ಡಿ.೩.ಎಂ.ಎ.ಎಸ್ ೭೭ ದಿನಾಂಕ ೧೯.೯.೧೯೭೮ರ ಪ್ರಕಾರ ಗ್ರಾಮಸಹಾಯಕ ಹುದ್ದೆಗಳನ್ನು ಸೃಜಿಸಲಾಯಿತು. ಹಿಂದೆ ತೋಟಿ, ತಳಾರಿ (ತಳವಾರ), ನೀರಗಂಟಿ ಮುಂತಾದ ಕೆಳದರ್ಜೆ ಗ್ರಾಮಾಧಿಕಾ–ರಿಗಳು ನಿರ್ವಹಿಸುತ್ತಿದ್ದ ಕೆಲಸ ಕಾರ್ಯಗಳಿಗೆ ಬದಲಾಗಿ ಇವರು ಗ್ರಾಮಲೆಕ್ಕಿಗರಿಗೆ ಅವರ ಆಡಳಿತ ಕಾರ್ಯಗಳಲ್ಲಿ ಸಹಾಯಕರಾಗಿರುತ್ತಾರೆ. ತಹಸೀಲ್ದಾರ್ ರವರಿಗೆ ಇವರನ್ನು ನೇಮಕ ಮಾಡುವ ಅಧಿಕಾರವಿದೆ. ಕೆಳದರ್ಜೆ ಗ್ರಾಮಾಧಿಕಾರಿಗಳಾಗಿದ್ದವರ ಕುಟುಂಬದ ವಂಶಸ್ಥರಿಗೆ ಆದ್ಯತೆ ನೀಡಲಾಗುವುದು. ವಯೋಮಿತಿ ೬೫ ವರ್ಷಗಳು, ಸರ್ಕಾರ ನಿಗದಿಪಡಿಸುವ ಗೌರವಧನವನ್ನು ತಹಸೀಲ್ದಾರರು ಪಾವತಿಸುವರು. ಇವರು ಗ್ರಾಮಲೆಕ್ಕಿಗರಿಗೆ ಸರ್ಕಾರಿ ಬಾಕಿ ವಸೂಲಿಯಲ್ಲಿ ನೆರವಾಗಬೇಕು. ಗ್ರಾಮಗಳಲ್ಲಿನ ಜನನ ಮರಣ ಮಾಹಿತಿಯನ್ನು, ಮಳೆಮಾಪಕ ಕೇಂದ್ರದಲ್ಲಿ ಮಳೆ ಬಿದ್ದ ಬಗ್ಗೆ ಮಾಹಿತಿಯನ್ನು, ಪ್ರಕೃತಿ ವಿಕೋಪ, ಮುಂತಾದ ಘಟನೆಗಳನ್ನು ಗ್ರಾಮಲೆಕ್ಕಿಗರಿಗೆ ನೀಡಬೇಕು. ನೋಟೀಸು ಜಾರಿಗೊಳಿಸುವುದು, ಗ್ರಾಮ ಚಾವಡಿಯಲ್ಲಿ ಪ್ರದರ್ಶಿಸುವುದು, ಮಹಜರಿನಲ್ಲಿ ಸಹಕರಿಸುವುದು, ಜನರನ್ನು ಚಾವಡಿಗೆ ಕರೆತರುವುದು, ಸ್ಥಳಪರಿಶೀಲನೆ, ಕ್ಷೇತ್ರ ವೀಕ್ಷಣೆ, ಅಳತೆ ಮೊದಲಾದ ಸಂದರ್ಭದಲ್ಲಿ ಸಹಕರಿಸುವುದು, ತಾಲೂಕು ಕಛೇರಿಗೆ ಟಪಾಲು ಒಯ್ಯುವುದು, ಬೆಳೆಕಟಾವು, ಗಣತಿಕಾರ್ಯ, ಚುನಾವಣೆ, ಮುಂತಾದ ಕಂದಾಯ ಇಲಾಖೆಯ ಗ್ರಾಮಮಟ್ಟದ ಎಲ್ಲಾ ಕೆಲಸಕಾರ್ಯಗಳಲ್ಲಿ ಮತ್ತು ಮೇಲಧಿಕಾರಿಗಳು ತಿಳಿಸುವ ಕೆಲಸಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ನಿಗದಿಪಡಿಸಿದೆ.

ವಿಶೇಷ ಕೋಶ: ಕ್ಷೇತ್ರ ಇಲಾಖೆಯ ಮುಖ್ಯಸ್ಥರನ್ನು ಹೊರತುಪಡಿಸಿ ಕಂದಾಯ ಆಡಳಿತದ ವಿವಿಧ ಹಂತಗಳಲ್ಲಿ ಭೂ ಮಾಪನ ಮತ್ತು ಭೂ ದಾಖಲೆ, ನೋಂದಣಿ ಮತ್ತು ಮುದ್ರಾಂಕ, ಮುಜರಾಯಿ ಇಲಾಖೆಗಳಲ್ಲಿ ಕಿರುಕುಳಗಳ ಬಗ್ಗೆ ದೂರು ಮತ್ತು ಇತರ ದುರಾಚರಣೆ ಬಗ್ಗೆ ತನಿಖೆ ನಡೆಸಲು ಕಂದಾಯ ಇಲಾಖೆ ರಾಜ್ಯಮಟ್ಟದಲ್ಲಿ ವಿಶೇಷಕೋಶವನ್ನು ಸೃಜಿಸಲಾಗಿದೆ. ಈ ಕೋಶದ ವಿಶೇಷ ಅಧಿಕಾರಿ ಮತ್ತು ಪದನಿಮಿತ್ತ ಉಪಕಾರ್ಯದರ್ಶಿಯವರು ಈ ಎಲ್ಲಾ ವಿಷಯಗಳನ್ನು ಕುರಿತು ವಿಚಾರಣೆ ನಡೆಸಲು ಅಧಿಕಾರ ಹೊಂದಿರುತ್ತಾರೆ. ಸಂಬಂಧಪಟ್ಟ ಕ್ಷೇತ್ರ ಕಛೇರಿಗಳಲ್ಲಿ ಈ ಸಂಬಂಧ ಏಕಾಏಕಿ ತಪಾಸಣೆ ನಡೆಸುವ ಅಧಿಕಾರವನ್ನೂ ಈ ವಿಶೇಷ ಕೋಶಕ್ಕೆ ನೀಡಲಾಗಿದೆ.

ಸಾರ್ವಜನಿಕ ಕುಂದುಕೊರತೆಗಳು: ರಾಜ್ಯದ ಕಂದಾಯ ಇಲಾಖೆಯಲ್ಲಿ ವಿಶೇಷ ಅಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಯನ್ನು ಸಾರ್ವಜನಿಕ ಕುಂದುಕೊರತೆ ಕೋಶಕ್ಕೆ ನಾಮನಿರ್ದೇಶನ ಮಾಡಲಾಗಿದೆ. ಈ ಬಗ್ಗೆ ಪ್ರತಿ ತಿಂಗಳೂ ಪರಿಶೀಲನೆ ನಡೆಸಿ ಸಾರ್ವಜನಿಕ ಕುಂದುಕೊರತೆಗಳ ಪ್ರಕರಣಗಳನ್ನು ಆದ್ಯತೆ ಮೇಲೆ ನಿರ್ವಹಿಸಲು ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದ್ದು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ಸೂಕ್ತ ಕ್ರಮವಹಿಸುವರು.

ಮಾಹಿತಿ ಹಕ್ಕು: ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುವ ಸಲುವಾಗಿ ಕೇಂದ್ರ ಸರ್ಕಾರವು ಮಾಹಿತಿ ಹಕ್ಕು ಕಾಯ್ದೆ ೨೦೦೫ ನ್ನು ಜಾರಿಗೆ ತಂದಿದೆ. ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಾಹಿತಿ ಆಯೋಗ ಶ್ರಮಿಸುತ್ತಿದೆ. ಈ ಅಧಿನಿಯಮದಡಿ ಕಂದಾಯ ಇಲಾಖೆಗೆ ಸಂಬಂಧಿಸಿದ ಕಛೇರಿಗಳಲ್ಲಿ ಸಕ್ಷಮ ಪ್ರಾಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರವನ್ನು ಪ್ರಕಟಿಸಲಾಗಿದೆ. ಜನರ ಕೋರಿಕೆ ಮೇಲೆ ಮಾಹಿತಿಯನ್ನು ಒದಗಿಸುವ ಜವಾಬ್ದಾರಿ ಸಕ್ಷಮ ಪ್ರಾಧಿಕಾರದ್ದಾಗಿದ್ದು, ಅದು ನೀಡಲು ವಿಫಲವಾದ ಅಥವಾ ನಿರಾಕರಿಸಿದ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಮೇಲ್ಮನವಿ ಪ್ರಾಧಿಕಾರಕ್ಕೆ ನೀಡಲ್ಪಟ್ಟಿದೆ. ಪ್ರತಿ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿರುವ ವಿಷಯಗಳ ವಿವರಗಳು ಮತ್ತು ಅವುಗಳನ್ನು ನಿರ್ವಹಿಸುತ್ತಿರುವ ಸಿಬ್ಬಂದಿಯ ವಿವರಗಳನ್ನು ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಟಿಸಬೇಕು.

ನಾಗರಿಕ ಸನ್ನದು: ಸಾರ್ವಜನಿಕರ ಉಪಯೋಗಕ್ಕಾಗಿ ಕಂದಾಯ ಇಲಾಖೆಯು ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿದೆ. ಮಾಹಿತಿ ಮತ್ತು ಸೇವೆಗಳ ಸೌಲಭ್ಯವನ್ನು ಜನ ಸಾಮಾನ್ಯರಿಗೆ ನೀಡುವ ಸಲುವಾಗಿ ನಾಗರಿಕ ಸನ್ನದು ಪ್ರಕಟಿಸಲ್ಪಟ್ಟಿದೆ. ಇದು ಸಾರ್ವಜನಿಕರು ಇಲಾಖೆಯಿಂದ ಏನೇನು ಸೇವೆ, ಮಾಹಿತಿ/ದಾಖಲೆ ಮತ್ತು ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಇವುಗಳಲ್ಲಿ ಅನೇಕ ತೆರನಾದ ಬೇಬಾಕಿ ಪ್ರಮಾಣ ಪತ್ರಗಳು, ಜಾತಿ/ಆದಾಯ ಪತ್ರಗಳು, ವಾಸ ದೃಢೀಕರಣ ಪತ್ರ, ರಾಷ್ಟ್ರೀಯತೆ ದೃಢೀಕರಣ ಪತ್ರ, ಕೃಷಿಕ/ ಕೃಷಿ ಕಾರ್ಮಿಕ ಪ್ರಮಾಣಪತ್ರಗಳು, ಭೂ ಮೌಲ್ಯ ದೃಢೀಕರಣ ಪತ್ರ, ಖಾತೆ/ಹಕ್ಕು ಬದಲಾವಣೆ ಪತ್ರ, ವಿಭಜನೆ ಮತ್ತು ವಾರಸುದಾರರ ಖಾತೆ ಬದಲಾವಣೆ, ಭೂ ಪರಿವರ್ತನೆ, ಹೊಸ ಪಡಿತರ ಚೀಟಿ, ಬೆಳೆ ನಾಶ ಪರಿಹಾರ, ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ, ಬಂದೂಕು ಪರವಾನಗಿ ಮತ್ತು ನವೀಕರಣ ಮುಂತಾದವು ಸೇರಿರುತ್ತವೆ.

'ಸಕಾಲ' ಸೇವಾಖಾತರಿ ಮಸೂದೆ: ಕರ್ನಾಟಕ ಸರ್ಕಾರವು 'ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ ೨೦೧೧ನ್ನು ಜಾರಿಗೊಳಿಸುವ ಮೂಲಕ ಜನತೆಗೆ 'ಸೇವಾಖಾತರಿ' ಯನ್ನೊದಗಿಸುತ್ತಿದೆ. ಇದರ ಪ್ರಕಾರ ಪ್ರತಿಯೊಬ್ಬ ನಾಗರಿಕರೂ ಗೊತ್ತು ಮಾಡಿದ ಕಾಲ ಮಿತಿಯೊಳಗೆ ಸೇವೆಯನ್ನು ಪಡೆಯುವ ಹಕ್ಕು ಹೊಂದುತ್ತಾರೆ. ಅದಕ್ಕಾಗಿ ಸದರಿ ಅಧಿನಿಯಮದಲ್ಲಿ, ಸಾರ್ವಜನಿಕ ಪ್ರಾಧಿಕಾರದ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿ ಮತ್ತು ಆತನ ಅಧೀನ ಸಾರ್ವಜನಿಕ ನೌಕರನು ಗೊತ್ತು ಮಾಡಿದ ಕಾಲದೊಳಗೆ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ನಾಗರಿಕ ಸಂಬಂಧಿ ಸೇವೆಯನ್ನು ಪಡೆಯಲು ಅರ್ಹರಾದ ವ್ಯಕ್ತಿಗಳಿಗೆ ಒದಗಿಸತಕ್ಕದ್ದು ಹಾಗೂ ಅದನ್ನು ತಮ್ಮ ತಮ್ಮ ಕಛೇರಿಗಳ ಸೂಚನಾ ಫಲಕದ ಮೇಲೂ ಪ್ರಕಟಿಸಬೇಕು. ಅದಕ್ಕಾಗಿ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಯನ್ನು ನೇಮಿಸಲಾಗಿದೆ. ಸೇವೆ ನೀಡುವಲ್ಲಿ ಸಾರ್ವಜನಿಕ ನೌಕರನಿಂದ ಉಂಟಾದ ವಿಳಂಬಕ್ಕೆ ಹೊಣೆಗಾರನನ್ನಾಗಿ ಮಾಡುವುದು ಮತ್ತು ಕರ್ತವ್ಯ ಲೋಪವೆಸಗಿದ ಸಾರ್ವಜನಿಕ ನೌಕರನಿಗೆ ಗೊತ್ತುಪಡಿಸಿದ ವೆಚ್ಚವನ್ನು ಜಮೆಮಾಡುವಂತೆ ಅಥವಾ ಅದನ್ನು ಆತನ ಸಂಬಳದಿಂದ ಕಡಿತಗೊಳಿಸಲು ಆದೇಶ ಮಾಡಬಹುದಾಗಿದೆ. ಅಂದರೆ ಪ್ರತಿ ದಿನದಲ್ಲಿ ಕನಿಷ್ಠ ರೂ. ೨೦ ರಿಂದ ಗರಿಷ್ಠ ೫೦೦ ರವರೆಗೆ ಪರಿಹಾರ ಧನವನ್ನು ಸಂಬಂಧಪಟ್ಟವರು ನಾಗರಿಕರಿಗೆ ನೀಡಬೇಕು. ಇಂತಹ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಹಕ್ಕನ್ನೂ ಸಹ ಕೊಡ ಮಾಡಿದ್ದು, ಮೇಲ್ಮನವಿ ಪ್ರಾಧಿಕಾರವೇ ಅಂತಿಮವಾಗಿರುತ್ತೆ. ಯಾರು ಬೇಕಾದರೂ ನಾಗರಿಕ ಸಂಬಂಧಿ ಸೇವೆ ಪಡೆದು ಕೊಳ್ಳುವ, ಆನ್‌ಲೈನ್‌ನಲ್ಲಿ ಮಾಹಿತಿ ಪಡೆಯುವ, ಮೇಲ್ವಿಚಾರಣೆ ನಡೆಸುವ ಹಕ್ಕನ್ನು ಹೊಂದಿರುತ್ತಾರೆ. ವಿದ್ಯುನ್ಮಾನ ಆಡಳಿತ ಭಾಗವಾದ ಈ ಸೌಲಭ್ಯ ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾಗಬಲ್ಲದು.

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆ: ಕರ್ನಾಟಕ ಸರ್ಕಾರವು ಅಸಹಾಯಕ, ಅಶಕ್ತ ವ್ಯಕ್ತಿಗಳಿಗಾಗಿ ಹಾಗೂ ಅಸಹಾಯಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಅನೇಕ ಸಾಮಾಜಿಕ ಭದ್ರತೆ ಯೋಜನೆಗಳನ್ನು ಜಾರಿಗೊಳಿಸುತ್ತಾ

ಬಂದಿದೆ. ಇವುಗಳು ತಾಲೂಕು ಮಟ್ಟದಲ್ಲಿ ತಹಸೀಲ್ದಾರರಿಂದ ಕಾರ್ಯಗತವಾಗುತ್ತಿವೆ. ಇಂತಹ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ಕಾರ್ಯಗತಗೊಳಿಸಲು ಮೇ ೨೦೦೭ ರಿಂದ ಕಂದಾಯ ಇಲಾಖೆಯಡಿಯಲ್ಲಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವನ್ನು ಸೃಜಿಸಲಾಗಿದೆ. ಸದರಿ ನಿರ್ದೇಶನಾಲಯವು ಈ ಕೆಳಕಾಣಿಸಿರುವ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಯೋಜನೆಗಳನ್ನು ನಿರ್ವಹಿಸುತ್ತದೆ.

೧. ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆ
೨. ನಿರ್ಗತಿಕ ವಿಧವಾ ವೇತನ
೩. ವಿಕಲಚೇತನರ ವೇತನ
೪. ಸಂಧ್ಯಾ ಸುರಕ್ಷಾ ಯೋಜನೆ
೫. ಆದರ್ಶ ವಿವಾಹ ಯೋಜನೆ
೬. ರಾಷ್ಟ್ರೀಯ ಕುಟುಂಬ ನೆರವು ಯೋಜನೆ
೭. ಅಂತ್ಯ ಸಂಸ್ಕಾರ ನೆರವು ಯೋಜನೆ
೮. ಆಮ್ ಆದ್ಮಿ ಬೀಮಾ (ಜನಶ್ರೀ) ಯೋಜನೆ.

ಇವುಗಳಲ್ಲಿ ಸಂಧ್ಯಾ ಸುರಕ್ಷಾ ಯೋಜನೆ, ಆದರ್ಶವಿವಾಹ ಯೋಜನೆಗೆ ಕೇಂದ್ರದ ಪಾಲು ಇರುವುದಿಲ್ಲ. ರಾಜ್ಯವೇ ಪೂರ್ಣ ವೆಚ್ಚವನ್ನು ಭರಿಸುತ್ತದೆ. ರಾಷ್ಟ್ರೀಯ ಕುಟುಂಬ ನೆರವು, ಅಂತ್ಯ ಸಂಸ್ಕಾರ ಯೋಜನೆಗೆ ಕೇಂದ್ರ ಪೂರ್ಣ ಪಾಲು ಭರಿಸುತ್ತದೆ. ಉಳಿದಂತೆ ಕೇಂದ್ರ ಮತ್ತು ರಾಜ್ಯಗಳೆರಡೂ ಸಮಪಾಲು (೫೦%) ಭರಿಸುತ್ತವೆ. ಆಮ್ ಆದ್ಮಿ ಬೀಮಾ ಯೋಜನೆಯನ್ನು ಜೀವ ವಿಮಾ ನಿಗಮದ ಮೂಲಕ ಭರಿಸಲಾಗುತ್ತದೆ.

## ಗಣಕೀಕರಣ ಮತ್ತು ಭೂ ದಾಖಲೆಗಳ ನಿರ್ವಹಣಾ ವ್ಯವಸ್ಥೆ

ಅನೇಕ ಕಾರಣಗಳಿಂದ ಭೂ ಮಾಲೀಕರು ತಮ್ಮ ಭೂಮಿಯ ಮೇಲಿನ ಹಕ್ಕುಗಳನ್ನು ಬೇರೆಯವರಿಗೆ ಬಿಟ್ಟು ಕೊಡುವುದು ಒಂದು ಸಾಮಾನ್ಯ ಸಂಗತಿಯಾಗಿದೆ. ಇದರಲ್ಲಿ ಜಮೀನಿನ ಮಾರಾಟ, ಭೋಗ್ಯಕ್ಕೆ ಹಾಕುವುದು, ವ್ಯಕ್ತಿಯ ನಿಧನಾನಂತರ ವಾರಸುದಾರರಿಗೆ ಹಕ್ಕು ಬದಲಾವಣೆ ಆಗುವುದು, ಕುಟುಂಬದಲ್ಲಿ ಆಸ್ತಿ ವಿಭಜನೆಯಾದಾಗ ಅವರವರ ಪಾಲಿಗೆ ಸಂದ ಜಮೀನಿನ ಭಾಗಕ್ಕೆ ಹಕ್ಕು ಬದಲಾಯಿಸುವುದು, ಉಯಿಲು, ದಾನ, ಭೂ ಸ್ವಾಧೀನ, ಭೂ ಮಂಜೂರಾತಿ ಮುಂತಾದ ಕಾರಣಗಳಿಂದ ವ್ಯಕ್ತಿಗಳಿಂದ ಹಕ್ಕುಗಳು ವರ್ಗಾಯಿಸಲ್ಪಡುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಹಕ್ಕು ಬದಲಾವಣೆ ಪ್ರಕ್ರಿಯೆ ಒಂದು ನಿರಂತರ ಕಾರ್ಯವೆನಿಸಿದೆ. ರಾಜ್ಯಾದ್ಯಂತ ಪ್ರತೀ ವರ್ಷಕ್ಕೆ ಸುಮಾರು ೧೦ ಲಕ್ಷ ಹಕ್ಕು ಬದಲಾವಣೆ ಪ್ರಕರಣಗಳು ದಾಖಲಾಗುತ್ತವೆ ಎಂದು ೨೦೦೬ರಲ್ಲಿ ಅಂದಾಜು ಮಾಡಲಾಗಿತ್ತು. ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಕಲಂ ೧೨೯ ರಂತೆ ಈ ಪ್ರಕ್ರಿಯೆ ಜರುಗುತ್ತದೆ.

ಈಗ ಕೈಬರಹದ ಪಹಣಿ (ಆರ್‌ಟಿಸಿ) ಗಳನ್ನು ನಿಷೇಧಿಸಿರುವುದರಿಂದ ನಿರಂತರವಾಗಿ “ಭೂಮಿ” ತಂತ್ರಾಂಶವನ್ನು ಬಳಸಿಕೊಂಡು ಹಕ್ಕು ಬದಲಾವಣೆಗಳನ್ನು ವಿಳಂಬವಿಲ್ಲದೇ ಮಾಡುವುದು ಅತ್ಯಗತ್ಯವಾಗಿರುತ್ತದೆ. ಹಕ್ಕು ಬದಲಾವಣೆ ಪ್ರಸಂಗ ಉಂಟಾದಾಗ, ಉದಾಹರಣೆಗೆ ಜೆ–ಸ್ಲಿಪ್, ಸಾಲದ ಮಾಹಿತಿ, ಭೂ ಮಂಜೂರಾತಿ, ಭೂ ಪರಿವರ್ತನೆ, ಭೂ ಸ್ವಾಧೀನ, ಕೋರ್ಟ್ ತೀರ್ಪು ಮುಂತಾದವುಗಳು ತಿಳಿವಳಿಕೆಗೆ ಬಂದಾಗ ಹಕ್ಕು ಬದಲಾವಣೆ ಪ್ರಕ್ರಿಯೆ ತಾಲೂಕು ಕಛೇ–ರಿಯಲ್ಲಿಯೇ ಪ್ರಾರಂಭವಾಗಬೇಕು. ಎಲ್ಲಾ ಹಕ್ಕು ಬದಲಾವಣೆ ಪತ್ರಗಳನ್ನು ಮೊದಲು ಗಣಕಯಂತ್ರದಲ್ಲಿ ನಮೂದಿಸಿದ ನಂತರ ಹಕ್ಕು ದಾಖಲೆ (ಆರ್‌ಆರ್) ಶಿರಸ್ತೇದಾರರು ಅನುಮೋದಿಸಿದಂಥಹ ಹಕ್ಕು ಬದಲಾವಣೆ ವಹಿಯಲ್ಲಿ ನಮೂದಿಸಬೇಕಾಗಿರುತ್ತದೆ. ಪಿತ್ರಾರ್ಜಿತ ಹಾಗೂ ಪೋಡಿ ಪ್ರಕರಣಗಳಲ್ಲಿಯೂ ಇದೇ ಪ್ರಕ್ರಿಯೆ ಅನ್ವಯಿಸುತ್ತದೆ. ಹಕ್ಕು ಬದಲಾವಣೆಗಾಗಿ ಬರುವ ಎಲ್ಲಾ ಅರ್ಜಿಗಳನ್ನು (ಪಿತ್ರಾರ್ಜಿತ ಅಥವಾ ಕ್ರಯಪತ್ರ ಅಥವಾ ವಿಭಾಗ ಪತ್ರ ಮುಂತಾದವು) ಕ್ಷೇತ್ರದಿಂದ ನಿಯೋಜನೆಗೊಂಡ ಒಂದು ಅಥವಾ ಹೆಚ್ಚು ಗ್ರಾಮಲೆಕ್ಕಿಗರು ಅಥವಾ ಈ ಕೆಲಸಕ್ಕೆಂದೇ ನಿಯೋಜಿಸಲಾದ ವಿಷಯ ನಿರ್ವಾಹಕರು ತಾಲೂಕು ಕಛೇರಿಯಲ್ಲಿ ಸ್ವೀಕರಿಸುತ್ತಾರೆ. ಇವರನ್ನು “ಭೂಮಿ ವಿಷಯ ನಿರ್ವಾಹಕ”ರೆಂದು ಕರೆಯಲಾಗುತ್ತದೆ. ಈ ವಿಷಯ ನಿರ್ವಾಹಕರು ಅರ್ಜಿಗಳ ಜೊತೆಯಲ್ಲಿ ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳನ್ನು

ಒದಗಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇಂತಹ ಲಗತ್ತುಗಳು ದಾಖಲೆಗಳ ಮಾದರಿ ಅಥವಾ ವಿಧಕ್ಕೆ ಅನುಸಾರವಾಗಿ ಪ್ರತ್ಯೇಕವಾದವುಗಳಾಗಿರುತ್ತವೆ. ಉದಾಹರಣೆಗೆ, ಕ್ರಯ ಪತ್ರದ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳೆಂದರೆ, ಕ್ರಯ ಪತ್ರದ ಪ್ರತಿ, ಕೃಷಿಕನೆಂಬುದನ್ನು ದೃಢೀಕರಿಸುವ ದಾಖಲೆ, ಕೃಷಿ ಕಾರ್ಮಿಕನಾಗಿದ್ದರೆ ಅದರ ದೃಢೀಕರಣ ದಾಖಲೆ ಮತ್ತು ಎಲ್ಲಾ ಸರ್ವೆ ನಂಬರುಗಳ ಗಣಕೀಕೃತ ಪಹಣಿ. ವಿಭಾಗ ಪತ್ರದ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳೆಂದರೆ ವಿಭಾಗಪತ್ರದ ಪ್ರತಿ, ವಂಶವೃಕ್ಷ ಮತ್ತು ಎಲ್ಲಾ ಸರ್ವೆ ನಂಬರುಗಳ ಗಣಕೀಕೃತ ಪಹಣಿ.

ಪಹಣಿಯಲ್ಲಿ ಬದಲಾವಣೆ ಮಾಡಬೇಕಾದಾಗ ಅನುಸರಿಸಬೇಕಾದ ಕಾರ್ಯವಿಧಾನವನ್ನು ಸುತ್ತೋಲೆ ಸಂಖ್ಯೆ: ಕಂಇ೨೮:ಎಂಆರ್‌ಆರ್:೨೦೦೧ ದಿನಾಂಕ ೦೫-೦೨-೨೦೦೧ರಲ್ಲಿ ವಿವರಿಸಲಾಗಿದೆ. ಇದರಂತೆ, ಯಾರಿಂದ ಭೂಮಿಯು ವರ್ಗಾವಣೆಗೊಳ್ಳುತ್ತದೋ ಆ ವ್ಯಕ್ತಿಯೇ ಗಣಕೀಕೃತ ಪಹಣಿ ಪ್ರಕಾರ ಮಾಲೀಕನೆಂದು ಭೂಮಿ ವಿಷಯ ನಿರ್ವಾಹಕರು ಖಚಿತಪಡಿಸಿಕೊಳ್ಳಬೇಕು. ಮಾರಾಟಗಾರ ಅಥವಾ ವರ್ಗಾವಣೆದಾರನು ಭೂಮಿ ಪಹಣಿ ದಾಖಲೆಗಳ ಪ್ರಕಾರ ಮಾಲೀಕನಾಗಿದ್ದಲ್ಲಿ ಮಾತ್ರ ವ್ಯವಹಾರಗಳಿಗೆ "ಭೂಮಿ"ಯು ಅವಕಾಶ ಕೊಡುತ್ತದೆ. ಇಲ್ಲದಿದ್ದಲ್ಲಿ ಮಾರಾಟಗಾರ ಅಥವಾ ವರ್ಗಾವಣೆದಾರನ ಹೆಸರನ್ನು ಸೂಕ್ತ ವಿಧಿವಿಧಾನಗಳ ಮೂಲಕ ಪಹಣಿಯಲ್ಲಿ ನಮೂದಿಸಿಕೊಂಡ ನಂತರ ಹಕ್ಕು ಬದಲಾವಣೆ ಕೋರಿಕೆ ಸಲ್ಲಿಸುವಂತೆ ಅರ್ಜಿದಾರನಿಗೆ ಸೂಚಿಸಬೇಕು.

ಭೂಮಿಯಲ್ಲಿ ಹಿತಾಸಕ್ತಿ ಉಳ್ಳವರೆಲ್ಲರಿಗೂ ಬದಲಾವಣೆ ಮಾಡಬೇಕಾದ ಹಕ್ಕಿನ ರೀತಿ, ಹಕ್ಕು ಪಡೆಯುವ ವ್ಯಕ್ತಿ, ಹಕ್ಕು ಬಿಟ್ಟು ಕೊಡುವ ವ್ಯಕ್ತಿ ಮುಂತಾದ ವಿವರಗಳನ್ನು ನೀಡಿ ಅವರ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ತಿಳಿಸಲು ೩೦ ದಿವಸಗಳ ಕಾಲಾವಕಾಶ ನೀಡಬೇಕು. ಆ ಅವಧಿಯಲ್ಲಿ ಬರುವ ಆಕ್ಷೇಪಣೆಗಳನ್ನು ಸಂಬಂಧಿಸಿದ ಕಂದಾಯ ನಿರೀಕ್ಷಕರು ವಿಚಾರಿಸಿ, ಅವುಗಳ ಸತ್ಯಾಸತ್ಯತೆಗಳನ್ನು ಖಚಿತಪಡಿಸಿಕೊಂಡು ಅವುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಕ್ರಮಕ್ಕೆ ಮುಂದಾಗಬೇಕು. ಅಥವಾ ಪ್ರಕರಣವನ್ನು ಮುಂದಿನ ನ್ಯಾಯಿಕ ವಿಚಾರಣೆಗಾಗಿ ಮೇಲಧಿಕಾರಿಗೆ ಕಳುಹಿಸಬೇಕು. ಸುಮಾರು ೩೦ ರಿಂದ ೪೫ ದಿವಸಗಳೊಳಗಾಗಿ ಹಕ್ಕು ಬದಲಾವಣೆ ಪ್ರಕ್ರಿಯೆ ಮುಗಿಯುವುದು. ಅರ್ಜಿಯು ತಿರಸ್ಕರಿಸಲ್ಪಟ್ಟಾಗ, ಅರ್ಜಿದಾರನು ಕ್ರಮವಾಗಿ ಮೇಲ್ಮನವಿಯನ್ನು ಉಪವಿಭಾಗಾಧಿಕಾರಿ, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯ ಇವುಗಳಿಗೆ ಒಯ್ದು ವ್ಯಾಜ್ಯವನ್ನು ಮುಂದುವರೆಸಲು ಅವಕಾಶವಿದೆ. ಅಂತಹ ಮೇಲ್ಮನವಿ ಇತ್ಯರ್ಥವಾಗುವವರೆಗೆ ಹಕ್ಕು ಬದಲಾವಣೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದು.

ಹಕ್ಕು ಬದಲಾವಣೆಯನ್ನು ತಹಸೀಲ್ದಾರನು ಅಂಗೀಕರಿಸಿದ ನಂತರ ಪಹಣಿ ಬದಲಾಗುತ್ತದೆ ಮತ್ತು ಹಕ್ಕು ಬದಲಾವಣೆ ವ್ಯವಹರಣೆ ಯಾರ ವಿಭಾಗದಲ್ಲಿಯೂ (ಶಿರಸ್ತೇದಾರ, ರಾಜಸ್ವ ನಿರೀಕ್ಷಕ, ಗ್ರಾಮಲೆಕ್ಕಿಗ) ಉಳಿಯುವುದಿಲ್ಲ. ಪಹಣಿ ಬದಲಾದ ನಂತರ, ಆಪರೇಟರ್ ಪಹಣಿ ಪ್ರತಿ ತೆಗೆದು ಗ್ರಾಮಲೆಕ್ಕಿಗನಿಗೆ ಕಳುಹಿಸಬೇಕು. ಈ ಪಹಣಿಯನ್ನು ಸ್ವೀಕರಿಸಿದ ಗ್ರಾಮಲೆಕ್ಕಿಗನು ಎಂಆರ್ ನಲ್ಲಿ ಬರೆದಿರುವ ಸಂವಾದಿ ಅಇ ನಂಬರಿಗೆ ವೃತ್ತಾಕಾರ ಹಾಕಬೇಕು. ಇದು ಆ ನಿರ್ದಿಷ್ಟ ಹಕ್ಕು ಬದಲಾವಣೆಯ ನಂತರ ಹೊಸ ಪಹಣಿಯ ಸ್ವೀಕೃತಿಯನ್ನು ಸೂಚಿಸುತ್ತದೆ. ಈ ದಾಖಲೆಯು ಸುಳ್ಳು ಎಂದು ಸಾಬೀತಾಗುವವರೆಗೆ ಅದನ್ನು ಸಾಕ್ಷ್ಯಾಧಾರವೆಂದು ಯಾವುದೇ ನ್ಯಾಯಾಲಯದಲ್ಲಿ ಸ್ವೀಕರಿಸಬಹುದು. ಕಂದಾಯ ಇಲಾಖೆಯು ನಿರ್ವಹಿಸುತ್ತಿರುವ ಅತ್ಯಂತ ಮಹತ್ವದ ಜವಾಬ್ದಾರಿಗಳಲ್ಲಿ ಹಕ್ಕು ಬದಲಾವಣೆ ಕಾರ್ಯವು ಒಂದಾಗಿದೆ.

ಸರ್ಕಾರವು ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಭೂ ದಾಖಲೆಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತವೆ. 'ಭೂಮಿ' ಯೋಜನೆಯು ಕರ್ನಾಟಕದಲ್ಲಿ ಭೂ ದಾಖಲೆಗಳನ್ನು ಗಣಕೀಕೃತ ಪದ್ಧತಿಯಲ್ಲಿ ನಿರ್ವಹಿಸುತ್ತಿದೆ. ಈ ಯೋಜನೆಯು ಪಾರದರ್ಶಕತೆ, ವಿಶ್ವಾಸಾರ್ಹತೆ, ಭೂ ದಾಖಲೆಗಳ ವಿತರಣಾ ಸಾಮರ್ಥ್ಯ ಇವುಗಳಿಂದಾಗಿ ಸರ್ವರ ಮನ್ನಣೆ ಪಡೆವಲ್ಲಿ ಯಶಸ್ಸು ಗಳಿಸಿದೆ. ಕಂದಾಯ ಇಲಾಖೆಯು ೨೦೦೭-೦೮ನೇ ಸಾಲಿನಿಂದ ಭೂಮಿ ಯೋಜನೆಯಡಿ ತಾಲೂಕು ಮಟ್ಟದಲ್ಲಿ ವಿವಿಧ ಮಾಹಿತಿ ಸೇವೆಗಳನ್ನು ಗಣಕೀಕರಣಗೊಳಿಸಿ, ಮಹತ್ವದ ಸೇವೆಗಳನ್ನು ಒದಗಿಸಲು ಪ್ರಾರಂಭಿಸಿರುತ್ತದೆ.

"ನೆಮ್ಮದಿ" ಯೋಜನೆಯಡಿಯಲ್ಲಿ ರಾಜ್ಯದ ಸುಮಾರು ೮೦೦ ಗ್ರಾಮಗಳಲ್ಲಿ ಕಂಪ್ಯೂಟರ್ ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗಿದೆ. ಗಣಕೀಕೃತ ಭೂ ದಾಖಲೆಗಳನ್ನು ಒದಗಿಸುವುದಲ್ಲದೆ, ಈ ಕೇಂದ್ರಗಳ ಮೂಲಕ ಜಾತಿ ಪ್ರಮಾಣ ಪತ್ರ,

ಆದಾಯ ಪ್ರಮಾಣ ಪತ್ರ ಮುಂತಾದ ೩೫ಕ್ಕೂ ಹೆಚ್ಚಿನ ಸೇವೆಗಳನ್ನು ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿ ಪ್ರತಿ ಹೋಬಳಿಗಳಲ್ಲಿ ೧೬ ನೆಮ್ಮದಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳನ್ನು ಅಟಲ್ ಜಿ ಜನಸ್ನೇಹಿ ಕೇಂದ್ರಗಳೆಂದು ಮರುನಾಮಕರಣ ಮಾಡಲಾಗಿತ್ತು. ಇಲ್ಲಿಯವರೆಗೆ "ಭೂಮಿ" ಯೋಜನೆಯಡಿಯಲ್ಲಿ ಭೂ ದಾಖಲೆಗಳನ್ನು ಮ್ಯುಟೇಷನ್ (ಹಕ್ಕು ಬದಲಾವಣೆ) ಕಾರ್ಯ ವಿಧಾನದ ಮೂಲಕ ನಿರ್ವಹಿಸಲಾಗುತ್ತಿತ್ತು. ಈಗ ಮ್ಯುಟೇಷನ್ ಕಾರ್ಯ ವಿಧಾನದೊಂದಿಗೆ ಪೋಡಿ ಕಾರ್ಯ ವಿಧಾನವನ್ನು ಸಂಯೋಜಿಸಲಾಗಿದೆ. ಈ ಸಂಯೋಜಿತ ಮ್ಯುಟೇಷನ್ ಪದ್ಧತಿಯಲ್ಲಿ ಹಕ್ಕು ದಾಖಲೆ ಹಾಗೂ ಜಮೀನಿನ ನಕ್ಷೆ ಎರಡೂ ಮಾಹಿತಿಯನ್ನು (ಸರ್ವೆ ನಂಬರು ಮತ್ತು ವಿಸ್ತೀರ್ಣ) ಏಕಕಾಲದಲ್ಲಿ ಕಾಲೋಚಿತಗೊಳಿಸಲಾಗುತ್ತಿದೆ; ಪಹಣಿಗಳೊಂದಿಗೆ ನಕ್ಷೆಗಳು ಸಹ ಲಭ್ಯವಾಗುತ್ತವೆ. ಭೂಮಿ ಕಿಯೋಸ್ಕ್‌ಗಳಿಂದ ಸಾರ್ವಜನಿಕರಿಗೆ ಪಹಣಿ ಮತ್ತು ನಕ್ಷೆಗಳನ್ನು ಒದಗಿಸಲಾಗುತ್ತಿದೆ. ಈಗ ಭೂ ದಾಖಲೆಗಳ ನಿರ್ವಹಣೆ ಮತ್ತು ಮೋಜಣಿ ವ್ಯವಸ್ಥೆಗಳೆರಡೂ ತಹಸೀಲ್ದಾರರ ಕಾರ್ಯಭಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ಜಮೀನಿನ ಹಕ್ಕು ದಾಖಲೆಗಳನ್ನು ಕಾಲೋಚಿತಗೊಳಿಸುವುದು ಮತ್ತು ಸರ್ವೆ ನಂಬರುಗಳು ಅವುಗಳ ವಿಸ್ತೀರ್ಣ ನಿರ್ವಹಣೆಗಳೆರಡೂ ಪ್ರಕ್ರಿಯೆಗಳನ್ನು ನಿರ್ವಹಿಸಲು ತಹಸೀಲ್ದಾರರೇ ಜವಾಬ್ದಾರರಾಗಿರುತ್ತಾರೆ.

ನೋಂದಣಿ ಇಲಾಖೆಯಲ್ಲಿ ಜಮೀನು ವಹಿವಾಟುಗಳ ನೋಂದಣಿಗಾಗಿ ಅಳವಡಿಸಿರುವ "ಕಾವೇರಿ" ತಂತ್ರಾಂಶದೊಂದಿಗೆ "ಭೂಮಿ" ಯನ್ನು ರಾಜ್ಯಾದ್ಯಂತ ಈಗಾಗಲೇ ಯಶಸ್ವಿಯಾಗಿ ಸಂಯೋಜಿಸಲಾಗಿದೆ. ಈಗ ಭೂ ದಾಖಲೆಗಳ ನಿರ್ವಹಣೆಯ ವಿವಿಧ ಪ್ರಕ್ರಿಯೆಗಳನ್ನು ಭೂಮಿಯಲ್ಲಿ ಸಂಯೋಜಿಸಿ ನಿರ್ವಹಿಸಲು ಯೋಜಿಸಲಾಗಿದೆ. ಮೊಬೈಲ್ ದೂರವಾಣಿಯನ್ನು ಬಳಸಿ ಬೆಳೆಯನ್ನು ಕಾಲೋಚಿತಗೊಳಿಸುವ ಪ್ರಾಯೋಗಿಕ ವ್ಯವಸ್ಥೆಯು ಈಗಾಗಲೇ ಕೆಲವು ತಾಲೂಕುಗಳಲ್ಲಿ ಸಫಲತೆಯನ್ನು ಕಂಡಿದೆ. ಗ್ರಾಮಲೆಕ್ಕಿಗರು ತಮ್ಮ ಕ್ಷೇತ್ರದ ಬೆಳೆ ಮಾಹಿತಿಯನ್ನು ಮೊಬೈಲ್ ಉಪಕರಣಗಳಲ್ಲಿ ಸಂಗ್ರಹಿಸಿ ನೇರವಾಗಿ ಭೂಮಿ ಡಾಟಾಬೇಸ್‌ಗೆ ಕಾಲೋಚಿತಗೊಳಿಸುತ್ತಾರೆ. ಇದರಿಂದಾಗಿ ಮಾಹಿತಿ ಸಂಗ್ರಹವಾದ ದಿನವೇ ರೈತರು ಇತ್ತೀಚಿನ ಋತುವಿನ ಬೆಳೆ ಮಾಹಿತಿಯನ್ನು ಹೊಸ ಪಹಣಿಯಲ್ಲಿ ಪಡೆಯಬಹುದಾಗಿದೆ.

ಸರ್ವೆ ನಕ್ಷೆಗಳನ್ನು ಸ್ಕ್ಯಾನ್ (Scan) ಮಾಡಿ ಅಂತಹ ನಕ್ಷೆಗಳನ್ನು ಭೂಮಿ ತಂತ್ರಾಂಶದಲ್ಲಿ ಸಂಬಂಧಪಟ್ಟ ಸರ್ವೆ ನಂಬರುಗಳ ಪಹಣಿಗಳೊಂದಿಗೆ ಸಂಯೋಜಿಸಲಾಗುವುದು. ಈ ಯೋಜನೆಯು ೨೦೦೭-೦೮ರಲ್ಲಿ ರಾಜ್ಯದ ೨೬ ತಾಲೂಕುಗಳಲ್ಲಿ ಪೂರ್ಣಗೊಂಡಿದ್ದು, ಭೂಮಿ ಡಾಟಾಬೇಸ್‌ನಲ್ಲಿ ಲಭ್ಯವಿದೆ. ಉಳಿದ ೧೫೦ ತಾಲೂಕುಗಳ ಬಾಬ್ತು ನಕ್ಷೆಗಳನ್ನು ಸ್ಕ್ಯಾನ್ ಮಾಡಿ, ಸಂಯೋಜಿಸುವ ಕಾರ್ಯವು ಮುಂದುವರೆದಿದೆ. ಇದರಿಂದಾಗಿ ಇನ್ನು ಮುಂದೆ ಅಂಗೀಕರಿಸಲ್ಪಡುವ ಎಲ್ಲಾ ಮಾಲೀಕತ್ವ ಬದಲಾವಣೆ ಮ್ಯುಟೇಷನ್ ವಹಿವಾಟುಗಳಿಗೆ ಆನ್‌ಲೈನ್ ಮೂಲಕ ಆಗಿಂದಾಗಲೇ ಸರ್ವೆ ನಕ್ಷೆ ಮತ್ತು ಹಕ್ಕುದಾಖಲೆ (ಪಹಣಿ)ಗಳನ್ನು ಸಂಯೋಜಿಸಲಾಗುವುದು. ರೈತರು ಕೇವಲ ೧೫ ರೂಪಾಯಿಗಳ ಶುಲ್ಕವನ್ನು ಮಾತ್ರ ಪಾವತಿಸಿ ತಮ್ಮ ಜಮೀನಿನ ನಕ್ಷೆಯನ್ನು ಪಡೆಯಬಹುದು.

ರೈತರು ಹಿಂದೆ ಯಾವುದಾದರೊಂದು ಕೃಷಿ ಜಮೀನನ್ನು ಆಧಾರವಾಗಿಟ್ಟು ಹಣಕಾಸು ಸಂಸ್ಥೆ ಅಥವಾ ಬ್ಯಾಂಕಿನಿಂದ ಸಾಲ ಪಡೆದುಕೊಂಡರೆ, ಅಂತಹ ಆಧಾರದ ಮಾಹಿತಿಯನ್ನು ಹಕ್ಕು ದಾಖಲೆಗಳಲ್ಲಿ ನಮೂದಿಸಲು ಪಾರಂಪರಿಕ ಪದ್ಧತಿಯಲ್ಲಿ ತಾಲೂಕು ಕಛೇರಿಗಳಿಗೆ ಕಳುಹಿಸುತ್ತಿದ್ದರು. ಈಗ ಬ್ಯಾಂಕುಗಳು ತಾವು ರೈತರಿಗೆ ಸಾಲ ನೀಡಿದ ಮಾಹಿತಿಯನ್ನು ಅಂತರ್ಜಾಲದ ಮುಖೇನ ಭೂಮಿ ಕೇಂದ್ರಕ್ಕೆ ರವಾನಿಸಿ ಜಮೀನು ಆಧಾರ ಮಾಡಿರುವ ಅಥವಾ ಬಿಡುಗಡೆಯ ವಿವರಗಳನ್ನು ಪಹಣಿ ಪತ್ರಿಕೆಯಲ್ಲಿ ನಮೂದಿಸಲು ಅವಕಾಶವಿದೆ. ತಮ್ಮ ಬ್ಯಾಂಕಿನ ಆಧಾರ ಅಥವಾ ಬಿಡುಗಡೆಯ ಪ್ರಸ್ತಾಪದ ಸ್ಥಿತಿ, ಬಾಕಿ ಇರುವ ಹಂತ ಅಥವಾ ಬೇರೆ ಬ್ಯಾಂಕುಗಳು ನೀಡಬಹುದಾದ ಸಾಲದ ವಿವರಗಳು ಮುಂತಾದವನ್ನು ಕೂಡ ಅಂತರ್ಜಾಲದ ಮೂಲಕ ಅವರು ತಿಳಿದುಕೊಳ್ಳಲು ಸಾಧ್ಯ. ಅಲ್ಲದೇ, ಆಧಾರದ ಮಾಹಿತಿ, ಹಕ್ಕು ದಾಖಲೆಗಳಲ್ಲಿ ನಮೂದಾದ ಬಗ್ಗೆಯೂ ಶೀಘ್ರವಾಗಿ ಖಾತರಿ ಮಾಡಿಕೊಳ್ಳಬಹುದು. ಈ ಬಗ್ಗೆ ಮಾಡಿರುವ ಮಾದರಿ ಪ್ರಯೋಗವು ಈಗಾಗಲೇ ಯಶಸ್ವಿಯಾಗಿರುತ್ತದೆ.

## ಕೋಷ್ಟಕ ೯.೧ ಮ್ಯುಟೇಷನ್ ನಿಂದ ಸಂಗ್ರಹಿಸಲಾದ ಶುಲ್ಕ (ಯೂಸರ್ ಚಾರ್ಜಸ್) ಜೂನ್ ೨೦೧೩ರ ಅಂತ್ಯದವರೆಗೆ ಆರ್.ಟಿ.ಸಿ ಮೂಲಕ ರೈತರಿಂದ ಸಂಗ್ರಹಿಸಲಾದ ಶುಲ್ಕ (ಯೂಸರ್ ಚಾರ್ಜಸ್) ರೂ.ಗಳಲ್ಲಿ

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಪ್ರಾರಂಭಿಕ ಮೊತ್ತ | ವಸೂಲಾತಿ | ಒಟ್ಟು ಮೊತ್ತ |
|---|---|---|---|---|
| ೧ | ತುಮಕೂರು | ೧,೪೬,೦೭,೫೮೧ | ೧,೯೯,೭೫೭ | ೧,೪೮,೦೭,೩೩೮ |
| ೨ | ಗುಬ್ಬಿ | ೧,೦೧,೬೮,೦೧೯ | ೯೨,೯೮೦ | ೧,೦೨,೬೦,೯೯೮ |
| ೩ | ಕುಣಿಗಲ್ | ೧,೧೦,೫೧,೪೨೭ | ೧,೩೮,೦೦೦ | ೧,೧೧,೮೯,೪೨೭ |
| ೪ | ತಿಪಟೂರು | ೧೪,೨೩,೪೧೦ | ೮೯,೭೩೦ | ೧೫,೧೩,೧೪೦ |
| ೫ | ತುರುವೇಕರೆ | ೯೨,೪೫,೯೬೮ | ೧,೨೨,೦೦೦ | ೯೩,೬೭,೯೬೮ |
| ೬ | ಚಿಕ್ಕನಾಯಕನಹಳ್ಳಿ | ೮೮,೪೭,೭೪೮ | ೧,೧೯,೦೦೦ | ೮೯,೬೬,೭೪೮ |
| ೭ | ಮಧುಗಿರಿ | ೭೮೧೨,೧೬೪ | ೯೪,೬೮೦ | ೭೯,೦೬,೮೪೪ |
| ೮ | ಕೊರಟಗೆರೆ | ೬೩೮,೯೫೩ | ೭೩,೧೫೦ | ೬೪,೭೨,೧೦೩ |
| ೯ | ಶಿರಾ | ೧,೨೨,೪೦,೨೩೫ | ೧,೭೮,೭೭೦ | ೧,೨೪,೧೯೦೦೫ |
| ೧೦ | ಪಾವಗಡ | ೮೬,೫೦,೨೬೦ | ೮೯,೩೭೦ | ೮೭,೩೯,೬೩೦ |
| | ಒಟ್ಟು | ೯,೦೪,೪೫,೭೬೫ | ೧೧,೯೭,೪೩೭ | ೯,೧೬,೪೩,೨೦೨ |

## ಕೋಷ್ಟಕ ೯.೨ ಕಛೇರಿ ಉಪಯೋಗಕ್ಕೆ ನೀಡಲಾದ ಆರ್.ಟಿ.ಸಿ

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಪ್ರಾರಂಭಿಕ ಮೊತ್ತ | ಕಛೇರಿ ಉಪಯೋಗಕ್ಕಾಗಿ ನೀಡಿದ ಆರ್.ಟಿ.ಸಿ | ಒಟ್ಟು ಮೊತ್ತ |
|---|---|---|---|---|
| ೧ | ತುಮಕೂರು | ೮೦,೭೮೬ | ೧೨ | ೮೦,೭೯೮ |
| ೨ | ಗುಬ್ಬಿ | ೬೫,೮೯೭ | ೫ | ೬೫,೯೦೨ |
| ೩ | ಕುಣಿಗಲ್ | ೨೨,೫೬೦ | ೬ | ೨೨,೫೬೬ |
| ೪ | ತಿಪಟೂರು | ೧೫,೭೯೭ | ೦ | ೧೫,೭೯೭ |
| ೫ | ತುರುವೇಕರೆ | ೧೨,೭೧೪ | ೦ | ೧೨,೭೧೪ |
| ೬ | ಚಿಕ್ಕನಾಯಕನಹಳ್ಳಿ | ೧೦,೨೫೮ | ೦ | ೧೦,೨೫೮ |
| ೭ | ಮಧುಗಿರಿ | ೩೯,೭೨೧ | ೧೮೮ | ೩೯,೯೦೯ |
| ೮ | ಕೊರಟಗೆರೆ | ೯,೮೮೩ | ೭ | ೯,೮೯೦ |
| ೯ | ಶಿರಾ | ೧೫,೫೦೫ | ೭೨೦ | ೧೬,೨೨೫ |
| ೧೦ | ಪಾವಗಡ | ೧,೨೯,೪೧೫ | ೦ | ೧,೨೯,೪೧೫ |
| | ಒಟ್ಟು | ೪,೦೨,೫೩೬ | ೯೩೮ | ೪,೦೩,೪೭೪ |

## ಕೋಷ್ಟಕ ೯.೩ ರೈತರಿಗೆ ನೀಡಲಾದ ಮ್ಯುಟೇಷನ್

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಪ್ರಾರಂಭಿಕ ಮೊತ್ತ | ವಸೂಲಾತಿ | ಒಟ್ಟು ಮೊತ್ತ |
|---|---|---|---|---|
| ೧ | ತುಮಕೂರು | ೯,೬೫,೪೩೬ | ೪,೧೨೫ | ೯,೬೯,೫೬೧ |
| ೨ | ಗುಬ್ಬಿ | ೮,೯೬,೯೧೮ | ೧೨,೭೯೫ | ೯,೦೯,೭೧೩ |
| ೩ | ಕುಣಿಗಲ್ | ೮,೬೨,೭೬೦ | ೯೭೦ | ೮,೬೩,೭೩೦ |
| ೪ | ತಿಪಟೂರು | ೮,೨೪,೦೧೯ | ೧೯,೧೫೫ | ೮,೪೩,೧೭೪ |

| | | | | |
|---|---|---|---|---|
| ೫ | ತುರುವೇಕರೆ | ೮,೬೨,೯೦೦ | ೪೨೦ | ೮,೬೩,೩೨೦ |
| ೬ | ಚಿಕ್ಕನಾಯಕನಹಳ್ಳಿ | ೭,೦೪,೯೧೯ | ೬೬೫ | ೭,೦೫,೫೮೪ |
| ೭ | ಮಧುಗಿರಿ | ೬,೨೬,೮೩೦ | ೯,೮೧೦ | ೬,೩೬,೬೪೦ |
| ೮ | ಕೊರಟಗೆರೆ | ೬,೭೯,೭೯೩ | ೮,೦೭೦ | ೬,೮೭,೮೬೩ |
| ೯ | ಶಿರಾ | ೧೧,೬೪,೯೩೫ | ೨೫,೧೨೦ | ೧೧,೯೦,೦೫೫ |
| ೧೦ | ಪಾವಗಡ | ೩,೩೨,೭೪೯ | ೧೦,೪೮೫ | ೩,೪೩,೨೩೪ |
| | ಒಟ್ಟು | ೭೯,೨೧,೨೫೯ | ೯೧,೬೧೫ | ೮೦,೧೨,೮೭೪ |

## ಕೋಷ್ಟಕ ೯.೪ ಕಛೇರಿ ಉಪಯೋಗಕ್ಕೆ ನೀಡಲಾದ ಮ್ಯುಟೇಷನ್ ಪಟ್ಟಿ

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಪ್ರಾರಂಭಿಕ ಮೊತ್ತ | ಸದರಿ ತಿಂಗಳಿನಲ್ಲಿ ನೀಡಲಾದ ಮುಟೇಷನ್ ಸಂಖ್ಯೆ | ಒಟ್ಟು ಮೊತ್ತ |
|---|---|---|---|---|
| ೧ | ತುಮಕೂರು | ೫,೫೩೪ | ೦ | ೫,೫೩೪ |
| ೨ | ಗುಬ್ಬಿ | ೨,೫೭೧ | ೩ | ೨,೫೭೪ |
| ೩ | ಕುಣಿಗಲ್ | ೮,೮೮೮ | ೦ | ೮,೮೮೮ |
| ೪ | ತಿಪಟೂರು | ೩೪೩ | ೦ | ೩೪೩ |
| ೫ | ತುರುವೇಕರೆ | ೩,೬೫೬ | ೦ | ೩,೬೫೬ |
| ೬ | ಚಿಕ್ಕನಾಯಕನಹಳ್ಳಿ | ೨,೫೪೪ | ೦ | ೨,೫೪೪ |
| ೭ | ಮಧುಗಿರಿ | ೮೪,೬೬೯ | ೦ | ೮೪,೬೬೯ |
| ೮ | ಕೊರಟಗೆರೆ | ೧,೪೩೪ | ೧೫ | ೧,೪೪೯ |
| ೯ | ಶಿರಾ | ೧,೩೪೨ | ೫೯ | ೧,೪೦೧ |
| ೧೦ | ಪಾವಗಡ | ೨,೭೬೦ | ೦ | ೨,೭೬೦ |
| | ಒಟ್ಟು | ೧,೧೩,೭೪೧ | ೭೭ | ೧,೧೩,೮೧೮ |

## ಕೋಷ್ಟಕ ೯.೫ ಮ್ಯುಟೇಷನ್ ಅರ್ಜಿಗಳಿಂದ ಸಂಗ್ರಹಿಸಿದ ಯೂಸರ್ ಚಾರ್ಜಸ್

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಪ್ರಾರಂಭಿಕ ಮೊತ್ತ | ವಸೂಲಾತಿ | ಒಟ್ಟು ಮೊತ್ತ |
|---|---|---|---|---|
| ೧ | ತುಮಕೂರು | ೧೨,೨೮,೮೫೩ | ೨೦,೦೦೦ | ೧೨,೪೮,೮೫೩ |
| ೨ | ಗುಬ್ಬಿ | ೧೨,೮೨,೧೧೫ | ೧೨,೨೭೮ | ೧೨,೯೪,೩೯೩ |
| ೩ | ಕುಣಿಗಲ್ | ೧೩,೨೯,೯೪೫ | ೧೩,೯೨೪ | ೧೩,೪೩,೮೬೯ |
| ೪ | ತಿಪಟೂರು | ೧೧,೯೩,೩೨೮ | ೧೪,೪೪೭ | ೧೨,೦೭,೭೭೫ |
| ೫ | ತುರುವೇಕರೆ | ೧೦,೪೮,೨೨೦ | ೧೬,೯೬೯ | ೧೦,೬೫,೧೮೯ |
| ೬ | ಚಿಕ್ಕನಾಯಕನಹಳ್ಳಿ | ೧೧,೪೦,೧೪೭ | ೧೧೭೭೦ | ೧೧,೫೧,೯೧೭ |
| ೭ | ಮಧುಗಿರಿ | ೭,೦೬,೯೧೫ | ೫,೩೪೦ | ೭,೧೨೨೫೫ |
| ೮ | ಕೊರಟಗೆರೆ | ೫,೧೬,೪೦೮ | ೫,೫೫೫ | ೫,೨೧,೯೬೩ |
| ೯ | ಶಿರಾ | ೮,೦೮,೯೧೫ | ೭,೩೧೨ | ೮,೧೬,೨೨೭ |
| ೧೦ | ಪಾವಗಡ | ೭,೧೫,೧೧೧ | ೯,೧೯೭ | ೭,೨೪,೩೦೮ |
| | ಒಟ್ಟು | ೯೯,೬೯,೯೫೭ | ೧,೧೬,೭೯೨ | ೧,೦೦,೮೬,೭೪೯ |

## ಕೋಷ್ಟಕ ೯.೬ ಮ್ಯುಟೇಷನ್ (ಸಬ್ ರಿಜಿಸ್ಟ್ರಾರ್) ಅರ್ಜಿಗಳಿಂದ ಸಂಗ್ರಹಿಸಿದ ಯೂಸರ್ ಚಾರ್ಜಸ್

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಪ್ರಾರಂಭಿಕ ಮೊತ್ತ | ವಸೂಲಾತಿ | ಒಟ್ಟು ಮೊತ್ತ |
|---|---|---|---|---|
| ೧ | **ತುಮಕೂರು** | ೨೧,೭೬,೦೪೬ | ೨೩,೨೦೫ | ೨೧,೭೬,೦೪೬ |
| ೨ | **ಗುಬ್ಬಿ** | ೧೮,೯೨,೫೩೨ | ೧೬,೫೩೧ | ೧೮,೯೨,೫೩೨ |
| ೩ | **ಕುಣಿಗಲ್** | ೭,೭೩,೮೯೬ | ೯,೧೫೩ | ೭,೭೩,೮೯೬ |
| ೪ | **ತಿಪಟೂರು** | ೯,೧೨,೬೫೭ | ೭,೯೪೫ | ೯,೧೨,೬೫೭ |
| ೫ | **ತುರುವೇಕರೆ** | ೧೩,೫೭,೭೦೧ | ೧೨,೬೫೦ | ೧೩,೫೭,೭೦೧ |
| ೬ | **ಚಿಕ್ಕನಾಯಕನಹಳ್ಳಿ** | ೯೪೪,೯೮೨ | ೧೩,೭೭೦ | ೯,೪೪,೯೮೨ |
| ೭ | **ಮಧುಗಿರಿ** | ೯,೦೫,೫೩೮ | ೭,೪೫೬ | ೯,೦೫,೫೩೮ |
| ೮ | **ಕೊರಟಗೆರೆ** | ೬,೧೬,೪೮೬ | ೧,೪೦೦ | ೬,೧೬,೪೮೬ |
| ೯ | **ಶಿರಾ** | ೧೭,೪೩,೩೯೯ | ೨೨,೦೫೫ | ೧೭,೪೩,೩೯೯ |
| ೧೦ | **ಪಾವಗಡ** | ೧೩,೦೩,೮೯೧ | ೪೭,೨೪೦ | ೧೩,೦೩,೮೯೧ |
| | **ಹುಲಿಯೂರುದುರ್ಗ** | ೬೦,೩೧,೫೩೯ | ೫,೮೩೫ | ೬೦,೩೭,೩೭೪ |
| | **ಒಟ್ಟು** | ೧,೨೬,೨೬,೩೨೮ | ೧೬೭,೨೪೦ | ೧,೨೬,೨೬,೩೨೮ |

## ಕೋಷ್ಟಕ ೯.೭ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಜಿಲ್ಲಾಧಿಕಾರಿಗಳ ಪಟ್ಟಿ

| ಕ್ರಮ ಸಂಖ್ಯೆ | ಹೆಸರು | ಅವಧಿ |
|---|---|---|
| ೧ | ಕೆ.ಶೇಷಾದ್ರಿ ಅಯ್ಯರ್ | ೧-೫-೧೮೭೯ ರಿಂದ ೧೯-೧-೧೮೮೩ |
| ೨ | ಪಿ.ಎನ್.ಕೃಷ್ಣಮೂರ್ತಿ | ೧೯-೧-೧೮೮೩ ರಿಂದ ೩೧-೩-೧೮೮೯ |
| ೩ | ಸಿ.ಕ್ರೆಸ್ | ೧೩-೫-೧೮೮೯ ರಿಂದ ೨೮-೫-೧೮೯೦ |
| ೪ | ಬಿ.ಕೆ.ವೆಂಕಟವರದ ಅಯ್ಯಂಗಾರ್ | ೧-೭-೧೮೯೦ ರಿಂದ ೧೧-೬-೧೮೯೫ |
| ೫ | ಎಂ.ನಾರಾಯಣರಾವ್ | ೧೧-೬-೧೮೯೫ ರಿಂದ ೨೨-೪-೧೯೦೧ |
| ೬ | ಬಿ.ಜಿ.ಕೃಷ್ಣ ಅಯ್ಯಂಗಾರ್ | ೨೨-೪-೧೯೦೧ ರಿಂದ ೧೬-೧೦-೧೯೦೨ |
| ೭ | ಎ.ಎಸ್.ನಾರಾಯಣರಾವ್ | ೧೬-೧೦-೧೯೦೨ ರಿಂದ ೧೨-೨-೧೯೦೪ |
| ೮ | ಕೆ.ಆರ್.ಪುಟ್ಟಣ್ಣ ಚೆಟ್ಟಿ | ೧೨-೨-೧೯೦೪ ರಿಂದ ೨೭-೩-೧೯೦೪ |
| ೯ | ಕೆ.ಎಸ್.ದೊರೆಸ್ವಾಮಿ ಅಯ್ಯರ್ | ೨೭-೩-೧೯೦೪ ರಿಂದ ೧೮-೪-೧೯೧೧ |
| ೧೦ | ಎಂ.ಶಾಮರಾವ್ | ೧೮-೪-೧೯೧೧ ರಿಂದ ೧೮-೬-೧೯೧೨ |
| ೧೧ | ಸಿ.ಎಸ್.ಬಾಲಸುಂದರಮ್ ಐಯ್ಯರ್ | ೧೮-೬-೧೯೧೨ ರಿಂದ ೧೬-೩-೧೯೧೩ |
| ೧೨ | ವಿ.ಆರ್. ತ್ಯಾಗರಾಜ್ ಐಯ್ಯರ್ | ೧೬-೩-೧೯೧೩ ರಿಂದ ೮-೬-೧೯೧೩ |
| ೧೩ | ಬಿ.ಜೆ.ಕೃಷ್ಣಸ್ವಾಮಿ ನಾಯರ್ | ೮-೬-೧೯೧೩ ರಿಂದ ೧-೧೦-೧೯೧೪ |
| ೧೪ | ಕೆ.ಆರ್.ಶ್ರೀನಿವಾಸ ಐಯ್ಯಂಗಾರ್ | ೨೪-೧೦-೧೯೧೪ ರಿಂದ ೧೧-೭-೧೯೧೬ |
| ೧೫ | ಕೆ.ಚಾಂಡಿ | ೧೧-೭-೧೯೧೬ ರಿಂದ ೫-೧೦-೧೯೧೭ |
| ೧೬ | ಎ.ಸುಬ್ರಹ್ಮಣ್ಯ ಐಯ್ಯರ್ | ೫-೧೦-೧೯೧೭ ರಿಂದ ೨೮-೪-೧೯೧೯ |
| ೧೭ | ಆನಂದರಾವ್ ಸಿರ್ಸಿ | ೨೮-೪-೧೯೧೯ ರಿಂದ ೧೦-೧-೧೯೨೨ |
| ೧೮ | **ಎಂ.ಜಹೀರುದ್ದೀನ್ ಮೆಕ್ಕಿ** | ೧೫-೭-೧೯೨೨ ರಿಂದ ೨೭-೮-೧೯೨೫ |

| | | |
|---|---|---|
| ೧೯ | ಕೆ.ವಿ.ಅನಂತರಾಮನ್ | ೨೭-೮-೧೯೨೫ ರಿಂದ ೨-೧-೧೯೨೯ |
| ೨೦ | ಜಿ.ಬಿ.ಹೆಬ್ಬೀಕರ್ | ೫-೪-೧೯೨೯ ರಿಂದ ೨೨-೩-೧೯೩೧ |
| ೨೧ | ಹೆಚ್.ವಿ.ರಾಮಸ್ವಾಮಿ | ೯-೪-೧೯೩೧ ರಿಂದ ೧೪-೧೧-೧೯೩೨ |
| ೨೨ | ಟಿ.ಅಬ್ದುಲ್ ಖದೀರ್ | ೧೪-೧೧-೧೯೩೨ ರಿಂದ ೨೨-೫-೧೯೩೭ |
| ೨೩ | ವಿ.ವೇದವ್ಯಾಸಚಾರ್ಯ | ೨೨-೫-೧೯೩೭ ರಿಂದ ೧೦-೫-೧೯೩೮ |
| ೨೪ | ಇ.ವಿ.ಗಣಪತಿ ಐಯ್ಯರ್ | ೧೦-೫-೧೯೩೮ ರಿಂದ ೧೭-೪-೧೯೩೯ |
| ೨೫ | ಮಾಸ್ತಿ ವೆಂಕಟೇಶ್ ಅಯ್ಯಂಗಾರ್ | ೧೭-೪-೧೯೩೯ ರಿಂದ ೧೩-೧೦-೧೯೩೯ |
| ೨೬ | ಕೆ.ಗುರುದತ್ | ೧೩-೧೦-೧೯೩೯ ರಿಂದ ೮-೭-೧೯೪೧ |
| ೨೭ | ಜಿ.ಸುಂದರರಾವ್ | ೮-೭-೧೯೪೧ ರಿಂದ ೨೦-೮-೧೯೪೧ |
| ೨೮ | ಪಿ.ಸೂರ್ಯನಾರಾಯಣ ಸೆಟ್ಟಿ | ೨೦-೮-೧೯೪೧ ರಿಂದ ೮-೭-೧೯೪೩ |
| ೨೯ | ಎನ್.ಮಾಧವರಾವ್ | ೮-೭-೧೯೪೩ ರಿಂದ ೯-೪-೧೯೪೫ |
| ೩೦ | ಮೀರ್ ಸಫ್ದರ್ ಹುಸೇನ್ | ೯-೪-೧೯೪೫ ರಿಂದ ೧೧-೩-೧೯೪೮ |
| ೩೧ | ಕೆ.ತಿಪ್ಪೇರುದ್ರಯ್ಯ | ೨೨-೩-೧೯೪೮ ರಿಂದ ೧೯-೬-೧೯೫೦ |
| ೩೨ | ಜನಾಬ್ ಸೈಯದ್ ಅಬ್ದುಲ್ ಅಲೀಂ | ೨೨-೬-೧೯೫೦ ರಿಂದ ೧೩-೧೧-೧೯೫೦ |
| ೩೩ | ಜನಾಬ್ ಬಿ.ಎಂ.ಅಬೂಬಕರ್ | ೧೩-೧೧-೧೯೫೦ ರಿಂದ ೨೧-೫-೧೯೫೨ |
| ೩೪ | ಬಿ.ಟಿ.ಕೆಂಪಣ್ಣ | ೨೫-೫-೧೯೫೨ ರಿಂದ ೨೨-೮-೧೯೫೩ |
| ೩೫ | ಎಲ್.ಮುನಿಸ್ವಾಮಿ | ೨೬-೮-೧೯೫೩ ರಿಂದ ೨೨-೧೨-೧೯೫೪ |
| ೩೬ | ಎಂ.ಎ.ಎಸ್.ರಾಜನ್ | ೧೮-೨-೧೯೫೫ ರಿಂದ ೨-೬-೧೯೫೫ |
| ೩೭ | ಮಹಮದ್ ರಹಮತುಲ್ಲಾ | ೧೪-೭-೧೯೫೫ ರಿಂದ ೨-೮-೧೯೫೬ |
| ೩೮ | ಮಹಮ್ಮದ್ ಅಹಮದ್ | ೯-೮-೧೯೫೬ ರಿಂದ ೨೪-೧೦-೧೯೫೬ |
| ೩೯ | ಕೆ.ನರಸಿಂಹ ಐಯ್ಯಂಗಾರ್ | ೨೯-೧೦-೧೯೫೬ ರಿಂದ ೧೯-೨-೧೯೫೮ |
| ೪೦ | ನಾಸಿರುದ್ದೀನ್ ಅಹಮದ್ | ೧೯-೨-೧೯೫೮ ರಿಂದ ೭-೧೨-೧೯೫೯ |
| ೪೧ | ಎಸ್.ನಂಜುಂಡಯ್ಯ | ೧೧-೧೨-೧೯೫೯ ರಿಂದ ೧೮-೭-೧೯೬೨ |
| ೪೨ | ಅಹಮದ್ ಸಿದ್ದಿಕಿ | ೨೪-೭-೧೯೬೨ ರಿಂದ ೨೩-೯-೧೯೬೫ |
| ೪೩ | ಬಸಪ್ಪ ಆಲೂರು | ೨೩-೯-೧೯೬೫ ರಿಂದ ೬-೩-೧೯೬೭ |
| ೪೪ | ಹೆಚ್.ಎಸ್.ಮಲ್ಲರಾಜ ಅರಸ್ | ೮-೫-೧೯೬೭ ರಿಂದ ೬-೧-೧೯೬೮ |
| ೪೫ | ಸಿ.ಬಿ.ಡಿಮೆಲ್ಲೋ | ೬-೧-೧೯೬೮ ರಿಂದ ೫-೯-೧೯೬೮ |
| ೪೬ | ಎಸ್.ದೊರೈರಾಜು | ೫-೯-೧೯೬೮ ರಿಂದ ೩೧-೩-೧೯೭೨ |
| ೪೭ | ಡಿ.ಬಾಲಗೋಪಾಲನ್ | ೨೮-೭-೧೯೭೨ ರಿಂದ ೨೨-೧೧-೧೯೭೨ |
| ೪೮ | ಎಸ್.ಎಸ್.ಮೀನಾಕ್ಷಿಸುಂದರಂ | ೨೨-೧೧-೧೯೭೨ ರಿಂದ ೩೦-೬-೧೯೭೬ |
| ೪೯ | ಪಿ.ಎಸ್.ಎಸ್.ಥಾಮಸ್ | ೧೨-೭-೧೯೭೬ ರಿಂದ ೪-೯-೧೯೭೮ |
| ೫೦ | ಎ.ಕೆ.ಅಗರವಾಲ್ | ೨೩-೧೦-೧೯೭೮ ರಿಂದ ೨೩-೪-೧೯೭೯ |
| ೫೧ | ಸಿ.ಮುನಿಸ್ವಾಮಿ | ೨೩-೪-೧೯೭೯ ರಿಂದ ೪-೧೨-೧೯೮೦ |
| ೫೨ | ಎಂ.ಆರ್ಯಮಿತ್ರ | ೪-೧೨-೧೯೮೦ ರಿಂದ ೨೧-೧೦-೧೯೮೨ |

| | | |
|---|---|---|
| ೫೩ | ಶ್ರೀಮತಿ ವತ್ಸಲಾವತ್ಸ | ೨೧-೧೦-೧೯೮೨ ರಿಂದ ೨೨-೧೨-೧೯೮೩ |
| ೫೪ | ಕೆ.ಜೈರಾಜ್ | ೨೨-೧೨-೧೯೮೩ ರಿಂದ ೪-೮-೧೯೮೬ |
| ೫೫ | ಎ.ಪಿ.ಜೋಷಿ | ೮-೮-೧೯೮೬ ರಿಂದ ೨೦-೨-೧೯೮೭ |
| ೫೬ | ಸಂಜಯ್ ಕೌಲ್ | ೨೩-೨-೧೯೮೭ ರಿಂದ ೨೧-೩-೧೯೮೮ |
| ೫೭ | ಶ್ರೀಮತಿ ಲಕ್ಷ್ಮೀವೆಂಕಟಾಚಲಂ | ೨೩-೩-೧೯೮೮ ರಿಂದ ೮-೬-೧೯೮೯ |
| ೫೮ | ಐ.ಆರ್.ಪೆರುಮಾಳ್ | ೯-೬-೧೯೮೯ ರಿಂದ ೨೫-೩-೧೯೯೧ |
| ೫೯ | ಡಿ.ಸತ್ಯಮೂರ್ತಿ | ೨೫-೩-೧೯೯೧ ರಿಂದ ೨೪-೬-೧೯೯೨ |
| ೬೦ | ಹೆಚ್.ಭಾಸ್ಕರ್ | ೨೪-೬-೧೯೯೨ ರಿಂದ ೯-೨-೧೯೯೫ |
| ೬೧ | ಶ್ರೀಮತಿ ಆರ್.ಎಸ್.ಸುಜಾತ | ೯-೨-೧೯೯೫ ರಿಂದ ೧೮-೧೦-೧೯೯೫ |
| ೬೨ | ಕೆ.ಎಸ್.ಮಂಜುನಾಥ್ | ೧೮-೧೦-೧೯೯೫ ರಿಂದ ೫-೮-೧೯೯೬ |
| ೬೩ | ಐ.ಎಂ.ವಿಠ್ಠಲಮೂರ್ತಿ | ೫-೮-೧೯೯೬ ರಿಂದ ೨೯-೫-೧೯೯೮ |
| ೬೪ | ಕೆ.ಹೆಚ್.ಗೋಪಾಲಕೃಷ್ಣೇಗೌಡ | ೯-೭-೧೯೯೮ ರಿಂದ ೨೦-೪-೨೦೦೦ |
| ೬೫ | ಬಿ.ಆರ್.ಜಯರಾಮರಾಜೇ ಅರಸ್ | ೨೦-೪-೨೦೦೦ ರಿಂದ ೨-೫-೨೦೦೨ |
| ೬೬ | ಎಂ.ಬಿ.ದ್ಯಾಬೇರಿ | ೨೨-೫-೨೦೦೨ ರಿಂದ ೩೦-೬-೨೦೦೫ |
| ೬೭ | ಎಸ್. ಆರ್. ಉಮಾಶಂಕರ್ | ೧-೭-೨೦೦೫ ರಿಂದ ೨೯-೬-೨೦೦೮ |
| ೬೮ | ಡಾ. ಸಿ. ಸೋಮಶೇಖರ್ | ೩೦-೬-೨೦೦೮ ರಿಂದ ೧೧-೩-೨೦೦೯ |
| ೬೯ | ಹೆಚ್. ಆರ್ ಶ್ರೀನಿವಾಸ | ೧೨-೩-೨೦೦೯ ರಿಂದ ೨-೬-೨೦೦೯ |
| ೭೦ | ಡಾ. ಸಿ. ಸೋಮಶೇಖರ್ | ೩-೬-೨೦೦೯ ರಿಂದ ೧೬-೧-೨೦೧೨ |
| ೭೧ | ಆರ್. ಕೆ. ರಾಜು | ೧೬-೧-೨೦೧೨ ರಿಂದ ೧೮-೦೩-೨೦೧೩ |
| ೩೨ | ಅನುರಾಗ್ ತಿವಾರಿ | ೧೮-೦೩-೨೦೧೩ ರಿಂದ ೨೧-೦೫-೨೦೧೩ |
| ೩೩ | ಕೆ.ಎಸ್.ಸತ್ಯಮೂರ್ತಿ | ೨೮-೦೬-೨೦೧೩ ರಿಂದ ೧೮-೦೬-೨೦೧೫ |
| ೩೪ | ಪಲ್ಲವಿ ಆಕುರಾತಿ | ೨೪-೦೮-೨೦೧೫ ರಿಂದ ೦೬-೦೯-೨೦೧೫ |
| ೩೫. | ಕೆ. ಪಿ. ಮೋಹನರಾಜು | ೦೭-೦೯-೨೦೧೫ ರಿಂದ..... |

## ಕಂದಾಯ ವ್ಯವಸ್ಥೆ

ಹಿಂದಿನ ರಾಜಮನೆತನದ ಆಡಳಿತದಲ್ಲಿ ದೇಶದ ಪ್ರಮುಖ ವಿಭಾಗಗಳಲ್ಲಿ ಹೆಸರಿನ ಜೊತೆಜೊತೆಯಾಗಿ ಸಾಂಖ್ಯಿಕ ಸ್ಥಾನ ನೀಡಲಾಗುತ್ತಿತ್ತು. ಉದಾಹರಣೆಗೆ ನೊಳಂಬವಾಡಿ-೩೨೦೦೦, ಗಂಗವಾಡಿ-೯೬೦೦೦ ಹೀಗೆ. ಕೆಲವೊಮ್ಮೆ ಹೆಸರನ್ನು ಬಳಸುವ ಬದಲು ಕೇವಲ ಸಾಂಖ್ಯಿಕ ಗುರುತಿನ ಮೂಲಕವೇ ವ್ಯವಹರಿಸಲಾಗುತ್ತಿತ್ತು. ಈ ಸಂಖ್ಯೆ ಆ ಪ್ರದೇಶದ ಕಂದಾಯ ನಿಗದಿಯನ್ನು ಸೂಚಿಸುತ್ತದೆಯೋ ಅಥವಾ ಭೂ ಉತ್ಪಾದನೆಯ ಮೌಲ್ಯವನ್ನೋ ಅಥವಾ ಇನ್ನಾವುದೇ ಬೇರೆ ಗುರುತನ್ನೋ ಎಂಬುದು ಸ್ಪಷ್ಟವಾಗಿಲ್ಲ. ಸಣ್ಣ ಕಂದಾಯ ಆಡಳಿತ ಭಾಗಗಳನ್ನು ಪದೇ ಪದೇ ಶಾಸನಗಳಲ್ಲಿ ವಿವರಿಸಲಾಗಿದ್ದು, ಕಂಪಣ ಮತ್ತು ವೇಂಠೆಗಳನ್ನು ಕೂಡ ಗಮನಿಸಲಾಗಿದೆ. ಲಭ್ಯ ದಾಖಲೆಗಳ ಪ್ರಕಾರ ೧೦೦ ನಿಷ್ಕಾಗಳನ್ನು, ಪಗೋಡಗಳನ್ನು ಉತ್ಪಾದಿಸುವ ಭೂಭಾಗಕ್ಕೆ ಸೀಮೆ ಅಥವಾ ಕ್ಷೇತ್ರ ಎಂದು ಕರೆಯಲಾಗುತ್ತಿತ್ತು. ಭಾರೀ ಸಂಖ್ಯೆ ಸೀಮೆಗಳಿಂದ ಒಂದು ಕಂಪಣ ಮತ್ತು ಎರಡು ಕಂಪಣಗಳಿಂದ ಒಂದು ವೇಂಠೆ ರೂಪುಗೊಳ್ಳುತ್ತಿತ್ತು. ಭಾರೀ ಸಂಖ್ಯೆಯ ಸೀಮೆಗಳನ್ನೊಳಗೊಂಡ ೩೩ ವೇಂಠೆಗಳಿಂದ ಒಂದು ಪರ್ನಿಚ್ಚಾಸನ ರೂಪುಗೊಳ್ಳುವುದನ್ನು ಗಮನಿಸಲಾಗಿದೆ. ಪ್ರತಿ ಗ್ರಾಮವೂ ಪ್ರತ್ಯೇಕ ಸಮುದಾಯವಾಗಿದ್ದು, ಗೌಡ ಅಥವಾ ಪಟೇಲರು ಗ್ರಾಮದ ದಂಡಾಧಿಕಾರಿಗಳಾಗಿದ್ದು ಶ್ಯಾನುಭೋಗರು ಕಂದಾಯ ಲೆಕ್ಕಾಚಾರಗಳ ನೋಂದಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಕೆಲವು ಸಾರಿ ಗ್ರಾಮಗಳಲ್ಲಿನ ಒಟ್ಟು ಭೂಮಿಯನ್ನು

ಎಲ್ಲರೂ ಜಂಟಿಯಾಗಿ ಉಳುಮೆ ಮಾಡುತ್ತಿದ್ದುದು ಪ್ರಸ್ತುತ ವ್ಯವಸ್ಥೆಯಲ್ಲಿನ ಸಹಕಾರಿ ಕೃಷಿಗೆ ಪುಷ್ಟಿ ನೀಡುವಂತಿತ್ತು. ಬೆಳೆದ ಫಸಲನ್ನು ಕೆಲಸ ಮಾಡಿದ ವ್ಯಕ್ತಿಗಳಿಗೆ ಸಮನಾಗಿ ಹಂಚಿಕೆ ಮಾಡಲಾಗುತ್ತಿತ್ತು. ಆದರೆ, ಸಾಮಾನ್ಯವಾಗಿ ಪ್ರತಿ ಹಿಡುವಳಿದಾರರೂ ತನ್ನ ಸ್ವಂತ ಭೂಮಿಯನ್ನೇ ಉಳುಮೆ ಮಾಡುತ್ತಿದ್ದರು. ಫಲವತ್ತಲ್ಲದ ಬಂಜರು ಜಮೀನನ್ನು ಗ್ರಾಮದ ಜಾನುವಾರುಗಳು ಮೇಯಲು ಗೋಮಾಳವನ್ನಾಗಿ ಬಿಡಲಾಗುತ್ತಿತ್ತು. ಹಿಂದೂ ರಾಜರ ಆಳ್ವಿಕೆಯ ಕಾಲದಲ್ಲಿದ್ದ ಭೂ ಮೌಲ್ಯಮಾಪನ ಪದ್ಧತಿ, ಅಂದರೆ ನವಧಾನ್ಯಗಳಲ್ಲಿ ತಲಾ ಒಂದು ಧಾನ್ಯ (ಅಕ್ಕಿ, ಗೋಧಿ, ಜೋಳ, ಹೆಸರು, ಉದ್ದು, ಕಡಲೆ, ಅವರೆ, ತೊಗರಿ ಮತ್ತು ಎಳ್ಳು)ಗಳನ್ನು ತೆಗೆದುಕೊಂಡು ಒಂದು ನಿಷ್ಕಾ ರೂಪುಗೊಂಡಿತ್ತು. ಹತ್ತು ನಿಷ್ಕಾಗಳನ್ನು ಒಂದು ಪಲ್ಲ ಎಂದು ಕರೆಯಲಾಗಿತ್ತು. ೬೪ ಪಲ್ಲಗಳನ್ನು ಒಂದು ಮಣ, ೨೦ ಮಣಗಳನ್ನು ಒಂದು ಕೊಳಗ, ೨೦ ಕೊಳಗಗಳನ್ನು ಒಂದು ಖಂಡುಗ ಎಂದು ಕರೆಯುತ್ತಿದ್ದರು. ಕೆಲವು ಪ್ರದೇಶಗಳಲ್ಲಿ ೪೦ ಅಥವಾ ೫೦ ಕೊಳಗವನ್ನು ಒಂದು ಖಂಡುಗ ಎಂದು ಲೆಕ್ಕ ಮಾಡುತ್ತಿದ್ದರು. ಉನ್ನತ ರೀತಿಯ ನೀರಾವರಿ ಭೂಮಿಗಳಿಗೆ ದರದಲ್ಲಿ ಮೂರು ಪ್ರತ್ಯೇಕ ಪ್ರತಿ ಖಂಡುಗಕ್ಕೆ ೨೧, ೧೮ ಮತ್ತು ಒಂಬತ್ತೂವರೆ ಪಗೋಡಾಗಳಂತೆ ತೆರಿಗೆ ವಿಧಿಸಲಾಗುತ್ತಿತ್ತು. ನೀರಾವರಿಗೆ ಬಾವಿ ಆಶ್ರಯಿತ ಕೆಂಪು ಮಣ್ಣಿನ ಭೂಮಿಗಳಿಗೆ ಪ್ರತಿ ಖಂಡುಗಕ್ಕೆ ೯ ಪಗೋಡಗಳನ್ನು ಪಾವತಿಸಬೇಕಾಗಿತ್ತು. ತೆಂಗು, ಕಂಗು, ಬಾಳೆ ಮತ್ತು ಹುಳಿ ಹಣ್ಣುಗಳನ್ನು ಬೆಳೆಯುವ ತೋಟಗಳನ್ನು ಮಾನದಂಡದ ಮೂಲಕ ಅಳೆಯಲಾಗುತ್ತಿತ್ತು. ತುಮಕೂರು ಜಿಲ್ಲೆಯ ಹಲವು ಹಳೆಯ ಪ್ರದೇಶಗಳಲ್ಲಿ ಇದೇ ಪದ್ಧತಿ ಅನುಸರಿಸಲಾಗುತ್ತಿದ್ದರೂ ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಾಲ ಕಾಲಕ್ಕೆ ಮಾರ್ಪಾಟುಗಳಾಗುತ್ತಿದ್ದವು.

ಹೊಯ್ಸಳರ ಆಳ್ವಿಕೆಯಲ್ಲಿ ಪ್ರತಿ ಉಳುಮೆದಾರ ಪ್ರಭುತ್ವಕ್ಕೆ ಒಂದು ಕುಳ ಅಥವಾ ಉಳುಮೆಯ ಪಾಲನ್ನು ನೀಡಬೇಕಾಗಿತ್ತು. ಉಳುಮೆಯನ್ನು ಪ್ರೋತ್ಸಾಹಿಸಲು ಹಾಗೂ ವಿಸ್ತರಿಸಲು ಅರಸ ವಿಷ್ಣುವರ್ಧನ ಹೊಸ ಯೋಜನೆಯೊಂದನ್ನು ರೂಪಿಸಿದನು. ಅದರಂತೆ ಸರ್ಕಾರಕ್ಕೆ ಅತಿ ಹೆಚ್ಚಿನ ಉಳುಮೆಯ ಪಾಲನ್ನು ನೀಡಿದ ಉಳುಮೆದಾರರಿಗೆ ಹೆಚ್ಚಿನ ಮಾನ್ಯತೆ ದೊರೆಯುವಂತೆ ಯೋಜನೆಯನ್ನು ಜಾರಿಗೆ ತಂದಿದ್ದನು. ಕುಳ ಎಂದರೆ ಹದಿನೆಂಟು ಅಳತೆಯುಳ್ಳ ಒಂದು ಸರಳು ಆಗಿದ್ದು, ಅದು ಭೂಮಿಯನ್ನು ಅಳತೆ ಮಾಡುವ ಮಾಪಕವಾಗಿ ರೂಪುಗೊಂಡಿತ್ತು. ಒಣಭೂಮಿಯಲ್ಲಿ ಉತ್ಪಾದಿತ ಬೆಳೆಯ ಐದನೇ ಒಂದು ಭಾಗವನ್ನು ಹಾಗೂ ನೀರಾವರಿ ಭೂಮಿಯಲ್ಲಿ ಉತ್ಪಾದಿಸುವ ಮೂರನೇ ಒಂದು ಭಾಗವನ್ನು ಸುಂಕವಾಗಿ ಆ ಕಾಲದಲ್ಲಿ ವಿಧಿಸಲಾಗುತ್ತಿತ್ತು. ವಿಜಯನಗರದರಸರ ಕಾಲದಲ್ಲಿ ಬಿತ್ತನೆ ಮಾಡಿದ ಭೂಮಿಗೆ ಅನುಸಾರವಾಗಿ ಒಂದು ಕೊಳಗವನ್ನು ಭೂ ಬಾಡಿಗೆಯನ್ನಾಗಿ ವಿಧಿಸಲಾಗುತ್ತಿತ್ತು. ಈ ಬಿತ್ತನೆ ಮಾಡಿದ ಪ್ರದೇಶದ ಮಣ್ಣಿನ ಫಲವತ್ತತೆಗನುಗುಣವಾಗಿ ಮೂರರಿಂದ ಹತ್ತು ಪಗೋಡಾಗಳ ಮೌಲ್ಯವನ್ನು ಪಾವತಿ ಮಾಡಬೇಕಾಗಿತ್ತು. ಕಪಿಲೆ ಬಾವಿಗಳ ನೀರಿನಿಂದ ಕೃಷಿಗಾಗಿ ಉಪಯೋಗಿಸುತ್ತಿದ್ದ ಭೂಮಿಗೆ ಒಂದು ನಿರ್ದಿಷ್ಟ ಮೊತ್ತದ ಬಾಡಿಗೆ ಪಾವತಿಸಬೇಕಾಗಿತ್ತು. ಆದರೆ ಕೆರೆ ಅಚ್ಚುಕಟ್ಟು ಪ್ರದೇಶಗಳಲ್ಲಿ ಬೆಳೆಯುವ ಫಸಲಿಗೆ ಬೇರೆ ರೀತಿಯ ಮೌಲ್ಯ ಕಟ್ಟಲಾಗುತ್ತಿತ್ತು. ಅಂದರೆ ಬೆಳೆಯ ಅರ್ಧ ಪಾಲನ್ನು ನೀಡಬೇಕಾಗಿತ್ತು. ಕೆಲವು ಪ್ರಕರಣಗಳಲ್ಲಿ ಬೆಳೆಯಲ್ಲಿನ ಪಾಲಿನ ಜೊತೆಗೆ ಬಾಡಿಗೆ ಹಣವನ್ನೂ ಪಾವತಿ ಮಾಡುವ ಪದ್ಧತಿ ಪ್ರಚಲಿತದಲ್ಲಿತ್ತು. ಈ ಕಂದಾಯ ಸಂಗ್ರಹವನ್ನು "ಅಗ್ರಂ" ಎಂದು ಕರೆಯಲಾಗಿತ್ತು. ಶಿರಾ ಮತ್ತು ಮಧುಗಿರಿಯ ತೋಟಗಾರಿಕೆ ಪ್ರದೇಶಗಳು ಸರ್ಕಾರಕ್ಕೆ ಗಮನಾರ್ಹ ಕಂದಾಯ ನೀಡುತ್ತಿದ್ದವು. ದೇಶದ ಕಂದಾಯ ದಾಖಲೆಯ ಲೆಕ್ಕಪತ್ರ ಇರಿಸಲಾಗಿತ್ತು. ಬಿಜಾಪುರವನ್ನು ೧೬೮೭ರಲ್ಲಿ ವಶಪಡಿಸಿಕೊಂಡ ನಂತರ ಮೊಗಲರು ತುಂಗಭದ್ರಾ ಪ್ರದೇಶದ ದಕ್ಷಿಣ ಭಾಗಗಳ ಆಶ್ರಯಿತ ಜಿಲ್ಲೆಗಳನ್ನು ಪಡೆದು ಹಲವು ಪರಗಣಗಳನ್ನೊಳಗೊಂಡಂತೆ ಶಿರಾದ "ಸುಬಾ"ವನ್ನು ರೂಪಿಸಿದರು. ಭೂಕಂದಾಯ ಸಂಗ್ರಹ ಮತ್ತು ನಿರ್ವಹಣೆಗಾಗಿ ಅಮಾನಿ ಜಿಲ್ಲೆಗಳಲ್ಲಿ ಮಾತ್ರ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿತ್ತು. ಇದೇ ಸಂದರ್ಭದಲ್ಲಿ ದೇಶಮುಖ್, ದೇಶಕುಲಕರ್ಣಿ ಮತ್ತು ನಾಡಗೌಡ ಹುದ್ದೆಗಳನ್ನು ಪರಿಚಯಿಸಿ ಒಂದೇ ಕಚೇರಿ ವ್ಯಾಪ್ತಿಯಲ್ಲಿ ಬರುವಂತೆ ರೂಪಿಸಲಾಯಿತು.

ಚಿಕ್ಕದೇವರಾಜ ಒಡೆಯರ್ ಅವರ ೩೧ ವರ್ಷಗಳಿಗೂ ಹೆಚ್ಚಿನ ಆಡಳಿತಾವಧಿಯಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಹಲವು ಬದಲಾವಣೆಗಳನ್ನು ತರಲಾಯಿತು. ಒಣ ಭೂಮಿ ಉಳುಮೆಗೆ ಪ್ರತಿ ರೂ.ಕುಡುಗೆ ಎರಡು ಚಿನ್ನದ ಫನಾಂಗಳ' ಸುಂಕವನ್ನು ವಿಧಿಸಲಾಗುತ್ತಿತ್ತು. ನೀರಾವರಿ ಭೂಮಿ ಮತ್ತು ತೋಟದ ಬೆಳೆಗಳು, ತೆಂಗು ಮತ್ತು ಅಡಿಕೆ ಬೆಳೆಗಳನ್ನು ಉಳುಮೆದಾರ ಮತ್ತು ಸರ್ಕಾರದ ನಡುವೆ ವಿಭಾಗಿಸಲಾಗುತ್ತಿತ್ತು. ಒಟ್ಟು ಉತ್ಪನ್ನದ ಕಾಲು ಭಾಗ ಸರ್ಕಾರದ ಪಾಲಾಗುತ್ತಿತ್ತು. ಕಂದಾಯವನ್ನು ಕಾಲಕಾಲಕ್ಕೆ ಸರಿಯಾಗಿ ಗೌರವಯುತವಾಗಿ ಪಾವತಿ ಮಾಡಲಾಗುತ್ತಿತ್ತು. ಚಿಕ್ಕದೇವರಾಯ ಒಡೆಯರ ಈ ಆರ್ಥಿಕ

ಪದ್ಧತಿಗಳನ್ನು ಹೈದರ್ ಅಲಿ ಕೈಬಿಟ್ಟು, ಸುಂಕಗಳಿಗೆ ಇನ್ನೂ ಹೆಚ್ಚಿನ ಕಂದಾಯ ಸೇರ್ಪಡೆ ಮಾಡಿದನು. ಸುಂಕಗಳ ಪಾವತಿ ಮತ್ತು ತೆರಿಗೆಯ ವಂಚನೆ ತಪ್ಪಿಸಲು ಪ್ರತಿ ತಾಲೂಕಿನಲ್ಲೂ ಹರಿಕಾರರನ್ನು ನೇಮಕ ಮಾಡಲಾಯಿತು. ಇದು ಸಫಲವಾಗದ ಕಾರಣ ಟಿಪ್ಪೂ ಸುಲ್ತಾನ್ ಹರಿಕಾರರ ಹುದ್ದೆಯನ್ನು ರದ್ದುಗೊಳಿಸಿದನು. ತರುವಾಯ ಪ್ರಾಂತವನ್ನು ತಲಾ ಐದು ಸಾವಿರ ಪಗೋಡಾಗಳನ್ನೊಳಗೊಂಡ ತುಕಡಿಗಳನ್ನಾಗಿ ವಿಭಜಿಸಿದನು ಹಾಗೂ ಭೂಕಂದಾಯ ವಸೂಲಾತಿ ಮತ್ತು ನಿರ್ವಹಣೆಗೆ ಪ್ರತಿ ತುಕಡಿಗೆ ಅಧಿಕಾರಿಗಳನ್ನು ನೇಮಕ ಮಾಡಿದನು. ಇದಲ್ಲದೆ ಟಿಪ್ಪು ಸುಲ್ತಾನನು ಇನ್ನೂ ಹೆಚ್ಚಿನ ಸುಂಕ ವಿಧಿಸಿದನು. ಅತಿಹೆಚ್ಚು ಹರಾಜು ಕೂಗುವ ಹರಾಜುದಾರನಿಗೆ ಗ್ರಾಮಗಳನ್ನು ಬಾಡಿಗೆ ನೀಡುವ ಪದ್ಧತಿಯೂ ಇವನ ಅಧಿಕಾರಾವಧಿಯಲ್ಲಿ ಜಾರಿಗೆ ಬಂತು.

**ದಿವಾನ್ ಪೂರ್ಣಯ್ಯನವರ ಅವಧಿಯಲ್ಲಿ ಜಾರಿಗೆ ತಂದ ಸುಧಾರಣೆಗಳು:** ಟಿಪ್ಪು ಸುಲ್ತಾನನ ಪತನಾನಂತರ ಮೈಸೂರು ಸಂಸ್ಥಾನಕ್ಕೆ ಅಧಿಕಾರ ಪುನರ್ ಪ್ರಾಪ್ತಿಯಾದಾಗ, ಕಂದಾಯ ಪದ್ಧತಿಯಲ್ಲಿ ಇದ್ದ ಲೋಪದೋಷ ಸರಿಪಡಿಸುವ ಜವಾಬ್ದಾರಿ ಹೊಸ ಆಡಳಿತದ ಮೇಲೆ ಬಿದ್ದಿತು. ಇವರು ಮಾಡಿದ ಪ್ರಥಮ ಕಾರ್ಯವೆಂದರೆ ಪ್ರಾಚೀನ ಹಿಂದೂ ಪದ್ಧತಿಯಂತೆ ಭೂಕಂದಾಯದ ನಿಗದಿ, ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರೀಜೆಂಟರಾಗಿದ್ದ ದಿವಾನ್ ಪೂರ್ಣಯ್ಯನವರಿಗೆ ವಂಶಪಾರಂಪರ್ಯವಾದ ಜಮೀನಿನ ಯಜಮಾನಿಕೆ ಮತ್ತು ನಿಗದಿತ ಶುಲ್ಕ ನಿರ್ಧರಿಸುವಿಕೆಯಿಂದ ಜನತೆಗೆ ಮತ್ತು ಸರಕಾರಕ್ಕೆ ಆಗುವ ಉಪಯೋಗ ತಿಳಿದಿತ್ತು. ಕಂದಾಯ ಆಡಳಿತದ ಸುಧಾರಣೆಯಲ್ಲಿ ದಿವಾನ್ ಪೂರ್ಣಯ್ಯನವರು ತೆಗೆದುಕೊಂಡ ಮೊದಲ ಹಂತದ ಕಾರ್ಯವೆಂದರೆ ಪೈಮಾಯಿಷ್ ಅಥವಾ ಭೂ ಅಳತೆ. ಆದರೆ ಇದು ವೈಜ್ಞಾನಿಕವಾಗಿ ನಡೆಯಲಿಲ್ಲವಾದುದರಿಂದ ಇದರಿಂದ ಯಾವುದೇ ಹೆಚ್ಚಿನ ಉಪಯೋಗವಾಗಲಿಲ್ಲ. ರೈತರು ಹಣದ ರೂಪದಲ್ಲಿ ತೆ–ರಿಗೆ ನೀಡಲು ಅಶಕ್ತರಾದಾಗ, ಅವರಿಂದ ಧಾನ್ಯರೂಪದ ತೆರಿಗೆ ವಸೂಲು ಮಾಡಲಾಯಿತು. ಕಬ್ಬು ಬೆಳೆಯುವ ಜಮೀನಿಗೆ ಅತ್ಯಧಿಕ ತೆರಿಗೆ ವಿಧಿಸಲ್ಪಟಿದ್ದು ಮೈದಾನ ಪ್ರದೇಶದಲ್ಲಿ ಖಂಡಿಯೊಂದಕ್ಕೆ ೧೦ ರಿಂದ ೭೨ ಪಗೋಡಗಳಷ್ಟು ಇದ್ದಿತು. ಉಳಿದಂತೆ ಮಲೆನಾಡು ಪ್ರದೇಶದಲ್ಲಿ ಶಿವಪ್ಪನಾಯಕನ ಶಿಸ್ತನ್ನು ಪಾಲಿಸಲಾಗುತ್ತಿತ್ತು. ಹೀಗೆ ಇಡೀ ರಾಜ್ಯದ ಕಂದಾಯ ಆಡಳಿತವನ್ನು '.ಅಮಾನಿ' (ಸರಕಾರದ ನೇರ ಆಡಳಿತ) ವ್ಯವಸ್ಥೆಗೆ ಒಳಪಡಿಸಲಾಯಿತು. ಸಂಸ್ಥಾನವನ್ನು ೧೨೦ ತಾಲೂಕುಗಳಾಗಿ ವಿಂಗಡಿಸಿ ಪ್ರತೀ ತಾಲೂಕು ಒಬ್ಬ '.ಅಮಿಲ್' ನ ಆಡಳಿತದಲ್ಲಿದ್ದು ಇವರ ಪರಿವೀಕ್ಷಣೆಗೆ ಮೂರು ಮಂದಿ ಮುಖ್ಯ ಸುಬೇದಾರರಿದ್ದರು. ತಾಲೂಕುಗಳನ್ನು ಹೋಬಳಿಗಳಾಗಿ ವಿಭಾಗಿಸಿ, ಪ್ರತಿ ಹೋಬಳಿಗೆ ಒಬ್ಬ 'ಪಾರುಪತ್ತೇಗಾರರನ್ನು ನೇಮಿಸಲಾಯಿತು. ಇವರ ಸಹಾಯಕ್ಕಾಗಿ 'ಮಣೆಗಾರರು' 'ಗಡಿ ಶಾನುಭೋಗ'ರಿದ್ದರು. ಇದೇ ವ್ಯವಸ್ಥೆ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವಧಿಯಲ್ಲಿ (೧೮೧೧–೧೮೩೧) ಮುಂದುವರೆದು ೧೯ ಕಛೇರಿಗಳೂ, ೧೨೫ ತಾಲೂಕುಗಳು ಅವುಗಳ ಮೇಲ್ವಿಚಾರಣೆಗಾಗಿ ಪ್ರತೀ ತಾಲೂಕಿಗೂ ಒಬ್ಬ ಸುಬೇದಾರ, ಒಬ್ಬ ಪೇಷ್ಕಾರ, ಇಬ್ಬರು ಶಿರಸ್ತೇದಾರರು ಹಾಗೂ ಗುಮಾಸ್ತರು, ಮುನ್ಷಿ, ಲೆಕ್ಕಿಗರು, ಕಲೆಕಾರ, ಕಿಲ್ಲೆದಾರ, ಕಾಣಾದಾರ, ಅಂಚೆ ಮುತ್ಸದ್ದಿ, ಫೌಜುದಾರ (ತುಕಡಿಗ) ಮುಂತಾದವರಿರುತ್ತಿದ್ದರು.

**ಬ್ರಿಟಿಷ್ ಕಮಿಷನ್ನಿನ ಆಡಳಿತದ ಅವಧಿಯಲ್ಲಿ ಜಾರಿಗೆ ತಂದ ಸುಧಾರಣೆಗಳು:** ದಿವಾನ್ ಪೂರ್ಣಯ್ಯನವರಿಂದ ವ್ಯವಸ್ಥಿತವಾಗಿ ರೂಪುಗೊಂಡ ಭೂಕಂದಾಯ ಪದ್ಧತಿಯು ಬ್ರಿಟಿಷರಿಂದಲೂ ಅನುಸರಿಸಲ್ಪಟ್ಟು ಹಣದ ರೂಪದಲ್ಲಿ ನೀಡಲ್ಪಡುತ್ತಿದ್ದ ಕಂದಾಯ ಹೆಚ್ಚೆನಿಸಿದೆಡೆಯಲ್ಲಿ ಅದನ್ನು ಕಡಿಮೆ ಮಾಡಲಾಯಿತು. ಗ್ರಾಮಲೆಕ್ಕಿಗರ ಮಟ್ಟದಲ್ಲಿ ನಡೆಯುತ್ತಿದ್ದ ಅಲ್ಪಸ್ವಲ್ಪ ತೊಂದರೆಗಳು ನಿವಾರಿಸಲ್ಪಟ್ಟವು. ಧಾನ್ಯ ವಿಭಜನೆ ಜನತೆಯ ಕಣ್ಣ ಮುಂದೆಯೇ ನಡೆದು, ಒಣ ಹುಲ್ಲು ಅವರಿಗೇ ನೀಡಲ್ಪಟ್ಟಿತು. ಹಳೆಯ ಮೈಸೂರು ಪ್ರಾಂತದಲ್ಲಿ ೧೭೯೯ರ ಪೂರ್ವದಲ್ಲಿ ಸಾಮಾನ್ಯ ಭೂ ಸರ್ವೇಕ್ಷಣೆ ನಡೆದಂತಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಟಿಪ್ಪು ಜೊತೆಯ ಯುದ್ಧಗಳು ಮುಗಿದೊಡನೆ ಸರ್ವೇಯರ್ ಜನರಲ್ ಆಫ್ ಇಂಡಿಯಾ (Surveyor General of India) ಆಗಿ ನಿವೃತ್ತರಾದ ಕರ್ನಲ್ ಮೆಕೆಂಜಿಯವರು ರಾಜ್ಯದ ಭೂಸರ್ವೇಕ್ಷಣೆ ನಡೆಸಿದುದಾಗಿ ತಿಳಿದುಬರುತ್ತದೆ. ಇದೇ ರೀತಿ ನಿಗದಿತ ಸಮಯಕ್ಕೆ ಸರಿಯಾಗಿ ನಿಯಮಿತವಾಗಿ ಭೂಸರ್ವೇಕ್ಷಣೆ ನಡೆಸುವ ನಿರ್ಧಾರವನ್ನು ೧೮೬೨ರಲ್ಲಿ ಕೈಗೊಳ್ಳಲಾಯಿತು. ಕಂದಾಯ ನಿಗದಿ ಮಾಡುವಲ್ಲಿ ಏಕರೂಪತೆ ತರುವ ಉದ್ದೇಶದಿಂದ ೧೮೭೫ರ ಪೂರ್ವದಲ್ಲಿ ಕಂದಾಯ ನಿಷ್ಕರ್ಷೆಗಾಗಿ ಭೂಮಿಯನ್ನು ಅಳೆಯುವ ಕಾರ್ಯ ಪ್ರಾರಂಭವಾಗಿತ್ತೆಂದು ತಿಳಿದು ಬರುತ್ತದೆ. ಇದು ಬಹುಶಃ ೧೮೪೦ ರಿಂದ ೧೮೬೦ ರ ಎರಡು ದಶಕಗಳಲ್ಲಿ ನಡೆದಿದ್ದು ಮೂವತ್ತು ವರ್ಷಗಳ ಅವಧಿಗೆ ಸರ್ವೇಕ್ಷಣೆ ಮತ್ತು ಕಂದಾಯ ನಿರ್ಣಯ ನಡೆಸಲಾಯಿತು. ಮೈಸೂರು ರಾಜ್ಯದಲ್ಲಿ ೧೯೧೯ರಲ್ಲಿ ಬ್ರಿಟಿಷ್ ಆಡಳಿತಾನುಸಾರ

ಭೂದಾಖಲೆಗಳ ವ್ಯವಸ್ಥೆಯನ್ನು ಪರಿಷ್ಕರಿಸಲಾಯಿತು. ಮೊದಲ ಬಾರಿಗೆ ೧೯೩೬ರಲ್ಲಿ ರೆಕಾರ್ಡ್ ಆಫ್ ರೈಟ್ಸ್ (Record of Rights) ಎಂಬ ವ್ಯವಸ್ಥೆಯನ್ನು ಆರಂಭಿಸಲಾಯಿತು. ೧೯೩೭ರಲ್ಲಿ ಒಂದು ಪ್ರತ್ಯೇಕ ಭೂ ದಾಖಲಾತಿ ಇಲಾಖೆಯನ್ನು ಒಬ್ಬ ಆಯುಕ್ತರ ಆಡಳಿತದಡಿ ಸ್ಥಾಪಿಸಲಾಯಿತು. ಭೂ ದಾಖಲೆಗಳ ಸಂರಕ್ಷಣೆಯೇ ಅಲ್ಲದೆ ಭೂ ಸರ್ವೇಕ್ಷಣೆಯನ್ನೂ ಈ ಇಲಾಖೆ ನಡೆಸಬೇಕಿದ್ದಿತು. ಭೂಮಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಂದರೆ ಗ್ರಾಮವಾರು ಭೂಮಿಯ ಹಾಗೂ ಅದರ ಮಾಲಿಕರ ವಹಿ, ಸದರಿ ಭೂಮಿಯ ಪಾಲುಗಾರಿಕೆಯ ವಿವರ, ಪರಾಧೀನಗೊಂಡಿದ್ದರೆ, ಎರಡನೆ ಮಾಲಿಕರ ವಿವರ ಬಾಡಿಗೆಗೆ ಅಥವಾ ಗುತ್ತಿಗೆಗೆ ನೀಡಿದ್ದರೆ ಅವುಗಳ ವಿವರ, ಕಾಲಕಾಲಕ್ಕೆ ಮಾಲೀಕತ್ವದ ಬದಲಾವಣೆಗಳ ವಿವರ ಈ ಎಲ್ಲವನ್ನೂ ದಾಖಲಿಸಿ, ವಹಿಗಳನ್ನು ಸಂರಕ್ಷಿಸಬೇಕಿದ್ದಿತು. ಭೂ ದಾಖಲೆ ಹಾಗೂ ರೆಕಾರ್ಡ್ ಆಫ್ ರೈಟ್ಸ್ ಇಲಾಖೆಗಳನ್ನು ೧೯೪೫ರಲ್ಲಿ ಒಗ್ಗೂಡಿಸಿ ಡಿಪಾರ್ಟ್‌ಮೆಂಟ್ ಆಫ್ ಸರ್ವೆ ಅಂಡ್ ಸೆಟಲ್ಮೆಂಟ್' (Department of Survey and Settlement) ಎಂದು ಕರೆಯಲಾಯಿತು.

**ಸರ್ ಮಾರ್ಕ್ ಕಬ್ಬನ್ ಮಾಡಿದ ಸುಧಾರಣೆಗಳು:** ಮೈಸೂರಿನ ಕಮಿಷನರ್ ಆಗಿ ೧೮೩೪ ರಿಂದ ೧೮೬೧ರವರೆಗಿನ ಸುದೀರ್ಘ ಅವಧಿ ಕಾರ್ಯನಿರ್ವಹಿಸಿದ ಸರ್. ಮಾರ್ಕ್ ಕಬ್ಬನ್ ಅವಧಿಯಲ್ಲಿ ಭೂ ಕಂದಾಯ ಪದ್ಧತಿಯನ್ನು ಸರಳಗೊಳಿಸಿ ಅದರ ಕಾರ್ಯನಿರ್ವಹಣೆಯ ಬಗ್ಗೆ ನಿಗಾ ಇಡಲಾಯಿತು. ಬಟಾಯಿ ಪದ್ಧತಿಯನ್ನು (ಸರ್ಕಾರ ಹಾಗೂ ಉಳುಮೆದಾರರ ಫಸಲನ್ನು ಸಮ ಭಾಗ ಮಾಡುವ ಪದ್ಧತಿ) ನಗದು ಹಣ ಸಂದಾಯ ಪದ್ಧತಿಯನ್ನಾಗಿ ಮಾರ್ಪಡಿಸಲಾಯಿತು. ಮೊಹತರ್ಫ್ ಪದ್ಧತಿಯನ್ನು (ಕೈಮಗ್ಗ, ಮನೆಗಳು, ತೈಲ ಗಿರಣಿಗಳು, ಅಂಗಡಿಗಳು ಮೊದಲಾದವುಗಳ ಮೇಲೆ ಹಾಕುವ ತೆರಿಗೆ) ಪರಿಷ್ಕರಿಸಲಾಯಿತು. ಬೌರಿಂಗ್ ಅವರು ೧೮೬೨ ರಿಂದ ೧೮೮೧ರವರೆಗಿನ ಕಮಿಷನರ್ ಆಗಿದ್ದ ಅವಧಿ ಸುಧಾರಣೆ ಕಾಲವಾಗಿತ್ತು. ೧೮೬೨-೬೩ರಲ್ಲಿ ಇಡೀ ರಾಜ್ಯವನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿ ಅದನ್ನು ಎಂಟು ಜಿಲ್ಲೆಗಳಾಗಿ ವಿಭಜಿಸಲಾಯಿತು. ಇದರಲ್ಲಿ ತುಮಕೂರು ಕೂಡ ಒಂದು. ಪ್ರತಿಯೊಂದು ವಿಭಾಗವನ್ನೂ ಸೂಪರಿಂಟೆಂಡೆಂಟ್ ಅವರ ಕಾರ್ಯ ವ್ಯಾಪ್ತಿಗೆ ಒಳಪಡಿಸಲಾಯಿತು ಮತ್ತು ಪ್ರತಿ ಜಿಲ್ಲೆಗೂ ಡೆಪ್ಯೂಟಿ ಸೂಪರಿಂಟೆಂಡೆಂಟ್‌ನ್ನು ನಿಯುಕ್ತಿಗೊಳಿಸಲಾಯಿತು ಮತ್ತು ಇವರ ಸಹಾಯಕರನ್ನಾಗಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳನ್ನು ನಿಯೋಜಿಸಲಾಯಿತು. ಇನ್ನು ಪ್ರತಿ ಜಿಲ್ಲೆಗಳನ್ನು ಅನೇಕ ತಾಲೂಕುಗಳನ್ನಾಗಿ ವಿಭಜಿಸಿ ಅದರ ವ್ಯಾಪ್ತಿ ಮತ್ತು ಕಂದಾಯ ಪ್ರಮಾಣವನ್ನಾಧರಿಸಿ ಐದು ದರ್ಜೆಗಳನ್ನಾಗಿ ವರ್ಗೀಕರಿಸಲಾಯಿತು. ೧೮೬೩ರಲ್ಲಿ ಕಂದಾಯ ಭೂ ಮಾಪನ ಇಲಾಖೆಯನ್ನು ಸಂಘಟಿಸಲಾಯಿತು. ನಂತರ ೧೮೬೮ರಲ್ಲಿ ಇನಾಂ ಆಯೋಗ ರಚಿಸಲಾಯಿತು. ೧೮೭೪ರಲ್ಲಿ ನಂದಿದುರ್ಗ ವಿಭಾಗದಲ್ಲಿ ಮೊದಲ ಬಾರಿಗೆ "ಪೋಟ್ಗಿ" ನಿಯಮಗಳನ್ನು ಜಾರಿಗೆ ತಂದು ಅದರ ಅನ್ವಯ ಸಣ್ಣ ಪುಟ್ಟ ಗ್ರಾಮ ಸಹಾಯಕರಿಗೆ ಸಂಭಾವನೆಯನ್ನು ಒದಗಿಸುವ ಪದ್ಧತಿಯನ್ನು ಜಾರಿಗೆ ತಂದರು. ೧೮೮೧ ರಿಂದ ೧೯೧೭ರ ಅವಧಿಗೆ ಹಲವು ಆಡಳಿತ ಸುಧಾರಣಾ ಕ್ರಮಗಳನ್ನು ಕಂಡಿತು. ಇದರಲ್ಲಿ ಜಿಲ್ಲೆ ಮತ್ತು ತಾಲೂಕು ವ್ಯವಸ್ಥೆಗಳ ಪುನಾರಚನೆ ಮಹತ್ವವಾದುದು. ಕೆ. ಶೇಷಾದ್ರಿ ಅಯ್ಯರ್ ಅವರ ಆಡಳಿತಾವಧಿಯಲ್ಲಿ ಜಾರಿಗೆ ತರಲಾದ ಭೂ ಕಂದಾಯ ಸಂಹಿತೆ ಮತ್ತು ಅದರಡಿ ರೂಪಿಸಲಾದ ಕಾನೂನು ಒಂದು ಗಮನಾರ್ಹ ಸುಧಾರಣೆ ಎನ್ನಬಹುದು.

**ಭೂ ಕಂದಾಯ ಸಂಹಿತೆ – ೧೮೮೮:** ಬ್ರಿಟಿಷ್ ಆಡಳಿತಾವಧಿಯಲ್ಲಿ, ಭೂ ಕಂದಾಯ ಕಾಯಿದೆಯನ್ನು ಒಂದು ಚೌಕಟ್ಟಿನ ಅಡಿಯಲ್ಲಿ ತರಲು ಚಿಂತನೆ ನಡೆಸಿತು. ಆದರೆ ವಾಸ್ತವತೆಯ ಅರಿವಾಗದೆ ಮೂಲ ಉದ್ದೇಶ ಈಡೇರಲಿಲ್ಲ. ೧೮೮೨ರ ಆರಂಭದಲ್ಲಿ ಸಮಗ್ರ ಭೂಕಂದಾಯ ಕಾಯಿದೆಯ ರೂಪು-ರೇಷೆಗಳ ರಚನೆಯನ್ನು ಓರ್ವ ವಿಶೇಷ ಅಧಿಕಾರಿಗೆ ವಹಿಸಲಾಯಿತು. ರಾಜ್ಯದಲ್ಲಿ ಇತರೆಡೆ ಪ್ರಸ್ತುತ ಇದ್ದ ಕಾನೂನು ಕ್ರಮಗಳನ್ನು ಪರಾಮರ್ಶಿಸಿದ ಬಳಿಕ ಭೂಕಂದಾಯ ಕಾಯಿದೆಯ ಪ್ರಸ್ತಾವನೆಗಳನ್ನು ಸಿದ್ದಪಡಿಸಿದನು. ೧೮೮೩ರ ಸೆಪ್ಟಂಬರ್‌ನಲ್ಲಿ ಈ ಕಾಯಿದೆಯ ಪ್ರಥಮ ಕರಡು ಪ್ರಕಟಿಸಿ ಇದರ ಪರಿಶೀಲನೆ ಹಾಗೂ ವರದಿಗಾಗಿ ಆಯ್ಕೆ ಸಮಿತಿಯೊಂದನ್ನು ನಿಯೋಜಿಸಲಾಯಿತು. ಈ ಕಾಯಿದೆಯ ಪ್ರಮುಖ ಅಂಶಗಳನ್ನು ಕುರಿತು ೧೮೮೩ ಮತ್ತು ೧೮೮೪ರಲ್ಲಿ ನಡೆದ ಮೈಸೂರು ಜನಪ್ರತಿನಿಧಿ ಸಭೆಯಲ್ಲಿ ಸದಸ್ಯರು ಚರ್ಚಿಸಿ, ಕಂದಾಯ ಹಾಗೂ ಕಾನೂನು ಅಧಿಕಾರಿಗಳ ಅನುಮೋದನೆ ಪಡೆದು ಪರಿಗಣಿಸಲ್ಪಟ್ಟ ಕರಡು ಪ್ರತಿಯನ್ನು ಸೆಪ್ಟೆಂಬರ್ ೧೮೮೬ರಲ್ಲಿ ಭಾರತ ಸರ್ಕಾರಕ್ಕೆ ಕಳಿಸಲಾಯಿತು. ಕೆಲವು ಮಾರ್ಪಾಡುಗಳ ನಂತರ ೧೮೮೮ರಲ್ಲಿ ಅನುಮೋದನೆ ನೀಡಿತು. ಈ ಸಂಹಿತೆಯು ೧೮೮೯ರ ಏಪ್ರಿಲ್ ಒಂದರಂದು ಜಾರಿಗೆ ಬಂದಿತು ಮತ್ತು ಕಾಲದ ಅಗತ್ಯಕ್ಕನುಸಾರವಾಗಿ ತಿದ್ದುಪಡಿಗಳಿಗೂ ಒಳಪಟ್ಟಿತು.

**೧೯೬೪ರ ಪರಿಷ್ಕೃತ ಭೂಕಂದಾಯ ವ್ಯವಸ್ಥೆ:** ಪ್ರತೀ ಮೂವತ್ತು ವರ್ಷಗಳು ಕಳೆದಾಗ ಅನೇಕ ಪ್ರಕಾರದ ಜಮೀನುಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಕಂದಾಯವನ್ನು ಪರಷ್ಕರಿಸುವ ಪ್ರಸ್ತಾವನೆಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲಾಯಿತು. ರಾಜ್ಯದ ವಿವಿಧೆಡೆ, ಕಂದಾಯ ಪದ್ಧತಿಗಳು ಪ್ರಚಲಿತವಿದ್ದು, ರಾಜ್ಯದಾದ್ಯಂತ ಅನ್ವಯವಾಗಬಲ್ಲ ಏಕರೂಪ ಭೂಕಂದಾಯ ವ್ಯವಸ್ಥೆಯ ರೂಪ–ರೇಷೆಗಳನ್ನು ನೀಡಲು ಭೂಕಂದಾಯ ಉಪ ಆಯುಕ್ತರನ್ನು ರಾಜ್ಯ ಸರ್ಕಾರ ನೇಮಕ ಮಾಡಿತು. ಅವರು ಇತರೆ ರಾಜ್ಯ ಸರ್ಕಾರಗಳ ಕಂದಾಯ ಪದ್ಧತಿಯನ್ನು ಅಭ್ಯಸಿಸಿ ಏಕರೂಪ ಪದ್ಧತಿಯ ವ್ಯವಸ್ಥೆಯನ್ನು ತಯಾರಿಸಿ ಮಂಡಿಸಿದರು. ಇದನ್ನು ವಿವರವಾಗಿ ಪರಿಶೀಲಿಸಿದ ಸರ್ಕಾರ ತನ್ನ ಸಮ್ಮತಿ ನೀಡಿತು. ೧೯೬೪ರಲ್ಲಿ ಮೈಸೂರು ಕಂದಾಯ ಶಾಸನವನ್ನು ಜಾರಿಗೊಳಿಸುವುದರ ಮೂಲಕ ರಾಜ್ಯದಾದ್ಯಂತ ಏಕರೂಪ ಭೂಕಂದಾಯ ವ್ಯವಸ್ಥೆ ಜಾರಿಯಾಯಿತು. ಈ ವ್ಯವಸ್ಥೆಯಡಿ ಕಂದಾಯ ಘಟಕಗಳನ್ನು 'ವಲಯ' ಗಳೆಂದು ಕರೆಯಲಾಯಿತು. ಇಂತಹ ವಲಯಗಳಲ್ಲಿ ಏಕರೀತಿಯ ಪ್ರಾಕೃತಿಕ ರಚನೆ, ಹವಾಮಾನ, ಮಳೆ, ಆಯಾ ಪ್ರದೇಶದ ಮುಖ್ಯ ಬೆಳೆಗಳು, ನೆಲದ ವಿಶೇಷ ಗುಣಗಳುಳ್ಳ ಪ್ರದೇಶದ ಸೇರ್ಪಡೆಯಾಯಿತು. ಇದನ್ನು ಆದಷ್ಟು ವೈಜ್ಞಾನಿಕವಾಗಿ ಕೈಗೊಳ್ಳಲಾಯಿತು. ಒಂದು ವಲಯದಡಿ ಬರುವ ಜಮೀನುಗಳನ್ನು ಪರಸ್ಪರ ಮೌಲ್ಯಗಳ ಪ್ರಕಾರ ವರ್ಗೀಕರಿಸಲಾಯಿತು. ಭೂ ಮಾಪನ ದಾಖಲೆಗಳಲ್ಲಿದ್ದಂತೆ ನೆಲ, ನೀರು ಹಾಗೂ ಇತರೆ ಸೌಕರ್ಯಗಳನ್ನನುಸರಿಸಿ, ವರ್ಗೀಕರಣ ಮೌಲ್ಯದ ಪ್ರಕಾರ ಜಮೀನನ್ನು ತರಿ, ಖುಷ್ಕಿ, ಬಾಗಾಯತು ಮತ್ತು ತೋಟಗಳು (ಕಾಫಿ, ಟೀ ಇತ್ಯಾದಿ) ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಲಾಯಿತು.

**ಪ್ರಮಾಣಿತ ದರ:** ಭೂಕಂದಾಯ ಕಾಯ್ದೆ ೧೯೬೪ರ ಪ್ರಕಾರ ಪ್ರಮಾಣಿತ ದರ ಎಂದರೆ ಶೇಕಡಾ ೧೦೦ರಷ್ಟು ವರ್ಗೀಕರಣ ಮೌಲ್ಯ ಪಡೆದಿರುವ ಒಂದು ವರ್ಗದ ಜಮೀನಿನಲ್ಲಿ ಬೆಳೆದ ಒಂದು ಎಕರೆಯ ಸರಾಸರಿ ಇಳುವರಿಯ ಶೇಕಡಾ ನಾಲ್ಕರಷ್ಟು ಮೌಲ್ಯಕ್ಕೆ ಸಮನಾದುದು ಎಂದರ್ಥ. ಪ್ರಮಾಣಿತ ದರ ಲೆಕ್ಕ ಹಾಕುವಾಗ ಭೂಕಂದಾಯಾಧಿಕಾರಿ (Settlement officer) ಜಮೀನಿನ ಸರಾಸರಿ ಇಳುವರಿಯ ಖಚಿತವಾದ ಪಾಲನ್ನು (ಹಣದ ರೂಪದಲ್ಲಿ) ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಇದು, ಹವಮಾನ, ಮಳೆ, ಸಂಪರ್ಕ ಸಾಧನ, ಮಾರುಕಟ್ಟೆಗಳ ಸಾಮೀಪ್ಯ, ಜಾನುವಾರು ವ್ಯವಸ್ಥೆಯಂತಹ ಅಂಶಗಳನ್ನು ಅವಲಂಬಿಸಿತ್ತು. ಭೂಕಂದಾಯ ವ್ಯವಸ್ಥೆ ಕಾರ್ಯಾಚರಣೆ ಪ್ರಾರಂಭವಾಗುವ ಮೊದಲಿನ ೩೦ ವರ್ಷಗಳ ಮಳೆಯ ವಿವರಗಳನ್ನು ಪರಿಗಣಿಸಲಾಗುತ್ತಿತ್ತು. ಇದರಿಂದ ಪ್ರಸ್ತುತ ದರಗಳ ತುಲನಾತ್ಮಕ ಅಂದಾಜು ದೊರೆಯುತ್ತಿತ್ತು. ಬೇಸಾಯ ಭೂಮಿಗಿಂತ ಜನಸಂಖ್ಯೆಯ ಭೂಪ್ರದೇಶ ಅಧಿಕವಾಗಿದ್ದಲ್ಲಿ ಜನಜೀವನದ ಮೇಲೆ ದುಷ್ಪರಿಣಾಮ ಉಂಟಾಗುತ್ತಿತ್ತು ಅಥವಾ ಜನಸಂಖ್ಯಾ ಕೊರತೆಯಿಂದ ಕೂಲಿ ಕೆಲಸದವರೇ ದೊರಕದಿರುವುದು ಸಹ ಒಂದು ಬಾಧಕವಾಗುತ್ತಿತ್ತು. ಜಾನುವಾರುಗಳ ಪರಿಸ್ಥಿತಿ, ಕೂಲಿದರ ಹಾಗೂ ಕೃಷಿ ಉತ್ಪನ್ನಗಳ ಬೆಲೆಗಳನ್ನೂ ಅವಲೋಕಿಸಲಾಗುತ್ತಿತ್ತು. ೧೯೩೦–೩೧ ರಿಂದ ೧೯೬೦–೬೧ರವರೆಗಿನ ೩೦ ವರ್ಷಗಳು ಸಕಲ ಬೆಳೆಗಳ ಬೆಲೆಗಳನ್ನು ಪರಿಗಣಿಸಲಾಯಿತು. ಒಂದು ವರ್ಗದ ಜಮೀನಿನ ಒಟ್ಟು ಇಳುವರಿ ತಿಳಿದುಕೊಳ್ಳಲು ಹಿಂದಿನ ಹತ್ತು ವರ್ಷಗಳ ಬೆಳೆ ಪ್ರಾತ್ಯಕ್ಷಿಕೆಯ ಫಲಿತಾಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ತದನಂತರ ದೊಡ್ಡ ಪ್ರಮಾಣದ ವ್ಯತ್ಯಾಸ ಕಂಡು ಬಂದಾಗ ಸಂದರ್ಭಾನುಸಾರ ಶುಲ್ಕ ರಿಯಾಯಿತಿ ನೀಡುವ ಅಥವಾ ಶುಲ್ಕವನ್ನು ಏರಿಸುವ ಅವಕಾಶವನ್ನು ಸರ್ಕಾರ ಉಪಯೋಗಿಸುತ್ತಿತ್ತು. ಈ ರೀತಿ ಪ್ರತಿಯೊಂದು ವರ್ಗದ ಜಮೀನಿನ ಪ್ರಮುಖ ಬೆಳೆಗಳ ಒಟ್ಟು ಉತ್ಪನ್ನದ ಆಧಾರದ ಮೇಲೆ ನಿರ್ಧರಿತವಾದ ಪ್ರಮಾಣಿತ ದರಗಳನ್ನು ಕುರಿತು ಭೂಕಂದಾಯ ಶಿಫಾರಸ್ಸುಗಳನ್ನು ಮಾಡಲಾಯಿತು. ನೂತನ ದರ ಹಾಗೂ ಭೂ ಕಂದಾಯ ವ್ಯವಸ್ಥೆಯ ವರದಿಗಳನ್ನು ಸಾರ್ವಜನಿಕ ಆಕ್ಷೇಪ ಮಂಡನೆಗೆ ಪ್ರಕಟಿಸಲಾಯಿತು. ಸಾಕಷ್ಟು ಕಾಲಾವಧಿಯ ನಂತರ ಈ ಎರಡನ್ನೂ ಜಿಲ್ಲಾಧಿಕಾರಿಗಳ ಅಭಿಪ್ರಾಯದೊಂದಿಗೆ ಶಾಸನ ಸಭೆಯಲ್ಲಿ ಮಂಡನೆಗಾಗಿ ಭೂ ಕಂದಾಯ ಆಯುಕ್ತರ ಮೂಲಕ ಸರ್ಕಾರಕ್ಕೆ ರವಾನಿಸಲಾಯಿತು. ವಿಧಾನಮಂಡಲದ ಎರಡೂ ಸದನಗಳ ಪರಿಶೀಲನೆಯ ನಂತರ ೧೯೬೫ರ ಡಿಸೆಂಬರ್‌ನಲ್ಲಿ ಪ್ರತೀ ವಲಯಕ್ಕೆ ಸಂಬಂಧಪಟ್ಟಂತೆ ಅಂಗೀಕೃತ ಪ್ರಮಾಣಿತ ದರಗಳನ್ನು ಅಧಿಸೂಚನೆಯೊಂದಿಗೆ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು.

ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಪರಿಚ್ಛೇದ ೧೧೪ ರಿಂದ ೧೨೬ ಹಾಗೂ ನಿಯಮ ೨೧ ರಿಂದ ೩೭, ಇವು ಭೂ ನಿಷ್ಕರ್ಷೆ ಹಾಗೂ ಭೂ ಕಂದಾಯ ನಿಗದಿಯ ಬಗ್ಗೆ ಮಾಹಿತಿಯನ್ನೊಳಗೊಂಡಿರುತ್ತವೆ. ಈ ಕಾಯ್ದೆ ೧೯೬೪ರಲ್ಲಿ ಜಾರಿಯಾದೊಡನೆ ರಾಜ್ಯದ ವಿವಿಧೆಡೆ ಭೂಕಂದಾಯದ ಪರಿಷ್ಕೃತ ನಿಷ್ಕರ್ಷೆಗಾಗಿ ಸರಕಾರ ಅಧಿಸೂಚನೆ ಹೊರಡಿಸಿತು ಹಾಗೂ ಇದಕ್ಕಾಗಿ ವಿಭಾಗ ವಲಯಗಳನ್ನೂ ರೂಪಿಸಿತು. ಹೊಸ ಭೂಕಂದಾಯದ ದರಗಳು ರಾಜ್ಯದ ೩೯ ವಲಯಗಳಲ್ಲಿ ದಿನಾಂಕ ೧.೭.೧೯೬೫, ೧.೭.೧೯೭೦ ಮತ್ತು ೧.೭.೧೯೭೬ರಿಂದ ಮೂರು ಹಂತಗಳಲ್ಲಿ ಜಾರಿಗೆ ಬಂದವು.

**ನೀರಿನ ದರ :** ಕರ್ನಾಟಕ ಸರ್ಕಾರದ ೧೯೮೦ರ ಅಧಿಸೂಚನೆಯನ್ವಯ ಕರ್ನಾಟಕ ನೀರಾವರಿ (ನೀರಿನ ದರ ಆಕರಣೆ) ನಿಯಮಗಳು ೧೯೬೫ರ ನಿಯಮ ೪ಕ್ಕೆ ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿ ಪ್ರಕಾರ ನೀರಾವರಿ ದರ (Water Rate) ಬೇಡಿಕೆ ಪತ್ರಿಕೆಯನ್ನು ತಯಾರಿಸಿ ತಹಶೀಲ್ದಾರರಿಗೆ ಕಳುಹಿಸುವ ಹೊಣೆಗಾರಿಕೆ ಆಯಾ ಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರದ್ದಾಗಿರುತ್ತದೆ. ಈ ಬೇಡಿಕೆ ಪತ್ರಿಕೆಯನ್ನು ತಯಾರಿಸುವ ಪೂರ್ವದಲ್ಲಿ ನಿಯಮ ೪ರ ಪ್ರಕಾರ ಈ ಕೆಳಗಿನಂತೆ ಕ್ರಮ ಜರುಗಿಸಬೇಕಾಗುತ್ತದೆ.

ನೀರಾವರಿ (ಲೋಕೋಪಯೋಗಿ) ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಂದ ನೀರಾವರಿ ಅಗತ್ಯಕ್ಕೆ ಸರ್ವೆ ನಂಬರುಗಳ ಜಂಟಿ ತಪಾಸಣೆ ಮಾಡಿ ಆ ಸರ್ವೆ ನಂಬರುಗಳಿಗೆ ನೀರು ಮುಟ್ಟಿದ ಬಗ್ಗೆ ಮತ್ತು ಬೆಳೆದ ಬೆಳೆಗಳ ಬಗ್ಗೆ ಮಾಹಿತಿ ಪಡೆಯಲಾಗುವುದು. ಜಂಟಿ ತಪಾಸಣೆಯನ್ನು ಸಾಮಾನ್ಯವಾಗಿ ನೀರಾವರಿ ಸೌಲಭ್ಯ ಪಡೆಯುವ ರೈತರ ಸಮಕ್ಷಮ ನಡೆಸಿ ಅವರ ಸಹಿಯನ್ನು ಪಡೆದುಕೊಳ್ಳಲಾಗುತ್ತಿತ್ತು. ತಪಾಸಣೆ ಪತ್ರಿಕೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಂಬಂಧಿಸಿದ ತಹಸೀಲ್ದಾರರಿಗೆ ಕಳುಹಿಸಬೇಕಾಗಿತ್ತು. ಜಂಟಿ ತಪಾಸಣೆಯಿಂದ ಕಂಡುಬಂದ ನೀರಾವರಿಯಾದ ಸರ್ವೆ ನಂಬರುಗಳ ಪತ್ರಿಕೆ ಸರಿ ಇದೆ ಎಂದು ಮನವರಿಕೆ ಮಾಡಿಕೊಂಡ ನಂತರ ಪ್ರತಿಯೊಂದು ಸರ್ವೆ ನಂಬರಿನ ರೈತರಿಂದ ಸಂದಾಯ ಮಾಡಬೇಕಾದ ನೀರಿನ ದರದ ಪತ್ರಿಕೆಯನ್ನು ಸಹಾಯಕ ಎಂಜಿನಿಯರು ತಯಾರಿಸಿ ನಂತರ ಗ್ರಾಮಚಾವಡಿ, ಪಂಚಾಯತ್ ಕಾರ್ಯಾಲಯ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಪಡಿಸಿ ಸಂಬಂಧಿಸಿದ ರೈತರಿಂದ ತಕರಾರುಗಳನ್ನು ಆಹ್ವಾನಿಸಿ, ತಕರಾರುಗಳು ಬಂದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಹಸೀಲ್ದಾರರೊಂದಿಗೆ ಅಂತಹ ಭೂಮಿಗಳ ತಪಾಸಣೆ ಮಾಡಿ ಸಂಬಂಧಿಸಿದ ರೈತರಿಗೆ ಅವಕಾಶ ಕೊಟ್ಟು ಅವರ ಹೇಳಿಕೆ ಪಡೆದುಕೊಂಡು ಅವಶ್ಯವಿದ್ದರೆ ನೀರಿನ ದರದ ಪತ್ರಿಕೆಯನ್ನು ಪರಿಷ್ಕರಿಸಿ ತಹಸೀಲ್ದಾರರಿಗೆ ಕಳುಹಿಸಿದ ಪತ್ರಿಕೆಯನ್ವಯ ವಸೂಲಿ ಮಾಡುವ ಕರ್ತವ್ಯ, ಕಂದಾಯ ಇಲಾಖೆಯದ್ದಾಗಿದೆ.

ಸರ್ಕಾರದ ಆದೇಶದ ಪ್ರಕಾರ ಈ ದರಗಳನ್ನು ಈ ಮುಂದಿನಂತೆ ಲೆಕ್ಕ ಮಾಡಬೇಕಾಗುತ್ತೆ. (೧) ಬೃಹತ್ ಮತ್ತು ಮಧ್ಯಮ ನೀರಾವರಿ ಕಾಮಗಾರಿ ಕೆಳಗೆ ನೀರಾವರಿ ಆಗತಕ್ಕ ಜಮೀನುಗಳಿಗೆ ದಿನಾಂಕ ೧.೭. ೧೯೮೫ ರಿಂದ ನೀರಿನ ದರಗಳನ್ನು ಆಕರಣೆ ಮಾಡಬೇಕಾಗುತ್ತದೆ. ೧.೭.೧೯೮೫ರ ಪೂರ್ವದಲ್ಲಿ ಅಂದರೆ ೧.೭.೧೯೭೮ ರಿಂದ ೩೦.೬. ೧೯೮೫ರವರೆಗೆ ಹಳೆಯ ನೀರಿನ ದರ ಆಕರಣೆ ಮಾಡಬೇಕಾಗುತ್ತದೆ (ದಿ.೧.೬.೧೯೭೬)ರ ದರದಂತೆ). (೨) ನಿಶ್ಚಿತ ನೀರಾವರಿ ಆಗದೆ ಇರುವ ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ಬರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ಅರ್ಧದಷ್ಟು ಆಕರಣೆ ಮಾಡಬೇಕು. (೩) ಚಿಕ್ಕ ನೀರಾವರಿ ಕೆರೆಗಳ ಕೆಳಗೆ ಬರುವ ಜಮೀನುಗಳಿಗೆ (Higher Reaches) ನಿಗದಿಪಡಿಸಿದ ನೀರಿನ ದರದ ಕಾಲು ಭಾಗದಷ್ಟು ಆಕರಣೆ ಮಾಡಬೇಕು. ಕನಿಷ್ಠ ದರವು ತರಿ ಆಕರ ಮತ್ತು ಖುಷ್ಕಿ ಆಕರದ ನಡುವಿನ ಅಂತರ ಒಂದೂವರೆ ಪಟ್ಟು ಇರಬೇಕು. ಗರಿಷ್ಟ ದರವು ತರಿ ಆಕರ ಮತ್ತು ಖುಷ್ಕಿ ಆಕರದ ನಡುವಿನ ಎರಡು ಪಟ್ಟು ಇರಬೇಕು. ಹೈಯರ್ ಮತ್ತು ಲೋವರ್ ರೀಚಸ್‌ಗಳಲ್ಲಿಯಂತೆಯೇ, ಕಡಿತಗೊಂಡ ನೀರಿನ ದರಗಳ ಆಕರಣೆ ೧.೭.೧೯೭೬ರಿಂದ ಜಾರಿಯಲ್ಲಿ ಬಂದಿತ್ತು. ಉಲ್ಲೇಖಿತ ಸರ್ಕಾರದ ಆದೇಶದ ಕಂಡಿಕೆ (೫) ರಲ್ಲಿ ಆದೇಶಿಸಿದಂತೆ ಸಣ್ಣ ನೀರಾವರಿ ಕೆರೆಗಳ ಅಡಿಯಲ್ಲಿ ಬರತಕ್ಕ ಜಮೀನುಗಳಿಗೆ ೩೦.೬.೧೯೭೬ರವರೆಗೆ ಆಕರಣೆ ಆದ ನೀರಿನ ದರಗಳ ವಸೂಲಿಯಾಗದೆ ಇದ್ದ ಬಾಕಿಯನ್ನು ಸರ್ಕಾರ ಮನ್ನಾ ಮಾಡಿತು. ಸರ್ಕಾರ ಈ ಬಗ್ಗೆ ದಿನಾಂಕ ೨೪.೭.೧೯೮೫ರಂದು ಆದೇಶ ಹೊರಡಿಸಲಾಗಿದೆ. ಆ ನೀರಿನ ದರಗಳನ್ನು ಜಾರಿಯಲ್ಲಿ ತರಲು ಕರ್ನಾಟಕ ನೀರಾವರಿ (Water Rate) ನಿಯಮಗಳು ೧೯೬೫ ಕ್ಕೆ ಸರ್ಕಾರದವರು ದಿನಾಂಕ ೪.೧೧.೧೯೮೭ ರಂದು ತಿದ್ದುಪಡಿ ಹೊರಡಿಸಿದೆ.

**ನಿರ್ವಹಣೆ ಕರ:** ಕರ್ನಾಟಕ ನೀರಾವರಿ ಕಾಯ್ದೆ ೧೯೬೫ರ ಕಲಂ ೪೪ರನ್ವಯ ಮತ್ತು ಕರ್ನಾಟಕ ನೀರಾವರಿ ನಿಯಮಗಳು ೧೯೬೫ರ ನಿಯಮ ೨೧–ಎರಂತೆ ಪ್ರತೀ ವರ್ಷಕ್ಕೆ ರೂ.೪.೦೦ ರಂತೆ ನಿರ್ವಹಣಾ ಕರವನ್ನು ತಹಶೀಲ್ದಾರರು ಆಕರಣೆ ಮತ್ತು ವಸೂಲಿ ಮಾಡಬೇಕಾಗುತ್ತದೆ. ಆದರೆ ಸತತ ಎರಡು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಗೆ ಜಮೀನುಗಳಿಗೆ ನೀರು ಪೂರೈಕೆ ಆಗದಿದ್ದರೆ ಆ ನಿರ್ವಹಣಾ ಕರ ಆಕರಣೆ ಮಾಡುವಂತಿಲ್ಲ.

**ನೀರಿನ ದಂಡದ ಕರ:** ಕರ್ನಾಟಕ ನೀರಾವರಿ ಕಾಯ್ದೆ ೧೯೬೫ರ ಕಲಂ ೨೮ (೫) ರನ್ವಯ ನೀರಾವರಿ ಅಧಿಕಾರಿಗಳಿಂದ ಪರವಾನಗಿ ಪಡೆಯದೆ ಸರಕಾರದ ಮೂಲಗಳಿಂದ ನೀರನ್ನು ಬಳಸಿಕೊಂಡರೆ ಆ ಬಗ್ಗೆ ದಂಡ

ಸಂದಾಯ ಮಾಡಬೇಕಾಗುವುದು. ಇಂತಹ ದಂಡ ಸಾಮಾನ್ಯ ನೀರಿನ ದರದ ೧೫ ಪಟ್ಟು ಆಗಿರುತ್ತದೆ. ಇದೇ ಕಾಯ್ದೆಯ ಕಲಂ ೩೨(೪) ರನ್ವಯ ಅಧಿಸೂಚಿತ ಬೆಳೆಗಳನ್ನು ಹೊರತುಪಡಿಸಿ ಬೇರೆ ಬೆಳೆಗಳನ್ನು ಬಿತ್ತಿದರೆ ಅಥವಾ ಬೆಳೆದರೆ ಸಾಮಾನ್ಯ ನೀರಿನ ದರದ ೧೦ ಪಟ್ಟು ದಂಡ ಸಂದಾಯ ಮಾಡಬೇಕಾಗುವುದು. ಮೇಲ್ಕಾಣಿಸಿದ ನೀರಿನ ದಂಡದ ಕರಗಳು ೧.೭.೧೯೮೫ ರಿಂದ ಜಾರಿಯಲ್ಲಿ ಬಂದಿರುತ್ತದೆ.

ಹಳೆಯ ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದ 'ಮೈಸೂರು ಭೂಕಂದಾಯ ಕೈಪಿಡಿ' ಯ ೧೩೩ನೇ ಕಾಲಂನಲ್ಲಿ ನೀರು ಸರಬರಾಜಿಗಾಗಿ ನೀರಿನ ವಾರ್ಷಿಕ ದರಗಳ ಬಗ್ಗೆ ಹೇಳಲಾಗಿತ್ತು. ನೀರಿನ ತೆರಿಗೆಯನ್ನು ಭೂಮಾಪನ ಇಲಾಖೆ ನಿಗದಿ ಮಾಡುತ್ತಿದ್ದು, ನೀರಾವರಿ ಜಮೀನಿನ ವಾರ್ಷಿಕ ತೆರಿಗೆಯನ್ನು ಆ ಇಲಾಖೆಯೇ ನಿರ್ಧರಿಸುತ್ತಿತ್ತು. ಸರ್ಕಾರದ ನೀರನ್ನು ಬಳಸಿ ಖುಷ್ಕಿ ಭೂಮಿಯು ತರಿಯಾಗಿ ಪರಿವರ್ತನೆ ಹೊಂದಿದಲ್ಲಿ, ಅದರ ಕಂದಾಯ ನೆರೆಯ ಗ್ರಾಮದ ಅಂಥ ಜಮೀನಿನ ಕಂದಾಯವನ್ನವಲಂಬಿಸಿ ನಿಗದಿಯಾಗುತ್ತಿತ್ತು. ಸುಧಾರಿತ ನೀರಿನ ತೆರಿಗೆ ಮತ್ತು ಬೇಸಿಗೆಯಲ್ಲಿ ವಿಶೇಷವಾಗಿ ಸರಬರಾಜು ಮಾಡುವ ನೀರಿನ ತೆರಿಗೆ ದರಗಳನ್ನು ಭೂಕಂದಾಯದೊಡನೆಯೇ ವಸೂಲು ಮಾಡಲಾಗುತ್ತಿತ್ತು. ೧೯೬೨ ರಿಂದ ೧೯೮೨ ರ ಅವಧಿಯಲ್ಲಿ ಹಲವಾರು ತಿದ್ದುಪಡಿಗಳನ್ನು ಮಾಡಿದ ನಂತರ ಮುಂದೆ ನೀಡಿರುವಂತೆ ತೆರಿಗೆಗಳನ್ನು ವಿಧಿಸಲಾಯಿತು. (ಎಕರೆಗಳಿಗೆ ರೂ.ಗಳಲ್ಲಿ) ಕಬ್ಬು (೧೨ ತಿಂಗಳು) ೧೫೦; ಕಬ್ಬು (೧೩ ರಿಂದ ೧೮ ತಿಂಗಳು) ೨೨೪; ಬತ್ತ ೪೫; ಗೋಧಿ ೨೪; ಜೋಳ ೨೪; ಕಡಲೆಕಾಯಿ ೨೪; ಹತ್ತಿ ೪೮; ರಾಗಿ, ಸಜ್ಜೆ, ಹೆಸರುಕಾಳು, ಗೆಣಸು, ತಂಬಾಕು, ಕೊತ್ತಂಬರಿ ೨೪; ಕಾಳುಗಳು ೧೮; ಗೊಬ್ಬರಾವಲಂಬಿತ ಬೆಳೆಗಳು ೯ ಹಾಗೂ ತೋಟದ ಬೆಳೆಗಳು ೫೦.

**ಕೋಷ್ಟಕ ೯.೮ ೧೯೯೪–೯೫ ರಿಂದ ೨೦೧೨–೧೩ರವರೆಗೆ ಭೂಸರ್ವೇಕ್ಷಣ ಭೂದಾಖಲೆ ಇಲಾಖೆಯಿಂದ ವಸೂಲಾದ ಕಂದಾಯ ವಿವರ (ರೂ. ಗಳಲ್ಲಿ)**

| ತಾಲೂಕು | ಸಾಲು | ಹದ್ದುಬಸ್ತು ಅಳತೆ ಬಾಬ್ತು | ನಕಲುಗಳ ಬಾಬ್ತು | ಗ್ರಾಮ ನಕಾಶೆ ಬಾಬ್ತು | ತತ್ಕಾಲ್ ಪೋಡಿ ಬಾಬ್ತು | ೧೧ಇ ನಕ್ಷೆ ಬಾಬ್ತು | ಇತರೆ | ಒಟ್ಟು |
|---|---|---|---|---|---|---|---|---|
| **ತುಮಕೂರು** | ೨೦೦೫–೨೦೧೩ | ೭,೯೬,೮೮೪ | ೨೪,೩೯,೩೫೩ | ೫,೩೧೨ | ೧೫,೧೫,೦೦೦ | ೯,೦೭,೦೦೦ | | ೫೬,೬೩,೫೪೯ |
| **ಗುಬ್ಬಿ** | ೧೯೯೮–೨೦೧೩ | ೮,೫೧,೫೯೮ | ೩೩,೨೩,೧೮೬ | – | ೪,೦೦,೫೦೦ | – | ೧೯,೬೫೦ | ೪೫,೯೪,೯೩೪ |
| **ಕುಣಿಗಲ್** | ೧೯೯೯–೨೦೧೩ | ೧,೩೧,೧೮೦ | ೧,೮೧,೩೫೦ | – | ೪,೩೨,೯೩೨ | ೨೯,೯೨,೫೮೭ | – | ೩೭,೩೮,೦೪೯ |
| **ತಿಪಟೂರು** | ೧೯೯೪–೨೦೧೩ | ೬,೨೫,೬೯೨ | ೧೯,೯೦,೪೩೪ | – | ೩,೧೧,೫೦೦ | ೪೫,೪೪,೯೮೨ | – | ೭೪,೭೨,೬೦೮ |
| **ತುರುವೇಕೆರೆ** | ೨೦೦೩–೨೦೧೩ | ೩,೩೬,೧೪೩ | ೮,೨೭,೬೫೧ | ೧,೮೦೧ | ೨,೩೨,೪೨೫ | ೪೭,೮೯,೪೨೭ | ೪,೦೩೧ | ೬೧,೯೧,೪೭೮ |
| **ಚಿ.ನಾ ಹಳ್ಳಿ** | ೧೯೯೮–೨೦೧೩ | ೩,೬೦,೬೭೫ | ೭,೦೯,೮೨೨ | ೩,೧೨೩ | ೧,೨೮,೨೭೦ | ೪೭,೪೮,೮೧೩ | ೨೧,೫೪೫ | ೫೯,೭೨,೨೪೮ |
| ಮಧುಗಿರಿ | ೧೯೯೪–೨೦೧೩ | ೮,೮೬,೪೨೪ | ೧೭,೮೮,೨೨೫ | ೨೩,೫೬೪ | ೪,೬೨,೦೦೦ | ೨೪,೨೮,೯೦೫ | – | ೫೫,೮೯,೧೧೮ |
| **ಕೊರಟಗೆರೆ** | ೧೯೯೭–೨೦೧೩ | ೬,೨೭,೫೨೫ | ೭,೧೭,೯೫೧ | ೨,೮೭೨ | ೨,೫೯,೧೧೦ | ೩೨,೧೬,೦೦೦ | – | ೪೮,೨೩,೪೫೮ |
| ಶಿರಾ | ೨೦೦೫–೨೦೧೩ | ೮,೧೩,೭೪೦ | ೧೧,೮೫,೯೫೭ | ೮೭೫ | ೫,೨೧೦೦೦ | ೧೬,೪೦,೧೦೦ | – | ೪೧,೬೧,೬೭೨ |
| ಪಾವಗಡ | ೨೦೦೫–೨೦೧೩ | ೩,೧೦,೭೪೦ | ೨,೩೫,೪೮೪ | – | ೧,೭೪,೬೨೦ | ೨೬,೬೦,೫೫೮ | – | ೩೩,೮೧೪೦೨ |
| **ಒಟ್ಟು** | | **೫೭,೪೦,೬೦೧** | **೧,೩೩,೯೯,೪೧೩** | **೩೭,೫೪೭** | **೪೪,೩೭,೩೫೭** | **೨,೭೯,೨೮,೩೭೨** | **೪೫,೨೨೬** | **೫,೧೫,೮೮,೫೧೬** |

**ಭೂಕಂದಾಯ ಲೆಕ್ಕ:** ಭೂಮಾಪನದ ಆಧಾರದ ಮೇಲೆ ಭೂಕಂದಾಯ ವ್ಯವಸ್ಥೆಯ ಲೆಕ್ಕಕ್ಕೆ ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ಇಲಾಖೆಯು ಭೂಕಂದಾಯ ವ್ಯವಸ್ಥೆಯ ನೋಂದಣಿ ಪುಸ್ತಕವನ್ನು ತಯಾರಿಸುತ್ತದೆ. ಇದರಲ್ಲಿ ಪ್ರತೀ ಸರ್ವೆ ಸಂಖ್ಯೆಯ ಕಂದಾಯ, ಕೃಷಿಯಾಗದ ಭೂಭಾಗದ ವಿವರ, ಭೂಮಾಲೀಕರ ಹೆಸರು ಇವೆಲ್ಲಾ ನಮೂದಾಗಿರುತ್ತವೆ. ಸರ್ವೆ ನಂಬರುಗಳನ್ನೊಳಗೊಂಡ ಪುಸ್ತಕವನ್ನು 'ಆಕಾರ ಬಂದ್' ಎನ್ನುತ್ತಾರೆ. ಇದರಲ್ಲಿ ಭೂಮಿಯ ಒಟ್ಟು ವಿಸ್ತೀರ್ಣ, ಕೃಷಿಯೋಗ್ಯ ಹಾಗೂ ಯೋಗ್ಯವಲ್ಲದ ಖುಷ್ಕಿ, ತರಿ, ಬಾಗಾಯಿತು ವಿವರಗಳು, ಪ್ರತೀ ಎಕರೆಯ ದರ, ಕಂದಾಯ, ಒಟ್ಟು ಸರ್ವೆ ಸಂಖ್ಯೆಗೆ ನಿಗದಿಯಾದ ಕಂದಾಯ–ಇವೆಲ್ಲ ನಮೂದಾಗಿರುತ್ತವೆ. ಇದನ್ನವಲಂಬಿಸಿ ಗ್ರಾಮಲೆಕ್ಕಿಗರು 'ಖೇತವಾರು ಪತ್ರಿಕೆ'ಯನ್ನು ತಯಾರಿಸುತ್ತಾರೆ.

ಈ ಖೇತವಾರು ಪತ್ರಿಕೆಯ ಆಧಾರದ ಮೇಲೆ ಗ್ರಾಮಲೆಕ್ಕಿಗನು ಗ್ರಾಮದ ಎಲ್ಲಾ ಜಮೀನುಗಳ ವಾಸ್ತವಾಂಶಗಳನ್ನು ದಾಖಲಿಸುತ್ತಾನೆ. ಕಂದಾಯ ದಾಖಲೆಗಳಲ್ಲಿ ಇದು ಬಹು ಪ್ರಮುಖ ದಾಖಲೆ. ಇದರಲ್ಲಿ ಪ್ರತೀ ಮಾಲಿಕನ ಹೆಸ–ರಿನಲ್ಲಿರುವ ಭೂವಿಸ್ತೀರ್ಣ, ಕಂದಾಯ, ನೀರಾವರಿ ದರ, ಭೂವರ್ಗೀಕರಣ, ಗೇಣಿದಾರನ ಹೆಸರಿನಲ್ಲಿರುವ ಹಕ್ಕಿನ ಸ್ವರೂಪ, ಉತ್ಪಾದಿಸಿದ ಬೆಳೆಗಳ ವಿವರ ಮುಂತಾದ ಎಲ್ಲಾ ಅಂಶಗಳೂ ನಮೂದಾಗಿರುತ್ತವೆ. ಖಾತೆ ರಿಜಿಸ್ಟರನ್ನು ಪ್ರತಿ ವರ್ಷ ಜುಲೈ ಒಂದನೇ ತಾರೀಖಿನಂದು ಹೊಸದಾಗಿ ಬರೆಯಬೇಕು. ರೈತರಿಂದ ಪಡೆಯಲಾದ ಕಂದಾಯ ಇತರೆ ಬಾಕಿಯನ್ನು ರಸೀತಿ ಪುಸ್ತಕದಲ್ಲಿ ನಮೂದಿಸಿ, ಆಯಾ ತಿಂಗಳಿನ ಡಿ.ಸಿ.ಬಿ (ಬೇಡಿಕೆ, ವಸೂಲಿ, ಬಾಕಿ) ತ:ಖ್ತೆಯಲ್ಲಿ ಬರೆದಿಡಬೇಕು. ಜೂನ್ ೩೦ ರಂದು ಕಂದಾಯ ವರ್ಷದ ಆಖೈರು ದಿನಕ್ಕೆ ಪ್ರತಿ ಗ್ರಾಮದ ಐಟಂವಾರು ಕಂದಾಯ ಲೆಕ್ಕವನ್ನು ಆಖೈರುಗೊಳಿಸಬೇಕು. ಗೇಣಿ, ಹಕ್ಕು ದಾಖಲೆ ಹಾಗೂ ಬೆಳೆಗಳ ದಾಖಲೆಯನ್ನೊಳಗೊಂಡ 'ರೆಕಾರ್ಡ್ ಆಫ್ ಟೆನೆನ್ಸಿ ಅಂಡ್ ಕ್ರಾಪ್ಸ್' ಪುಸ್ತಕದ ಮೂಲ ಪ್ರತಿಯನ್ನು ಗ್ರಾಮಲೆಕ್ಕಿಗ ತನ್ನ ಕಛೇರಿಯಲ್ಲಿ ಇಟ್ಟುಕೊಂಡು, ಅದರ ದ್ವಿಪ್ರತಿಯನ್ನು ತಾಲೂಕು ಕಛೇರಿಯಲ್ಲಿಡುತ್ತಾನೆ. ಹಕ್ಕುಗಳ ಬದಲಾವಣೆ, ಅವುಗಳ ಕುರಿತ ವರದಿ ಬಂದ ನಂತರ, ಅವುಗಳನ್ನು ಪರಿಶೀಲಿಸಿ ಈ ನೋಂದಣಿ ಪುಸ್ತಕದಲ್ಲಿ ದಾಖಲಿಸಲಾಗುತ್ತದೆ ಹಾಗೂ ಐದು ವರ್ಷಗಳಿಗೊಮ್ಮೆ ಇದನ್ನು ಹೊಸದಾಗಿ ಬರೆಯಲಾಗುತ್ತದೆ. ಈಗ ಅದನ್ನು ಗಣಕೀ (ಕಂಪ್ಯೂಟರೀ) ಕೃತಗೊಳಿಸಿದೆ.

**ಜಮಾಬಂದಿ**

'ಜಮಾ' ಎಂದರೆ ಸರ್ಕಾರಕ್ಕೆ ಪಾಲು, 'ಬಂದಿ' ಎಂದರೆ ಸರ್ಕಾರಕ್ಕೆ ಬರುವ ಆದಾಯ ನಿಗದಿಪಡಿಸುವುದು ಎಂದು ಅರ್ಥ. ರಾಜನಿಗೆ ಬರಬೇಕಾದ ಪಾಲನ್ನು (ರಾಜಸ್ವ) ನಿಗದಿಪಡಿಸುವುದು ಬಹು ಹಿಂದಿನಿಂದಲೂ ನಡೆದು ಬಂದಿದೆ. ಅದೇ ರೀತಿ ಸರಕಾರಕ್ಕೆ ಬರುವ ಕಂದಾಯ (ರಾಜಸ್ವ) ನಿಗದಿಪಡಿಸುವುದೇ ಜಮಾಬಂದಿ. 'ಆಕಾರಬಂದ್' ಶಬ್ದವನ್ನು ಉದಾಹರಣೆಗೆ ತೆಗೆದುಕೊಂಡರೆ, 'ಆಕಾರ' (ಆಕರಣೆ) ಎಂದರೆ ಒಂದು ನಿರ್ದಿಷ್ಟ ಜಮೀನಿನ ಉತ್ಪತ್ತಿಯ ಒಂದಂಶವನ್ನು ಸರ್ಕಾರದ ಪಾಲೆಂದು ನಿಗದಿಪಡಿಸಿ ಹಣದ ರೂಪದಲ್ಲಿ ವಸೂಲಿ ಮಾಡಬೇಕಾದ ಮೊಬಲಗನ್ನು ತಿಳಿಸುವುದು. 'ಬಂದ್' ಎಂದರೆ ನಿರ್ಧಾರ ಪಡಿಸುವುದು. ಈ ಆಕರಣೆಯೇ ಭೂಕಂದಾಯ. ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಪ್ರತಿ ೩೦ ವರ್ಷಗಳಿಗೊಮ್ಮೆ ಪ್ರತಿಯೊಂದು ಜಮೀನನ್ನು ಅಳತೆ ಮಾಡಿಸಿ ಅದರ ಫಲವತ್ತತೆ, ಉತ್ಪತ್ತಿ, ಮಳೆ ಇತ್ಯಾದಿಗಳ ಆಧಾರದ ಮೇಲೆ ಆಕಾರಬಂದ್ ತಯಾರಿಸಿ, ಅದರ ಆಧಾರದ ಮೇಲೆ ಭೂಕಂದಾಯ ನಿರ್ಧರಿಸುವರು.

ಭೂಕಂದಾಯ ನಿಗದಿಯಾದ ಜಮೀನುಗಳ ಅದಿಭೋಗದಾರರು ಪ್ರತೀ ಕಂದಾಯ ಸಾಲಿಗೂ ಭೂಕಂದಾಯ ಕೊಡಬೇಕಾಗುತ್ತದೆ. ಪ್ರತಿಯೊಂದು ಜಮೀನಿನ ಅದಿಭೋಗದಾರನು ಪ್ರಸ್ತುತ ಕಂದಾಯ ಸಾಲಿಗೆ ಕೊಡಬೇಕಾದ ಭೂಕಂದಾಯವೆಷ್ಟು, ಸೆಸ್ಸುಗಳೆಷ್ಟು ಎಂಬುದನ್ನು ಜಿಲ್ಲಾಧಿಕಾರಿಗಳು ನಿರ್ಧರಿಸುವರು. ಪ್ರತೀ ವರ್ಷದ ಜುಲೈ ಒಂದನೇ ತಾರೀಖಿನಿಂದ ತದನಂತರದ ವರ್ಷದ ಜೂನ್ ೩೦ನೇ ತಾರೀಖಿನ ಅವಧಿಗೆ ಕಂದಾಯ ವರ್ಷವೆನ್ನುವರು. ಪ್ರತಿಯೊಂದು ಅದಿಭೋಗದಾರನ ಲೆಕ್ಕವನ್ನು ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳು ದೃಢೀಕರಿಸಬೇಕಾಗುತ್ತದೆ. ಈ ರೀತಿ ಕಂದಾಯ ಸಾಲಿನ ಲೆಕ್ಕಗಳನ್ನು ದೃಢೀಕರಿಸುವ ಕಾರ್ಯವನ್ನು ವಿಶೇಷಾರ್ಥದಲ್ಲಿ 'ಹುಜೂರ್ ಜಮಾಬಂದಿ' ಎಂದು ಕರೆಯುತ್ತಾರೆ.

'ದಿತ್ತಂ (ದಿಟ್ಟಂ) ಜಮಾಬಂದಿ' ಮತ್ತು 'ಹುಜೂರ್ ಜಮಾಬಂದಿ', ಜಮಾಬಂದಿಯ ಎರಡು ವಿಧಗಳಾಗಿದ್ದು, ಜಿಲ್ಲಾಧಿಕಾರಿ ಅಥವಾ ಉಪವಿಭಾಗಾಧಿಕಾರಿ ನಡೆಸುವ ವಾರ್ಷಿಕ ಲೆಕ್ಕಪತ್ರ ತಪಾಸಣೆಯೇ ಹುಜೂರ್ ಜಮಾಬಂದಿ. ಹುಜೂರ್ ಜಮಾಬಂದಿಯು ಅತಿ ಮಹತ್ವದ ಕಂದಾಯ ಕೆಲಸ. ಇದು ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿಂದ ಡಿಸೆಂಬರ್ ತಿಂಗಳ ಒಳಗೆ ನಡೆಯುತ್ತದೆ. ಈ ಸಮಯದಲ್ಲಿ ಹಿಂದಿನ ವರ್ಷದ ಗ್ರಾಮಲೆಕ್ಕದ ಪರಿಶೀಲನೆ ಹಾಗೂ ದೃಢೀಕರಣ ನಡೆಯುವುದಲ್ಲದೆ, ಪ್ರಸಕ್ತ ವರ್ಷದ ಕಂದಾಯ ಹಾಗೂ ಇತರ ಬಾಕಿಗಳ ಬಗ್ಗೆ ನಿರ್ಧರಿಸಲಾಗುತ್ತದೆ. ಜಮಾಬಂದಿ ಅಧಿಕಾರಿ ತಮ್ಮ ವಲಯ ಅಥವಾ ಗ್ರಾಮಕ್ಕೆ ಭೇಟಿಗಾಗಿ ಬಂದಾಗ, ರೈತರಿಗೆ ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಅವುಗಳನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ರೈತರಿಗೆ ಜಮಾಬಂದಿ ದಿನಾಂಕಗಳನ್ನು ಪೂರ್ವಭಾವಿಯಾಗಿ ತಿಳಿಸಲಾಗುತ್ತದೆ. ಇಂತಹ ಅಹವಾಲುಗಳನ್ನು ಜಮಾಬಂದಿ ಅಧಿಕಾರಿ ಆಯಾ ಸ್ಥಳದಲ್ಲಿಯೇ ನಿರ್ಧರಿಸುತ್ತಾರೆ. ಜಮಾಬಂದಿ ನಡೆದ ಅಧಿಕಾರಿಗಳು ನೀಡಿದ ವರದಿಯನ್ನು ೧೫ ದಿನದೊಳಗಾಗಿ ಅಧಿಕಾರಿಯು ಸರಕಾರಕ್ಕೆ ಕಳುಹಿಸಬೇಕಾಗುತ್ತದೆ.

ಇವೇ ಅಲ್ಲದೆ, ತಹಸೀಲ್ದಾರನು ಸರಕಾರದಿಂದ ಪ್ರಾರಂಭವಾಗಿರುವ ಸಾಮಾಜಿಕ–ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗಂಭೀರ ಆಸಕ್ತಿಯನ್ನು ತೋರಿಸಬೇಕು. ಡಿತ್ತಂ(ದಿಟ್ಟಂ) ಜಮಾಬಂದಿಯ ಕಾಲದಲ್ಲಿ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಅವನು ಕೆಳಗಿನ ಕಾರ್ಯಗಳನ್ನು ತಪ್ಪದೇ ಗಮನಿಸಬೇಕು.

೧) ವಿಲೇವಾರಿಗೆ ಲಭ್ಯವಿರುವ ಜಮೀನುಗಳ ಪಟ್ಟಿಗಳನ್ನು ಪರಿಷ್ಕರಿಸಬೇಕು.

೨) ಭೂ ಮಂಜೂರಾತಿ ನಿಯಮಗಳು ಮತ್ತು ಭೂ ಸುಧಾರಣಾ ಅಧಿನಿಯಮ ಪ್ರಕಾರ ಜಮೀನುಗಳನ್ನು ನಿರ್ದಿಷ್ಟ ಅವಧಿಯವರೆಗೆ ಪರಭಾರೆ ಮಾಡಕೂಡದೆಂಬ ಷರತ್ತಿನ ಉಲ್ಲಂಘನೆಯಾಗಿಲ್ಲವೆಂಬುದನ್ನು ಸ್ಥಳೀಯ ವಿಚಾರಣೆ ಮೂಲಕ ದೃಢೀಕರಿಸಿಕೊಳ್ಳಬೇಕು.

೩) ಜನನ–ಮರಣಗಳ ವಹಿಯ ನಿಖರತೆಯನ್ನು ಸ್ಥಳೀಯ ವಿಚಾರಣೆಗಳಿಂದ ಖಚಿತಪಡಿಸಿಕೊಳ್ಳಬೇಕು.

೪) ಹಕ್ಕುಪತ್ರಗಳು ಮತ್ತು ಇತರೆ ದಸ್ತಾವೇಜುಗಳ ಪರಿಶೋಧನೆ ಮೂಲಕ ಪಟ್ಟಾಗಳ ಹಸ್ತಾಂತರ ಕುರಿತಾದ ವ್ಯಾಜ್ಯಗಳನ್ನು ಪರಿಹರಿಸಬೇಕು.

೫) ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಇತರೆ ದುರ್ಬಲ ವರ್ಗದ ಜನರು ವಾಸಿಸುವ ಪ್ರದೇಶಗಳಲ್ಲಿ ಸಾರ್ವಜನಿಕ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್ ಸರಬರಾಜು, ರಸ್ತೆಗಳು ಮುಂತಾದವುಗಳನ್ನು ಒದಗಿಸುವಲ್ಲಿ ಆಗಿರುವ ಪ್ರಗತಿ.

೬) ಗೃಹರಹಿತ ಅಥವಾ ನಿವೇಶನ ರಹಿತ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಮನೆ/ನಿವೇಶನ ನೀಡಲು ಬೇಕಾದ ಕ್ರಮವನ್ನು ತೆಗೆದುಕೊಳ್ಳುವುದು.

೭) ಗೃಹರಹಿತರು ಮತ್ತು ನಿವೇಶನ ರಹಿತರಿಗೂ ಗುರ್ತಿಸಲ್ಪಟ್ಟಿರುವ ಪ್ರದೇಶ, ಗಡಿ ಗುರ್ತಿಸುವ ಕಾರ್ಯದ ಪ್ರಗತಿಯನ್ನು ಪರಿಶೀಲಿಸಬೇಕು ಮತ್ತು ಈಗಾಗಲೇ ಗೃಹ ಅಥವಾ ನಿವೇಶನದ ಹಂಚಿಕೆಯಾಗಿರುವವರಿಗೆ ಅವುಗಳ ಸ್ವಾಧೀನತೆ ನೀಡಲು ಕ್ರಮ ತೆಗೆದುಕೊಳ್ಳಬೇಕು.

೮) ಕೃಷಿ ಮಜೂರಿ ಅಧಿನಿಯಮದಲ್ಲಿ ಗೊತ್ತುಪಡಿಸಿರುವಷ್ಟು ಮಜೂರಿಯನ್ನು ಕೃಷಿಕಾರ್ಮಿಕರಿಗೆ ನೀಡಲಾಗುತ್ತಿದೆಯೇ ಇಲ್ಲವೇ ಎಂಬುದನ್ನು ಸ್ಥಳೀಯ ವಿಚಾರಣೆ ಮೂಲಕ ತಹಸೀಲ್ದಾರನು ಖಾತರಿಪಡಿಸಿಕೊಳ್ಳಬೇಕು.

೯) ಕರ್ನಾಟಕ ಋಣ ಪರಿಹಾರ ಅಧಿನಿಯಮ ೧೯೮೦ರ ಅಡಿಯಲ್ಲಿ ಸಾಧಿಸಲಾದ ಪ್ರಗತಿಯ ಪರಿಶೀಲನೆ, ಜೀತದಾಳು ಪದ್ಧತಿಯ (ರದ್ಧತಿ) ಅಧಿನಿಯಮ, ೧೯೭೬ವನ್ನು ಜಾರಿಗೆ ತರುವಲ್ಲಿ ಉಂಟಾಗಿರುವ ಪ್ರಗತಿಯ ಪರಿಶೀಲನೆ ಮತ್ತು ವಾರ್ಷಿಕ ಕಾರ್ಮಿಕ ಒಪ್ಪಂದದ ಸೋಗಿನಲ್ಲಿ ಜೀತದಾಳು ಪದ್ಧತಿಯು ಮರುಹುಟ್ಟು ಪಡೆದಿದೆಯೇ ಎಂಬುದನ್ನು ಸ್ಥಳೀಯ ವಿಚಾರಣೆಗಳ ಮೂಲಕ ತಿಳಿದುಕೊಳ್ಳಲು ಯತ್ನಿಸಬೇಕು.

೧೦) ಭೂ ಸುಧಾರಣೆ ಅಧಿನಿಯಮದ ಪ್ರಕಾರ ಗೇಣಿದಾರರು, ಕೃಷಿಕಾರ್ಮಿಕರು ಮತ್ತು ಕುಶಲಕರ್ಮಿಗಳಿಗೆ ನಿವೇಶನಗಳ ಮೇಲೆ ಮಾಲೀಕತ್ವದ ಹಕ್ಕು ನೀಡಿಕೆಯಲ್ಲಿ ಆಗಿರುವ ಪ್ರಗತಿಯನ್ನು ತಹಸೀಲ್ದಾರನು ಪರಿಶೀಲಿಸಬೇಕು.

೧೧) ಗ್ರಾಮದಲ್ಲಿ ಅಗತ್ಯ ವಸ್ತುಗಳ ಹಂಚಿಕೆಗಾಗಿ ಮಾಡಲಾಗಿರುವ ಏರ್ಪಾಟುಗಳನ್ನು ಪರಿಶೀಲಿಸಬೇಕು.

ಸರಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ:೭೬:ಟಿಆರ್‌ಆರ್:೭೮, ದಿನಾಂಕ ೧ನೇ ಜನವರಿ ೧೯೭೯ರ ಪ್ರಕಾರ ಜಮಾಬಂದಿಯ ಕಾಲದಲ್ಲಿ ಹುಜೂರು ಜಮಾಬಂದಿಗಾಗಿ ತೆರಳಿರುವ ಅಧಿಕಾರಿಗಳು ನಿರ್ವಹಿಸಬೇಕಾಗಿರುವ ಪ್ರಧಾನ ಕರ್ತವ್ಯಗಳು ಇಂತಿವೆ:

೧) ಪ್ರತಿ ತಾಲೂಕಿನ ಗ್ರಾಮಗಳ ಒಟ್ಟು ಸಂಖ್ಯೆಯಲ್ಲಿ ಕನಿಷ್ಠ ಶೇ. ೨೦ ಗ್ರಾಮಗಳ ಲೆಕ್ಕಪತ್ರಗಳನ್ನಾದರೂ ಹುಜೂರು ಜಮಾಬಂದಿ ನಡೆಸುವ ಅಧಿಕಾರಿಯು ಪರೀಕ್ಷೆ ಮಾಡಬೇಕು. ಹಳ್ಳಿಗಳ ಆಯ್ಕೆಯನ್ನು ಇಷ್ಟಪ್ರಕಾರ ಮಾಡಬಹುದಾಗಿದ್ದರೂ, ತಾಲೂಕು ಕೇಂದ್ರ ಕಛೇರಿಯಿಂದ ಹೆಚ್ಚು ದೂರದಲ್ಲಿರುವ ಅಥವಾ ಸಾಮಾನ್ಯವಾಗಿ ಅಧಿಕಾರಿಗಳು ಭೇಟಿ ನೀಡದೇ ಇರುವಂತಹ ಕೆಲವು ಹಳ್ಳಿಗಳನ್ನಾದರೂ ಪರೀಕ್ಷೆಗೆ ಒಳಪಡಿಸಬೇಕು. ಆ ಅವಧಿಯಲ್ಲಿ ಬೆಳಕಿಗೆ ಬರುವ ಲೋಪದೋಷಗಳನ್ನು ಅಲ್ಲಿಯೇ ಮತ್ತು ಆಗಲೇ ತಿದ್ದಿ ಸರಿಪಡಿಸಬೇಕು. ಬರಲಿರುವ ಸಾಲಿನ ಕಂದಾಯ ಬೇಡಿಕೆ ನಿಗದಿಯನ್ನು ಅಂತಿಮಗೊಳಿಸಬೇಕು. ತಹಸೀಲ್ದಾರನು ಗಮನಿಸಿರುವ ಎಲ್ಲಾ ಅಂಶಗಳನ್ನೂ ಹುಜೂರು ಜಮಾಬಂದಿ ನಡೆಸುವ ಅಧಿಕಾರಿಯು ಮೇಲ್ವಿಚಾರಣೆ ಮಾಡಬೇಕು.

೨) ಭೂ ಸುಧಾರಣಾ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ಹಿಂದಿನ ವರ್ಷಗಳಲ್ಲಿ ಗೇಣಿದಾರರಿಗೆ ಯಾವುದಾದರೂ ಗುತ್ತಿಗೆಗಳನ್ನು ನೀಡಲಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

೩) ಭೂ ಮಂಜೂರಾತಿ ಮತ್ತು ಭೂ ಸುಧಾರಣಾ ಅಧಿನಿಯಮದಡಿ ಬಿಟ್ಟುಕೊಟ್ಟ ಹೆಚ್ಚುವರಿ ಜಮೀನುಗಳ ಮಂಜೂರಾತಿ ಪ್ರಕರಣಗಳನ್ನು ಪರಿಶೀಲಿಸಬೇಕು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಮೀಸಲಾಗಿರುವ ಶೇ. ೫೦ ರಷ್ಟು ಪ್ರದೇಶವನ್ನು ಅಂತಹ ವರ್ಗಗಳ ಅರ್ಜಿದಾರರಿಗೆ ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇತ್ಯರ್ಥಕ್ಕಾಗಿ ಕಾದಿರುವ ಭೂ ಮಂಜೂರಾತಿ ಪ್ರಕರಣಗಳು ಮತ್ತು ಅದಕ್ಕೆ ಕಾರಣಗಳು ಏನೆಂಬುದನ್ನು ನಿರ್ದಿಷ್ಟವಾಗಿ ಪರೀಕ್ಷಿಸಬೇಕು.

೪) ಯಾವುದಾದರೂ ನಿರ್ದಿಷ್ಟ ಉದ್ದೇಶಕ್ಕಾಗಿ ಕಾಯ್ದಿರಿಸಿದ ಸರಕಾರಿ ಜಮೀನುಗಳ ಒತ್ತುವರಿ ಆಗಿದೆಯೇ ಎಂಬುದನ್ನು ಅಗತ್ಯವೆನಿಸಿದರೆ ಕ್ಷೇತ್ರ ತಪಾಸಣೆ ಮೂಲಕ ಪರಿಶೀಲಿಸಿರಬೇಕು. ನೀರಾವರಿ ಸೌಲಭ್ಯವಿರುವ ಒಣ ಜಮೀನುಗಳ ಅಕ್ಕಪಕ್ಕದಲ್ಲಿರುವ ಜಮೀನುಗಳಿಗೆ ಅಕ್ರಮವಾಗಿ ಸರಕಾರಿ ಜಲಮೂಲದಿಂದ ನೀರನ್ನು ಕಳ್ಳತನದಿಂದ ಹಾಯಿಸಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಪರೀಕ್ಷಿಸಬೇಕು. ತಪಾಸಣೆ ಸಮಯದಲ್ಲಿ ಪತ್ತೆಯಾಗುವ ಒತ್ತುವರಿ ಮತ್ತು ಸರಕಾರಿ ಜಮೀನುಗಳ ಅಕ್ರಮ ಅನುಭೋಗ ಪ್ರಕರಣಗಳ ವಿಲೇವಾರಿ ಮಾಡಬೇಕು. ಯಾವುದೇ ಹಕ್ಕುಗಳಿಲ್ಲದಿದ್ದರೂ ಸರ್ಕಾರಿ ಜಮೀನುಗಳ ಒತ್ತುವರಿ ಮಾಡಿರುವವರನ್ನು ಒಕ್ಕಲೆಬ್ಬಿಸಬೇಕು.

೫) ಹಿಡುವಳಿಗಳನ್ನು ತುಂಡಿಸಿರುವ ಪ್ರಕರಣಗಳನ್ನು ಸ್ಥಳೀಯ ವಿಚಾರಣೆ ಮೂಲಕ ಪತ್ತೆ ಹಚ್ಚಬೇಕು.

೬) ವಿವಿಧ ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಸಂಬಂಧ ಆಕಾರಬಂದ್‌ಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡುವವರೆಗೆ ಕಂದಾಯವನ್ನು ಇಳಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

೭) ಅಭಿವೃದ್ಧಿ ತೆರಿಗೆ, ನೀರಿನ ದರ ಮತ್ತು ನಿರ್ವಹಣೆ ಕರಗಳ ಬೇಡಿಕೆ ಪಟ್ಟಿಯನ್ನು ಪರಿಶೋಧಿಸಿ ಅವುಗಳನ್ನು ಪಾವತಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

೧) ಸರಕಾರಕ್ಕೆ ಬರಬೇಕಾಗಿರುವ ಬಾಕಿಗಳ ವಸೂಲಿಗಳನ್ನು ವಿವಿಧ ಶೀರ್ಷಿಕೆಗಳಡಿ ಪರಿಶೋಧಿಸಿದ ಮಾಹೆಯಾನ ಗುರಿಗಳನ್ನು ಹಾಗೂ ಸಂಗ್ರಹ ಗುರಿಗಳನ್ನು ನಿಗದಿಪಡಿಸಬೇಕು.

೨) ಇತ್ಯರ್ಥವಾಗದೇ ಉಳಿದಿರುವ ಪೋಡಿ ದಾಖಲೆಗಳ ಪಟ್ಟಿಯನ್ನು ಪರಶೀಲಿಸಬೇಕು.

೩) ಗಡಿ ರೇಖೆಗಳು, ಕೆರೆಗಳು ಮತ್ತು ಕೆರೆ ದಂಡೆಗಳನ್ನು ತಪಾಸಣೆ ಮಾಡಿ ಅವುಗಳ ನಿರ್ವಹಣೆ ಸಂಬಂಧ ರೂಪಿಸಿರುವ ನಿಯಮಗಳ ಪಾಲನೆಯಾಗುತ್ತಿರುವುದನ್ನು ಮನದಟ್ಟು ಮಾಡಿಕೊಳ್ಳಬೇಕು.

೪) ಕೃಷಿ ಇಲಾಖೆಯು 'ಸಿ' ಮತ್ತು 'ಡಿ' ಎಂದು ವರ್ಗೀಕರಿಸಿರುವ ಎಲ್ಲಾ ಜಮೀನುಗಳನ್ನು ಪರಿಶೋಧಿಸಿ ಅರಣ್ಯ ಬೆಳೆಸುವ ಸಂಬಂಧ ಅರಣ್ಯ ಇಲಾಖೆಯು ತೆಗೆದುಕೊಂಡಿರುವ ಕ್ರಮಗಳನ್ನು ಖಚಿತಪಡಿಸಿಕೊಳ್ಳಬೇಕು. ಈ ಬಗ್ಗೆ ಅರಣ್ಯ ಇಲಾಖೆಯು ಕಾರ್ಯಪ್ರವೃತ್ತವಾಗದಿರುವುದು ಕಂಡುಬಂದರೆ ಕೂಡಲೇ ವರದಿಯೊಂದನ್ನು ಸರ್ಕಾರಕ್ಕೆ ಕಳುಹಿಸಿ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಬೇಕು.

ಇಷ್ಟೇ ಅಲ್ಲದೇ, ಅಭಿವೃದ್ಧಿ ಆಡಳಿತ ಕುರಿತಂತೆ ಸಹ ಹುಜೂರು ಜಮಾಬಂದಿ ನಡೆಸುವ ಅಧಿಕಾರಿ ವಿಶೇಷ ಗಮನವನ್ನು ನೀಡಬೇಕು. ಅವುಗಳೆಂದರೆ:

(೧) ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬಿ.ಡಿ.ಓ.) ಮಂಜೂರು ಮಾಡಿರುವ (ಈಗ ವಿವಿಧ ಬ್ಯಾಂಕುಗಳ ಮೂಲಕ) ವಿವಿಧ ರೀತಿಯ ಸಾಲಗಳ ವಿವರಗಳನ್ನು ತಹಸೀಲ್ದಾರನಿಗೆ ವಸೂಲು ಮಾಡಲು ಅಗತ್ಯ ದಾಖಲಾತಿಗಳೊಡನೆ ಕಳುಹಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

(೨) ಕೃಷಿ ಉತ್ಪನ್ನ ಕಾರ್ಯಕ್ರಮ, ಸುಧಾರಿತ ಬೀಜಗಳು, ರಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ಮಾರಾಟ ಮತ್ತು ಕೃಷಿ ಹಿಡುವಳಿ ಮತ್ತು ಸಾಲ ನೀಡಿಕೆಗಾಗಿ ಮಾಡಿರುವ ಏರ್ಪಾಟುಗಳ ಪರಿಶೀಲನೆ.

(೩) ನೀರಾವರಿ ಬಾವಿಗಳ ನಿರ್ಮಾಣದಲ್ಲಿ ಸಾಧಿಸಿರುವ ಪ್ರಗತಿ ಮತ್ತು ಪಂಪುಸೆಟ್ಟುಗಳ ವಿದ್ಯುದೀಕರಣ ಕಾರ್ಯಕ್ರಮದ ಪರಿಶೀಲನೆ.

(೪) ಕುಟುಂಬ ಕಲ್ಯಾಣ ಯೋಜನೆಯ ವಿಮರ್ಶೆ.

ಇವೇ ಅಲ್ಲದೆ, ಹುಜೂರು ಜಮಾಬಂದಿ ಅಧಿಕಾರಿಯು ಸರಕಾರದಿಂದ ಪ್ರಾರಂಭವಾಗಿರುವ ಸಾಮಾಜಿಕ–ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಸಕ್ತಿ ವಹಿಸಬೇಕು. ಮುಖ್ಯವಾಗಿ ಹರಿಜನ–ಗಿರಿಜನರು ಮತ್ತು ದುರ್ಬಲ ವರ್ಗದ ಜನರ ಉದ್ಧಾರಕ್ಕಾಗಿ ಪ್ರಾರಂಭಿಸಿರುವ ಯೋಜನೆಗಳ ಲಾಭ ಅವರುಗಳಿಗೆ ತಲುಪುತ್ತಿರುವ ಬಗ್ಗೆ ಪರಿಶೀಲಿಸಬೇಕು. ಅಭಿವೃದ್ಧಿ ಇಲಾಖೆಗಳಿಂದ ಗ್ರಾಮ ಪಂಚಾಯತಿ ಮಟ್ಟದಲ್ಲಿಯೂ ಜಮಾಬಂದಿ ಕಾರ್ಯಕ್ರಮ ನಡೆಸಿ ಕೆಳಕಂಡವುಗಳನ್ನು ಸಾರ್ವಜನಿಕವಾಗಿಯೂ ಪರಿಶೀಲಿಸುವರು.

(೧) ಒದಗಿಸಲಾಗಿರುವ ನಾಗರೀಕ ಸೌಲಭ್ಯಗಳ ಪರಿಶೀಲನೆ.
(೨) ಮನೆ ನಿವೇಶನಗಳ ನೀಡಿಕೆ ಪರಿಸ್ಥಿತಿಯ ಪರಿಶೀಲನೆ
(೩) ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಪರಿಶೀಲನೆ.
(೪) ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಅನ್ವಯ ಕುಡಿಯುವ ನೀರಿನ ಲಭ್ಯತೆಯ ಪರಿಶೀಲನೆ.
(೫) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ಪರಿಶೀಲನೆ.

ಹುಜೂರ ಜಮಾಬಂದಿಗೆ ಪೂರ್ವಭಾವಿಯಾಗಿ ಮಾಡುವುದೇ 'ತಾಲೂಕ ಅಥವಾ ದಿತ್ತಂ(ಟ್ಟಂ)' ಜಮಾಬಂದಿ. ಇದನ್ನು ಆಯಾ ತಾಲೂಕಿನ ತಹಸೀಲ್ದಾರರು ನಡೆಸುತ್ತಾರೆ. ಹುಜೂರ ಜಮಾಬಂದಿ ಡಿಸೆಂಬರ್ ಅಂತ್ಯದ ವೇಳೆಗೆ ಮುಗಿಯಬೇಕಾಗುತ್ತದೆ. ಅಂದರೆ ದಿತ್ತಂ(ಟ್ಟಂ) ಜಮಾಬಂದಿಯನ್ನು ಅದಕ್ಕೆ ಒಂದು ತಿಂಗಳ ಪೂರ್ವದಲ್ಲಿಯೇ ಮುಗಿಸಬೇಕು. ತಾಲೂಕು ದಿತ್ತಂ (ಟ್ಟಂ) ಜಮಾಬಂದಿಯಲ್ಲಿ (೧) ಕಳೆದ ಕಂದಾಯ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸುವುದು ಹಾಗೂ (೨) ಪ್ರಸ್ತುತ ಸಾಲಿನ ಕಂದಾಯ ಲೆಕ್ಕಗಳನ್ನು ಸಿದ್ಧಪಡಿಸುವುದು, ಅವಶ್ಯಕವಾಗಿದೆ. (ಅ) ಕಳೆದ ಸಾಲಿನ ಲೆಕ್ಕಗಳನ್ನು ಮುಕ್ತಾಯ ಮಾಡುವಾಗ (೧) ರಸೀದಿ ಪುಸ್ತಕ, (೨) ಖಿರ್ದಿ ಪುಸ್ತಕ, (೩) ಖಾತೆ, (೪) ಕಮ್ಮಿ ಜಾಸ್ತಿ (ಹೆಚ್ಚು ಕಡಿಮೆ) ಫೋಷ್ವಾರೆ, (೫) ತಾಲೂಕ ಭೂಕಂದಾಯ ಡೇ ಬುಕ್ (ದೈನಿಕ ವಹಿ), (೬) ತಾಲೂಕು ಭೂಕಂದಾಯ ಲೆಡ್ಜರು (ಹೊತ್ತಿಗೆ), (೭) ಡಿ.ಸಿ.ಬಿ ರಿಜಿಸ್ಟರ್, (೮) ಕುಳವಾರು (ಹಿಡುವಳಿದಾರ) ಬಾಕಿ ಪಟ್ಟಿ ಹಾಗೂ (೯) ಇತರೇ ಸರಕಾರಿ ಬಾಕಿಗಳ ಖಾತೆಗಳನ್ನು ಪರಿಶೀಲಿಸಬೇಕು. (ಬ) ಪ್ರಸ್ತುತ ಸಾಲಿನ ಲೆಕ್ಕಗಳನ್ನು ಸಿದ್ಧಪಡಿಸುವಾಗ (೧) ಚಾಲ್ತಿ ಸಾಲಿನ ಖಾತೆ, (೨) ಚಾಲ್ತಿ ಸಾಲಿನ ಖಿರ್ದಿ, (೩) ಹಕ್ಕು ದಾಖಲೆ ಆರ್.ಟಿ.ಸಿ., (೪) ಹಕ್ಕು ದಾಖಲೆ ಬದಲಾವಣೆ ರಿಜಿಸ್ಟರ್, (೫) ವಿವಾದಾಸ್ಪದ ಪ್ರಕರಣಗಳ ರಿಜಿಸ್ಟರ್, (೬) ಇನಾಂ ರಿಜಿಸ್ಟರ್, (೭) ಬಂಜರು ಭೂಮಿ ತಃಖ್ತೆ, (೮) ಅತಿಕ್ರಮಣ ಪ್ರಸಂಗಗಳ ರಿಜಿಸ್ಟರ್, (೯) ಕಮ್ಮಿ ಜಾಸ್ತಿ ಫೋಷ್ವಾರೆ, (೧೦) ಆಕಾರ ಬಂದ್, (೧೧) ಚಾಲ್ತಿ ಸಾಲಿನ ಡಿ.ಸಿ.ಬಿ ರಿಜಿಸ್ಟರ್, (೧೨) ಚಾಲ್ತಿ ಸಾಲಿನ ಕುಳವಾರು (ಹಿಡುವಳಿದಾರ) ಬಾಕಿಪಟ್ಟಿ, (೧೩) ಇತರೇ ಸರ್ಕಾರಿ ಬಾಕಿಗಳ ಖಾತೆ ಮುಂತಾದವುಗಳನ್ನು ಪರಿಶೀಲಿಸಬೇಕಾಗುತ್ತದೆ.

ಜಮಾಬಂದಿ ಅಥವಾ ವಾರ್ಷಿಕ ಕಂದಾಯ ವಸೂಲಿ ತಪಾಸಣೆ ಪದ್ಧತಿಯು ಹಳೆಯ ಮೈಸೂರು ಪ್ರದೇಶದಲ್ಲಿ ೧೯೦೦ರಲ್ಲಿ ಪ್ರಾರಂಭವಾಯಿತು. ಪ್ರತೀ ವರ್ಷ ನಡೆಯುವ ಈ ಕಾರ್ಯಕ್ರಮದ ಸಮಯದಲ್ಲಿ ಗ್ರಾಮದ ಹಾಗೂ ತಾಲೂಕಿನ ವಹಿ (ರಿಜಿಸ್ಟರ್) ಗಳ ಸವಿವರ ಪರಿಶೋಧನೆ ನಡೆಯುತ್ತದೆ. ಭೂಕಂದಾಯ ನಿಗದಿಯಾದ ಗ್ರಾಮಗಳ ಬೇಡಿಕೆ (ಠರಾವು) ಸಹ ಸೇರಿದಂತೆ ಕಂದಾಯದ ಎಲ್ಲಾ ಬಾಬ್ತುಗಳನ್ನು ಸರಿಯಾಗಿ ನಿರ್ಧರಿಸಿ ಲೆಕ್ಕಕ್ಕೆ ಸೇರಿಸಲಾಗಿದೆಯೇ, ಆರ್ಥಿಕ ಹಾಗೂ ಆಡಳಿತ ಉದ್ದೇಶಗಳಿಗಾಗಿ ನಿಗದಿಪಡಿಸಿದ ಅಂಕಿ ಸಂಖ್ಯೆಗಳನ್ನು ಸರಿಯಾಗಿ ಸಂಗ್ರಹಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುವುದು. ಇವೆಲ್ಲದರ ಸಮಗ್ರ ಪರಿಶೀಲನೆಯೇ ಜಮಾಬಂದಿಯ ಮೂಲೋದ್ದೇಶ. ಇದರಿಂದ ಗ್ರಾಮ ಲೆಕ್ಕಿಗರ ವಾರ್ಷಿಕ ಕಾರ್ಯಕ್ರಮ ಪ್ರಗತಿಯ ಪರಿಶೀಲನೆಯೂ ಆಗುತ್ತದೆ. ಭೂ ಕಂದಾಯದಲ್ಲಿ ತಪ್ಪು ಬೇಡಿಕೆ ಅಥವಾ ಇನ್ನಿತರೆ ಯಾವುದೇ ಕಾರಣದಿಂದ ಕಂಡು ಬರುವ ವ್ಯತ್ಯಾಸಗಳನ್ನು ಜಮಾಬಂದಿ ಕಾಲದಲ್ಲಿ ಸರಿಪಡಿಸಬೇಕು.

### ಭೂಕಂದಾಯ ವಸೂಲಿ

ಅನಾದಿಕಾಲದಿಂದಲೂ ಕಂದಾಯ ಸಲ್ಲಿಕೆ ಜನಸಾಮಾನ್ಯರ ಕರ್ತವ್ಯವಾಗಿದೆ. ೧೯೬೪ರಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ ಜಾರಿಯಾಗಿ ಭೂಕಂದಾಯ ಸಲ್ಲಿಕೆಯಲ್ಲಿ ಏಕರೂಪತೆ ಕಂಡು ಬಂದಿದೆ. ಹಳೆಯ ಮೈಸೂರು ಸಂಸ್ಥಾನದಲ್ಲಿ ಫೆಬ್ರವರಿ, ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳುಗಳಲ್ಲಿ ನಾಲ್ಕು ಕಂತುಗಳಲ್ಲಿ ಭೂ ಕಂದಾಯ ಸಲ್ಲಿಸುವ ಅವಕಾಶವಿದ್ದಿತು. ಪ್ರಸ್ತುತ ಕಂದಾಯ ಹಾಗೂ ಇತರೆ ಬಾಕಿಗಳ ವಸೂಲಿ ಜನವರಿ ಒಂದರಿಂದ

ಆರಂಭವಾಗಿ ಜೂನ್ ೩೦ಕ್ಕೆ ಮುಗಿಯುತ್ತದೆ. ಈ ಅವಧಿಯನ್ನು 'ಕಿಸ್ತು' ಅಥವಾ ವಸೂಲಿ ಸಮಯವೆನ್ನುತ್ತಾರೆ. ಭೂಕಂದಾಯವನ್ನು ನಾಲ್ಕು ಸಮ ಕಂತುಗಳಲ್ಲಿ ಪ್ರತಿ ವರ್ಷ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ೨೦ನೇ ತಾರೀಖಿನ ಒಳಗೆ ಪಾವತಿಸಬೇಕಾಗುವುದು. ಐದು ರೂಪಾಯಿಗಿಂತ ಕಡಿಮೆ ಕಂದಾಯವಿದ್ದಲ್ಲಿ ಜನವರಿ ಇಪ್ಪತ್ತರ ಮೊದಲೇ ಎಲ್ಲಾ ಮೊತ್ತವನ್ನು ಕೊಡತಕ್ಕದ್ದು. ಕಂದಾಯ ವರ್ಷದ ಮೊದಲನೇ ದಿನ ಅಂದರೆ ಜುಲೈ ಒಂದನೇ ತಾರೀಖು ಮತ್ತು ಮೇಲ್ಕಾಣಿಸಿದ ಕಂದಾಯ ಸಲ್ಲಿಸುವ ತಾರೀಖುಗಳ ನಡುವಣ ಅವಧಿಯನ್ನು ರಿಯಾಯಿತಿ ಅವಧಿ ಎಂದು ಪರಿಗಣಿಸಲಾಗುವುದು.

ಭೂ ಕಂದಾಯವು ಹಿಂದೆ ರಾಜ್ಯಾದಾಯದ ಪ್ರಮುಖ ಮೂಲವಾಗಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಭೂ ಕಂದಾಯವನ್ನು ಅತಿ ಕನಿಷ್ಠ ಮಟ್ಟಕ್ಕೆ ಇಳಿಸಲಾಗಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪ರ ಅಧ್ಯಾಯ ೨ರ ಕಲಂ ೬ (ಬಿ) ಅನ್ವಯ ಭೂ ಕಂದಾಯ ಎಂದರೆ, ಯಾವುದೇ ವ್ಯಕ್ತಿಯು ಭೂಮಿಯನ್ನು ಹೊಂದಿರುವುದಕ್ಕಾಗಿ ನಗದು ಅಥವಾ ಫಸಲಿನ ರೂಪದಲ್ಲಿ ರಾಜ್ಯ ಸರಕಾರಕ್ಕೆ ವರ್ಷಂಪ್ರತಿ ನೀಡಬೇಕಾದ ಮೊತ್ತ. ಇದು ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಪಾವತಿ ಮಾಡಬಹುದಾದ ಯಾವುದೇ ತೆರಿಗೆ, ಉಪಕರ ಅಥವಾ ಇತರೆ ಸುಂಕಗಳನ್ನು ಒಳಗೊಂಡಿರುತ್ತದೆ. ಕರ್ನಾಟಕ ಭೂ ಕಂದಾಯ, ೧೯೮೮ರ ಅಧ್ಯಾಯ ೧ ಕಲಂ ೪೫ರ ಅನ್ವಯ ಕೃಷಿ ಅಥವಾ ಇನ್ನಾವುದೇ ಉದ್ದೇಶಕ್ಕೆ ಬಳಕೆಯಾಗುತ್ತಿರುವ ಎಲ್ಲಾ ಜಮೀನುಗಳಿಗೆ ಎಲ್ಲೇ ಇದ್ದರೂ ನಿಯಮಾನುಸಾರ ರಾಜ್ಯ ಸರಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡಲೇಬೇಕು. ಸರಕಾರದ ಆದೇಶ ಸಂಖ್ಯೆ: ಆರ್‌ಡಿ:೩೪೨:ಟಿಆರ್‌ಎಂ:೨೦೦೦, ದಿನಾಂಕ ೩೦ನೇ ಜನವರಿ ೨೦೦೧ರಲ್ಲಿ ೧೦ ಎಕರೆಗಳಿಗಿಂತ ಕಡಿಮೆ ಇರುವ ಒಣ ಭೂಮಿಗೆ ಭೂ ಕಂದಾಯವನ್ನು ಮನ್ನಾ ಮಾಡಲಾಗಿದೆ. ಕೇವಲ ನಿರ್ವಹಣಾ ಕರವಾಗಿ ೧ರೂ. ಮಾತ್ರ ತೆಗೆದುಕೊಳ್ಳಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಗಾಗಿ ಭೂ ಹಿಡುವಳಿದಾರರಿಂದ ವಸೂಲಿ ಮಾಡುವ ಭೂ ಕಂದಾಯದಲ್ಲಿ ಶೇಕಡಾವಾರು ವಿವಿಧ ಅಭಿವೃದ್ಧಿ ಕರಗಳನ್ನು ವಸೂಲಿ ಮಾಡಲಾಗಿರುತ್ತದೆ. ಪ್ರಸ್ತುತ ಈ ದರಗಳು ಹೀಗೆವೆ : ೧. ವಿದ್ಯಾಕರ – ಭೂ ಕಂದಾಯದ ೧೦%, ೨. ಆರೋಗ್ಯ ಕರ – ಭೂ ಕಂದಾಯದ ೧೫%, ಹಾಗೂ ೩. ಸ್ಥಳೀಯ ಕರ – ಭೂ ಕಂದಾಯದ ೫೦%

ಹುಜೂರ್ ಜಮಾಬಂದಿಯಲ್ಲಿ ಜಿಲ್ಲಾಧಿಕಾರಿ ಅಥವಾ ಜಮಾಬಂದಿ ಅಧಿಕಾರಿ ದೃಢೀಕರಿಸಿದ ಲೆಕ್ಕಪತ್ರಗಳು, ಕಂದಾಯ ಮೊತ್ತ, ಅಸ್ತಿತ್ವ ಹಾಗೂ ಬಾಕಿದಾರನ ವಿವರಗಳ ರುಜುವಾತು ಎನಿಸುತ್ತವೆ. ಬಾಕಿ ವಸೂಲಿ ಕ್ರಮ ಜಮಾಬಂದಿ ನೋಟೀಸು ಜಾರಿಯಾಗುವ ಹಂತದಿಂದ ಪ್ರಾರಂಭವಾಗುತ್ತದೆ. ಕಂದಾಯ ಬಾಕಿ ವಿವರಗಳ ಪ್ರಕಟಣೆಯನ್ನು ಗ್ರಾಮ ಚಾವಡಿಯಲ್ಲಿ ಅಂಟಿಸಲಾಗುವುದು. ಇದರ ಪ್ರತಿಯನ್ನು ಬಾಕಿದಾರನಿಗೆ ನೀಡಿ ಸ್ವೀಕೃತಿ ಪತ್ರ ಪಡೆಯಲಾಗುವುದು. ಬಾಕಿ ಕಂದಾಯ ತಿಳಿವಳಿಕೆ ಪತ್ರದ ಪ್ರಕ್ರಿಯಾ ಶುಲ್ಕ (ಪ್ರೊಸೆಸಿಂಗ್ ಫೀ) ವಾಗಿ ಬಾಕಿದಾರನಿಂದ ಒಂದು ರೂಪಾಯಿ ಶುಲ್ಕ ವಸೂಲಿ ಮಾಡಲಾಗುವುದು. ತಿಳಿವಳಿಕೆ ಪತ್ರ ತಲುಪಿದ ಒಂದು ವಾರದೊಳಗೆ ಬಾಕಿ ವಸೂಲಾಗದಿದ್ದಲ್ಲಿ ಗ್ರಾಮಲೆಕ್ಕಿಗನು ತಹಶೀಲ್ದಾರನಿಗೆ ವರದಿ ಮಾಡಿ, ಆತನ ಆದೇಶದಂತೆ ಕರ್ನಾಟಕ ಭೂಕಂದಾಯ ನಿಯಮ ೧೯೬೬ರಂತೆ ಬಾಕಿದಾರನ ಚರ ಆಸ್ತಿಯನ್ನು ಜಪ್ತಿ ಮಾಡಬೇಕು. ಕಂದಾಯ ಸಮೀಕ್ಷಾಧಿಕಾರಿ ಇದರ ಬಗ್ಗೆ ಸಾಕಷ್ಟು ಪ್ರಚಾರ ನೀಡಿದ ನಂತರ ಬಾಕಿದಾರನ ಚರಾಸ್ತಿಯನ್ನು ಮಾರಾಟ ಮಾಡಿ, ಸರ್ಕಾರಕ್ಕೆ ಬರಬೇಕಾದ ಪೂರ್ಣ ಮೊತ್ತವನ್ನು ಕಛೇರಿಯಲ್ಲಿ ಕೂಡಲೇ ಜಮಾ ಮಾಡಬೇಕು.

**ಕೋಷ್ಟಕ ೯.೯ ತುಮಕೂರು ಜಿಲ್ಲೆಯ ಭೂಕಂದಾಯ ಮತ್ತು ನೀರು ತೆರಿಗೆ ಡಿಸಿಬಿ ವಿವರಗಳು (೨೦೦೯–೧೩ರವರೆಗೆ)**

| **ಬಾಕಿ ವಸೂಲಿ ವಿವರಗಳು** | ೨೦೦೯–೧೦ | | | ೨೦೧೦–೧೧ | | |
|---|---|---|---|---|---|---|
| | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) |
| ಭೂಕಂದಾಯ | ೮೪೭೬೦೨೬ | ೬೨೭೩೨೨೫ | ೨೨೦೨೮೦೧ | ೯೦೭೦೯೬೭ | ೬೨೬೮೪೫೬ | ೨೮೦೨೫೧೧ |
| ನೀರು ತೆರಿಗೆ, ನಿರ್ವಹಣಾ ವೆಚ್ಚ | ೨೬೭೮೧೮೧ | ೮೫೦೮೩೩ | ೧೮೨೭೩೪೮ | ೨೭೧೩೬೧೦ | ೮೪೦೭೮೬ | ೧೮೭೨೮೨೪ |
| ದಂಡ, ನೀರು ಕರ | ೦ | ೦ | ೦ | ೦ | ೦ | ೦ |
| ಸಾಲಗಳು | ೦ | ೦ | ೦ | ೦ | ೦ | ೦ |
| ಇತರೆ ಬಾಕಿ | ೫೨೩೫೧೪೪೦ | ೧೮೬೨೨೩೩೩ | ೩೩೭೨೯೧೦೭ | ೫೯೪೯೪೬೨೦ | ೨೪೭೪೫೪೨೨ | ೩೪೭೪೯೧೯೮ |
| **ಒಟ್ಟು** | **೬೩೫೦೫೬೪೭** | **೨೫೭೪೬೩೯೧** | **೩೭೭೫೯೨೫೬** | **೭೧೨೭೯೧೯೭** | **೩೧೮೫೪೬೬೪** | **೩೯೪೨೪೫೩೩** |

| **ಬಾಕಿ ವಸೂಲಿ ವಿವರಗಳು** | ೨೦೧೧–೧೨ | | | ೨೦೧೨–೧೩ | | |
|---|---|---|---|---|---|---|
| | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) |
| ಭೂಕಂದಾಯ | ೮೨೦೨೩೭೭.೫೭ | ೬೩೪೫೩೦೩ | ೧೮೫೭೦೭೪.೫೭ | ೬೧೮೪೩೩೪ | ೪೦೧೦೨೦೯ | ೨೧೭೪೧೨೫ |
| ನೀರು ತೆರಿಗೆ, ನಿರ್ವಹಣಾ ವೆಚ್ಚ | ೩೩೨೨೧೫೪ | ೮೬೭೦೭೯ | ೨೪೫೫೦೭೫ | ೨೬೮೮೮೩೯ | ೨೯೬೧೮೫ | ೨೩೯೨೬೫೪ |
| ದಂಡ, ನೀರು ಕರ | ೦ | ೦ | ೦ | ೦ | ೦ | ೦ |
| ಸಾಲಗಳು | ೦ | ೦ | ೦ | ೦ | ೦ | ೦ |
| ಇತರೆ ಬಾಕಿ | ೬೭೩೭೬೮೫೯ | ೩೨೨೦೭೧೨೧ | ೩೫೧೬೯೭೩೮ | ೬೮೬೦೧೯೯೪ | ೩೩೪೦೪೫೮೧ | ೩೫೧೯೭೪೧೩ |
| **ಒಟ್ಟು** | **೭೮೯೦೧೩೯೧** | **೩೯೪೧೯೫೦೩** | **೩೯೪೮೧೮೮೮** | **೭೭೪೭೫೧೬೭** | **೩೭೭೧೦೯೭೫** | **೩೯೭೬೪೧೯೨** |

**ಮಾಫಿಗಳು:** ಭೂಕಂದಾಯ ವ್ಯವಸ್ಥೆ ಪ್ರಾರಂಭವಾಗುವ ಮೊದಲು ರೈತರ ಮನವಿಯಂತೆ ಅಸಾಧಾರಣ ಪರಿಸ್ಥಿತಿಯಿದ್ದಲ್ಲಿ ಕಂದಾಯ ಮಾಫಿ ಮಾಡಲಾಗುತ್ತಿತ್ತಾದರೂ ಇದಕ್ಕೆ ಖಚಿತ ನಿಯಮಗಳಿರಲಿಲ್ಲ. ಭೂಕಂದಾಯ ವ್ಯವಸ್ಥೆ ಪ್ರಾರಂಭವಾದ ನಂತರವೂ ಬೆಳೆಗಳು ನಷ್ಟವಾಗಿ ಕಡಿಮೆ ಇಳುವರಿ ಬಂದಾಗ ಕಂದಾಯ ಮಾಫಿ ಅಗತ್ಯವೆಂದು ಪರಿಗಣಿಸಲಾಗಿತ್ತು. ೧೯೦೭ರಲ್ಲಿ ಸರಕಾರವು ಭೂಕಂದಾಯ ಮಾಫಿ ಹಾಗೂ ಸ್ಥಗಿತಗಳನ್ನು ಕುರಿತ ಆದೇಶಗಳನ್ನು ಹೊರಡಿಸಿತು. ಅದರಂತೆ ಕಂದಾಯ ಸ್ಥಗಿತಗೊಂಡ ವರ್ಷದಿಂದ ಮುಂದಿನ ಮೂರು ವರ್ಷಗಳ ಸುಗ್ಗಿಯನ್ನು ಅವಲಂಬಿಸಿ ಕಂದಾಯ ಮಾಫಿ ಮಾಡಲಾಯಿತು. ಎರಡು ವರ್ಷಗಳಿಗಿಂತ ಹೆಚ್ಚು ಅವಧಿಗೆ ಸ್ಥಗಿತಗೊಂಡ ಕಂದಾಯದಲ್ಲಿ ಮಾಫಿ ಆದೇಶವನ್ನು ನೀಡುವ ಅಧಿಕಾರ ಜಿಲ್ಲಾಧಿಕಾರಿಗಿತ್ತು.

೧೯೨೨ಕ್ಕೆ ಮೊದಲು ಹಳೆಯ ಮೈಸೂರು ಭಾಗದಲ್ಲಿ ಮಾಫಿಗಾಗಿ ನಿಶ್ಚಿತ ನಿಯಮಗಳಿರಲಿಲ್ಲ. ೧೯೦೮ರಲ್ಲಿ ಪರಿಹಾರ ನೀಡಬೇಕಾದ ಪರಿಸ್ಥಿತಿ ಉಂಟಾದಾಗ ಸರ್ಕಾರ ವಿಶೇಷ ಆದೇಶಗಳನ್ನು ಹೊರಡಿಸಿತು. ೧೯೨೨ರಲ್ಲಿ ಪ್ರಥಮ ಬಾರಿಗೆ ಮಾಫಿ ಮಂಜೂರಾತಿ ನಿಯಮಗಳನ್ನು ಹೊರಡಿಸಲಾಯಿತು. ಇವು ನೀರಾವರಿ ಭೂಮಿಗೆ ಮಾತ್ರ ಅನ್ವಯಿಸಿದ್ದವು. ಮರುವರ್ಷ ಬೆಳೆಗಳು ಚೆನ್ನಾಗಿದ್ದು ಇಳುವರಿ ಹೆಚ್ಚು ಬಂದಾಗ ಸ್ಥಗಿತವಾಗಿದ್ದ ಕಂದಾಯ ವಸೂಲಿಯಾಗುತ್ತಿತ್ತು. ಆದರೆ ಆ

ವರ್ಷವೂ ಬೆಳೆಗಳು ಕೆಟ್ಟರೆ ಕಂದಾಯ ಮಾಫಿಯಾಗುತ್ತಿತ್ತು. ಮಾಫಿ ನಿಯಮಗಳು ಕಾಲಕಾಲಕ್ಕೆ ಪರಿಷ್ಕೃತವಾಗುತ್ತಿರುತ್ತವೆ.

**ಕಂದಾಯ ಮಾಫಿ ನಿಯಮಗಳು:** ಮೇಲ್ಕಂಡ ಪರಿಷ್ಕರಣದಂತೆ, ಮಳೆಯ ಕೊರತೆ, ಬೆಳೆಗಳಿಗೆ ಬಂದ ರೋಗಗಳು ಅಥವಾ ಇನ್ನಾವುದೇ ಕಾರಣಗಳಿಂದ ಬೆಳೆಗಳು ಭಾಗಶಃ ಅಥವಾ ಸಂಪೂರ್ಣವಾಗಿ ಯಾವುದೇ ಪ್ರದೇಶದಲ್ಲಿ ನಾಶಗೊಂಡಲ್ಲಿ ಇದನ್ನು ಜಿಲ್ಲಾಧಿಕಾರಿಯು ಖಚಿತಪಡಿಸಿಕೊಂಡು, ಇಂಥ ಪ್ರದೇಶದ ಪ್ರತೀ ಎಕರೆಯ ಫಸಲುವಾರು ಸರಾಸರಿ ಇಳುವರಿ ಗೊತ್ತುಪಡಿಸಲು ಆ ಪ್ರದೇಶದ ಎಲ್ಲಾ ಭಾಗಗಳಲ್ಲಿ ಬೆಳೆ ಕೊಯ್ಲಿನ ಪ್ರಾತ್ಯಕ್ಷಿಕೆ ಪ್ರಯೋಗಗಳನ್ನು ಏರ್ಪಡಿಸುತ್ತಾರೆ. ಸದರಿ ಪ್ರದೇಶದ ಶೇಕಡಾ ೨೦ ಗ್ರಾಮಗಳಲ್ಲಾದರೂ ತಾಲೂಕು ತಹಸೀಲ್ದಾರರು ಇಂಥ ಪ್ರಾತ್ಯಕ್ಷಿಕೆಯನ್ನು ನಡೆಸುತ್ತಾರೆ. ಸರಾಸರಿ ಫಸಲು ಇಳುವರಿ ಶೇಕಡಾ ೩೫ ಕ್ಕಿಂತ ಕಡಿಮೆ ಇದ್ದರೆ ಭೂಕಂದಾಯ ವಸೂಲಿ ಪೂರ್ಣ ಸ್ಥಗಿತಗೊಳಿಸಲಾಗುವುದು: ಶೇ.೩೫ ರಿಂದ ೫೦ ರವರೆಗಿದ್ದರೆ ಅರ್ಧ ಸ್ಥಗಿತಗೊಳಿಸಲಾಗುವುದು. ಶೇಕಡಾ ೫೦ಕ್ಕಿಂತ ಹೆಚ್ಚಾಗಿದ್ದಲ್ಲಿ ಸ್ಥಗಿತಗೊಳಿಸಲಾಗುವುದಿಲ್ಲ.

ವಸೂಲಿ ಸ್ಥಗಿತಗೊಂಡ ಕಂದಾಯವನ್ನು ಮುಂದೆ ಹೇಳಿರುವಂತೆ ವರ್ಷದಲ್ಲಿ ಕೊಡಬೇಕಾಗುವ ಕಂದಾಯದ ಜೊತೆಗೆ ವಸೂಲಿ ಮಾಡಲಾಗುವುದು. ೧) ವಸೂಲಿ ವರ್ಷದ ಫಸಲಿನ ಸರಾಸರಿ ಇಳುವರಿ ಶೇಕಡಾ ೭೫ ರಷ್ಟಿದ್ದರೆ ಒಂದು ವರ್ಷಕ್ಕೆ ಸಮನಾದ ಕಂದಾಯದ ಮೊತ್ತ; ೨) ಸರಾಸರಿ ಇಳುವರಿ ಶೇ.೬೨ ಕ್ಕಿಂತ ಕಡಿಮೆ ಇರದಿದ್ದಲ್ಲಿ ಒಂದು ವರ್ಷದ ಕಂದಾಯದ ಶೇ.೬೨ರಷ್ಟು ಮೊತ್ತ; ೩) ಶೇಕಡ ೬೨ ಕ್ಕಿಂತ ಕಡಿಮೆ ಸರಾಸರಿ ಇಳುವರಿ ಇದ್ದಲ್ಲಿ ಕಂದಾಯ ವಸೂಲಿ ಮಾಡಲಾಗುವುದಿಲ್ಲ.

**ಭೂಕ್ರೋಢೀಕರಣ ಮತ್ತು ವಿಭಜನೆ:** ಬೇಸಾಯವನ್ನು ಒಂದು ಲಾಭದಾಯಕ ಉದ್ಯಮವನ್ನಾಗಿಸಲು ಹಿಡುವಳಿಗಳ ವಿಭಜನೆ (ಸಬ್ ಡಿವಿಷನ್) ಮತ್ತು ಜಮೀನು ತುಂಡರಿಸುವುದನ್ನು (Fragmentations) ತಪ್ಪಿಸುವುದು ಮುಖ್ಯವಾದುದೆಂದು ಹಿಂದೆಯೇ ಕಂಡುಕೊಳ್ಳಲಾಗಿದ್ದಿತು. ರಾಜ್ಯದ ಭೂಹಿಡುವಳಿಗಳ ವಿಭಜನೆ ಹಾಗೂ ತುಂಡರಿಕೆಗಳನ್ನು ಪರಿಶೀಲಿಸಲು ಮೈಸೂರು ಸರಕಾರ ೧೯೩೧ ರಲ್ಲಿ ರಚಿಸಿದ ಸಮಿತಿಯು ಮೈಸೂರಿನಲ್ಲಿ ಬೇಸಾಯ ಲಭ್ಯ ಹಿಡುವಳಿಯ ಸರಾಸರಿ ಪ್ರಮಾಣ ೮.೧ ಎಕರೆ ಎಂದು ವರದಿ ನೀಡಿತು. ೧೯೬೪ರ ಕರ್ನಾಟಕ ಹಿಡುವಳಿ ವಿಭಜನೆ ನಿಯಂತ್ರಣ ಮತ್ತು ಕ್ರೋಢೀಕರಣ ಶಾಸನದ ಮೂಲಕ ಕರ್ನಾಟಕದಾದ್ಯಂತ ಹಿಡುವಳಿಗಳ ಕ್ರೋಢೀಕರಣಕ್ಕಾಗಿ ಹಾಗೂ ಜಮೀನು ತುಂಡರಿಸುವುದನ್ನು ತಡೆಯಲು ಏಕರೂಪದ ಕ್ರಮ ಪ್ರಾರಂಭಿಸಲಾಯಿತು. ಭೂವರ್ಗೀಕರಣದ ಪ್ರಕಾರ ಪ್ರಮಾಣಿತ ಕನಿಷ್ಠ ವಿಸ್ತೀರ್ಣದ ಕ್ಷೇತ್ರದ ಅರ್ಧ ಎಕರೆಯಿಂದ ನಾಲ್ಕು ಎಕರೆವರೆಗೆ ವ್ಯತ್ಯಾಸವಿರುತ್ತದೆ. ಇಂತಹ ತುಂಡನ್ನು ನೆರೆಯ ಹಿಡುವಳಿದಾರರ ಹೊರತು ಬೇರಾರಿಗೂ ಮಾರಾಟ ಮಾಡುವುದನ್ನು ಕಾನೂನು ನಿರ್ಬಂಧಿಸಿದೆ. ಮೇಲ್ಕಂಡ ಶಾಸನದನ್ವಯ ಇದನ್ನು ಪುನಃ ವಿಭಜಿಸಲು ಅಥವಾ ಪಾಲು ಮಾಡಲೂ ಆಗುವುದಿಲ್ಲ. ಇದೇ ಶಾಸನದನ್ವಯ ಅಲ್ಲಲ್ಲಿ ಹಂಚಿ ಹೋಗಿರುವ ಭೂಹಿಡುವಳಿಗಳನ್ನು ಒಟ್ಟುಗೂಡಿಸಲು ಹಾಗೂ ಸಂಬಂಧಪಟ್ಟ ಭೂಮಾಲೀಕರಿಗೆ ಪರಿಹಾರಧನ ನೀಡುವುದಕ್ಕೂ ಅವಕಾಶವಿದೆ. ಈ ಕ್ರೋಢೀಕರಣ ಯೋಜನೆಯಲ್ಲಿ ಹಿಡುವಳಿ ಪಡೆಯುವವರಿಗೆ, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವಿಲ್ಲದೆ ವರ್ಗಾವಣೆಯ ಪ್ರಮಾಣಪತ್ರ ನೀಡಲಾಗುವುದು.

**ಭೂಸುಧಾರಣೆ:** ಗೇಣಿದಾರಿ ಸಮಸ್ಯೆಗಳನ್ನು ಸಕಲ ರೂಪಗಳಲ್ಲಿಯೂ ಪರಿಶೀಲಿಸಿ ರಾಜ್ಯಾದ್ಯಂತ ಏಕರೂಪದ ಪರಿಹಾರ ಕ್ರಮಕೈಗೊಳ್ಳಬೇಕೆಂಬ ಒತ್ತಾಯದ ಮೇರೆಗೆ ೧೯೫೭ರ ಮೇ ೧೦ರಂದು ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿ ಹಾಗೂ ಕೃಷಿ ಭೂಮಿ ಕಾನೂನು ಸಮಿತಿ'ಯನ್ನು ರಚಿಸಲಾಯಿತು. ಸಮಸ್ಯೆಗಳ ಸಮಗ್ರ ಪರಿಶೀಲನೆಯ ನಂತರ ಸಮಿತಿಯು ಅದೇ ವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಇದನ್ನು ೧೯೫೮ರಲ್ಲಿ ವಿಧಾನಮಂಡಲದಲ್ಲಿ ಒಪ್ಪಲಾಯಿತು. ಎರಡೂ ಸದನಗಳ ೪೬ ಸದಸ್ಯರನ್ನೊಳಗೊಂಡ ಜಂಟಿ ಪ್ರವರ ಸಮಿತಿಯು (Joint select committee) ಈ ವಿಧೇಯಕದ ಎಲ್ಲ ಕಲಂ ಗಳನ್ನು ಪರಿಶೀಲಿಸಿ ೧೯೬೧ರ ಮಾರ್ಚ್ ೨೫ರಂದು ತನ್ನ ವರದಿ ಸಲ್ಲಿಸಿತು. ನವೆಂಬರ್ ೧೯೬೧ರಲ್ಲಿ ಸಣ್ಣ ಮಾರ್ಪಾಡುಗಳೊಂದಿಗೆ ವಿಧಾನಮಂಡಲದಲ್ಲಿ ಅಂಗೀಕೃತವಾದ ಈ ವಿಧೇಯಕಕ್ಕೆ ೧೯೬೨ರಲ್ಲಿ ರಾಷ್ಟ್ರಪತಿಯವರ ಸಮ್ಮತಿಯೂ ದೊರೆಯಿತು. ನಂತರ ಹಲವು ತಿದ್ದುಪಡಿಗಳಿಗೊಳಗಾದ ಈ ವಿಧೇಯಕವು ೧೯೬೫ರ ಅಕ್ಟೋಬರ್ ಎರಡರಂದು ರಾಜ್ಯಾದ್ಯಂತ ಜಾರಿಯಾಯಿತು. ಈ ವಿಧೇಯಕದಲ್ಲಿ ಗೇಣಿದಾರಿ ಹಕ್ಕು, ಭೂಹಿಡುವಳಿಗಳ ಗರಿಷ್ಟ ಮಿತಿ ಹಾಗೂ ಇದರ ಫಲಾಫಲಗಳನ್ನು ಕುರಿತಂತೆ ಸಮಗ್ರ

ವಿವರಗಳನ್ನು ನೀಡಲಾಗಿದೆ. ಭೂಸುಧಾರಣಾ ಶಾಸನವನ್ನು ೧೯೬೬, ೧೯೬೭, ೧೯೬೮, ೧೯೭೦, ೧೯೭೨ ಹಾಗೂ ೧೯೭೪ರಲ್ಲಿ ಮತ್ತೆ ತಿದ್ದುಪಡಿ ಮಾಡಲಾಯಿತು.

ಅಂತಿಮ ತಿದ್ದುಪಡಿ ಶಾಸನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲಾಯಿತು. ಅದರಂತೆ ಉಳುವವನಿಗೇ ಭೂಮಿ ಎಂಬ ಘೋಷಣೆ ೧೯೭೪ರ ಮಾರ್ಚ್ ಒಂದರಿಂದ ಕಾರ್ಯರೂಪಕ್ಕೆ ಬಂದಿತು. ಈ ಘೋಷಣೆಯು ಕೃಷಿ ಕೂಲಿಕಾರರು ಮತ್ತು ಭೂರಹಿತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದವರು ಭೂಒಡೆಯರಾಗುವಂತೆ ಮಾಡಿದೆ. 'ಕುಟುಂಬ' ಎಂಬ ಪದಕ್ಕೆ ಪುನಃ ವ್ಯಾಖ್ಯೆ ನೀಡಿ, ಒಂದು ವ್ಯಕ್ತಿ. ಆ ವ್ಯಕ್ತಿಯ ಪತಿ ಅಥವಾ ಪತ್ನಿ, ಅವರ ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳು ಅಥವಾ ಮದುವೆಯಾಗದ ಹೆಣ್ಣುಮಕ್ಕಳು ಮಾತ್ರ ಕುಟುಂಬಕ್ಕೊಳಪಡುತ್ತಾರೆಂದು ಘೋಷಿಸಿ ಪ್ರತೀ ಕುಟುಂಬ ಹೊಂದಬಹುದಾದ ಜಮೀನಿನ ಗರಿಷ್ಟ ಮಿತಿಯನ್ನು ಕಡಿಮೆಗೊಳಿಸಿತು. ಕೃಷಿಯೇತರ ಮೂಲಗಳಿಂದ ವಾರ್ಷಿಕವಾಗಿ ರೂ.೧೨,೦೦೦ ಕ್ಕಿಂತ ಹೆಚ್ಚಿನ ವರಮಾನ ಪಡೆಯುವವರು ನಿಶ್ಚಿತ ಕರಾರುಗಳ ಹೊರತಾಗಿ ಭವಿಷ್ಯದಲ್ಲಿ ಕೃಷಿ ಜಮೀನನ್ನು ಖರೀದಿಸುವುದನ್ನು ಸಹ ಭೂ ಸುಧಾರಣಾ ಅಧಿನಿಯಮ (೧೯೬೧) ಒಳಗೊಂಡಿತ್ತು, ೦೧-೦೩-೭೪ರಿಂದ ೧೯೯೫ರವರೆಗೆ ೫೦,೦೦೦ ಆದಾಯ ಮಿತಿ ಇತ್ತು. ನಂತರ ಪರಿಷ್ಕರಿಸಿದ್ದು ಈಗ ಅಂತಹ ಆದಾಯ ಎರಡು ಲಕ್ಷಕ್ಕಿಂತ ಹೆಚ್ಚಿರಬಾರದು. ಎರಡು ಲಕ್ಷಕ್ಕಿಂತ ಹೆಚ್ಚಿನ ವರಮಾನ ಹೊಂದಿವರು ಉಪವಿಭಾಗಾಧಿಕಾರಿಗಳಿಂದ ಅನುಮತಿ ಪಡೆದು ಜಮೀನು ಖರೀದಿಸಬಹುದು. ಸಂಘ-ಸಂಸ್ಥೆಗಳು ಖರೀದಿಸಬೇಕಾದರೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರದ ಪೂರ್ವಾನುಮತಿ ಪಡೆಯಬೇಕು. ಭೂ ಮಾಲೀಕರಾಗಿ ಅಥವಾ ಗೇಣಿದಾರರಾಗಿ ಅಥವಾ ಅಡಮಾನದಾರರಾಗಿ ಜಮೀನು ಹೊಂದಲು ಕಲಂ ೬೩ರಡಿಯಲ್ಲಿ ಹಲವಾರು ಮಿತಿಗಳನ್ನು ನಿಗದಿಪಡಿಸಲಾಯಿತು. ಅಧಿಭೋಗದಾರರು ಎಂದು ನೋಂದಾಯಿಸಲು ಅರ್ಹರಾದ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದ ತಾಲೂಕು ಭೂ ನ್ಯಾಯಮಂಡಳಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಯಿತು.

ಇದರ ಪರಿಣಾಮವಾಗಿ ೧ನೇ ಏಪ್ರಿಲ್ ೧೯೭೪ ರಂದು ಗೇಣಿದಾರನ ಸ್ವಾಧೀನದಲ್ಲಿದ್ದ ಎಲ್ಲಾ ಜಮೀನುಗಳೂ ಸರಕಾರದಲ್ಲಿ ನಿಹಿತವಾದವು. ಅಂತಹ ಜಮೀನುಗಳನ್ನು ಸರಕಾರವು ಆಯಾ ಗೇಣಿದಾರರಿಗೆ ಭೂ ನ್ಯಾಯ ಮಂಡಳಿಗಳ ಮೂಲಕ ನೀಡುತ್ತಾ ಬರುತ್ತಿದೆ. ಈ ದಿನಾಂಕದ ನಂತರ ಗೇಣಿಗೆ ನೀಡಲಾಗುವ ಯಾವುದೇ ಜಮೀನನ್ನು ಸರಕಾರವೇ ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಸೈನಿಕರು ಮತ್ತು ನಾವಿಕರನ್ನು ಬಿಟ್ಟು ಬೇರೆ ಯಾರೂ ಸಹ ತಮ್ಮ ಜಮೀನುಗಳನ್ನು ಗೇಣಿಗೆ ನೀಡಕೂಡದೆಂಬ ಕಟ್ಟುನಿಟ್ಟಾದ ನಿರ್ಬಂಧವನ್ನು ಹೇರಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ವಶಪಡಿಸಿಕೊಂಡ ಒಟ್ಟು ಜಮೀನಿನ ಅರ್ಧದಷ್ಟನ್ನು ಮೀಸಲಿರಿಸಲಾಯಿತು. ಗೇಣಿದಾರಿಕೆ ರದ್ಧತಿಯಿಂದ ದೊರಕಿದ ಹೆಚ್ಚುವರಿ ಜಮೀನನ್ನು ನೆಲೆ ತಪ್ಪಿದ ಗೇಣಿದಾರರಿಗೆ ನೀಡಲಾಯಿತು. ಕೃಷಿ ಕಾರ್ಮಿಕರು, ಭೂ ರಹಿತರು ಮತ್ತು ೨,೦೦೦ ರೂಪಾಯಿಗಳಿಗಿಂತ (ಈಗ ೪,೮೦೦ ರೂಪಾಯಿಗಳು) ಕಡಿಮೆ ವಾರ್ಷಿಕ ಆದಾಯವಿರುವ ಮಾಜಿ ಸೈನಿಕರು ಮುಂತಾದವರಿಗೆ ಮಂಜೂರು ಮಾಡಬಹುದೆಂದು ಹೇಳಲಾಯಿತು. ಮಂಜೂರಿದಾರರಿಗೆ ಸಂದ ಎ, ಬಿ, ಅಥವಾ ಸಿ ವರ್ಗದ ಜಮೀನಿನ ವಾರ್ಷಿಕ ಉತ್ಪನ್ನದ ೧೫ ರಷ್ಟು ಮೌಲ್ಯವನ್ನು ಹಣದ ರೂಪದಲ್ಲಿ ಸರಕಾರಕ್ಕೆ ಪಾವತಿ ಮಾಡಬೇಕೆಂದು ನಿರ್ಬಂಧ ಮಾಡಲಾಯಿತು; ಡಿ ವರ್ಗದ ಜಮೀನಾಗಿದ್ದಲ್ಲಿ ಸರಕಾರಕ್ಕೆ ನೀಡಬೇಕಾದ ಮೊತ್ತವನ್ನು ೨೦ ಪಟ್ಟು ಎಂದು ಗೊತ್ತುಪಡಿಸಲಾಯಿತು.

## ಕೋಷ್ಟಕ ೯.೧೦ ಕರ್ನಾಟಕ ಭೂ ಸುಧಾರಣಾ ಕಾಯ್ದೆಯಡಿ ಸ್ವೀಕೃತವಾದ ಅರ್ಜಿ, ವಿಲೇವಾರಿ ಹಾಗೂ ಬಾಕಿ ಇರುವ ಮಾಹಿತಿಯನ್ನು ತೋರಿಸುವ ತ:ಖ್ತೆ. (೨೦೧೩ನೇ ಮಾರ್ಚ್ ಅಂತ್ಯಕ್ಕೆ) ನಮೂನೆ–೭

| ಕ್ರ.ಸಂ. | ತಾಲೂಕು | ಒಟ್ಟು ಸ್ವೀಕರಿಸಲಾದ ಅರ್ಜಿಗಳು | | | ಒಟ್ಟು ವಿಲೇವಾರಿ ಮಾಡಿದ ಅರ್ಜಿಗಳು | | |
|---|---|---|---|---|---|---|---|
| | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | |
| | | | ಎ | ಗುಂ | | ಎ | ಗುಂ |
| ೧ | ತುಮಕೂರು | ೪೦೨೬ | ೧೬೫೭೯ | ೦೨ | ೪೦೨೬ | ೧೬೫೭೯ | ೦೨ |
| ೨ | ಗುಬ್ಬಿ | ೧೭೨೧ | ೩೨೩೪ | ೩೧ | ೧೭೨೧ | ೩೨೩೪ | ೩೧ |
| ೩ | ಕುಣಿಗಲ್ | ೧೮೮೯ | ೪೭೪೬ | ೧೦ | ೧೮೮೯ | ೪೭೪೬ | ೧೦ |
| ೪ | ತಿಪಟೂರು | ೨೮೧ | ೭೮೦ | ೦೦ | ೨೮೧ | ೭೮೦ | ೦೦ |
| ೫ | ತುರುವೇಕೆರೆ | ೪೬೧ | ೧೭೫೩ | ೨೨ | ೪೬೧ | ೧೭೫೩ | ೨೨ |
| ೬ | ಚಿ.ನಾ ಹಳ್ಳಿ | ೧೨೫೯ | ೪೧೭೧ | ೧೧ | ೧೨೫೯ | ೪೧೭೧ | ೧೧ |
| ೭ | ಮಧುಗಿರಿ | ೯೩೯ | ೩೫೦೧ | ೩೭ | ೯೩೯ | ೩೫೦೧ | ೩೭ |
| ೮ | ಕೊರಟಗೆರೆ | ೫೨೭ | ೨೬೩೫ | ೧೪ | ೫೨೭ | ೨೬೩೫ | ೧೪ |
| ೯ | ಶಿರಾ | ೧೯೫೯ | ೪೯೭೫ | ೦೦ | ೧೯೫೯ | ೪೯೭೫ | ೦೦ |
| ೧೦ | ಪಾವಗಡ | ೫೨ | ೬೮೮ | ೧೦ | ೪೬ | ೬೪೪ | ೩೫ |
| ಒಟ್ಟು | | ೧೩೧೧೪ | ೪೩೦೬೩ | ೧೩೭ | ೧೩೧೦೮ | ೪೩೦೨೦ | ೧೬೨ |

| ಕ್ರ.ಸಂ. | ತಾಲೂಕು | ಅರ್ಜಿದಾರರ ಪರವಾಗಿ ವಿಲೇಯಾದ ಅರ್ಜಿಗಳು | | | ತಿರಸ್ಕರಿಸಿದ ಅರ್ಜಿಗಳು | | | ಬಾಕಿ ಉಳಿದ ಅರ್ಜಿಗಳು | | |
|---|---|---|---|---|---|---|---|---|---|---|
| | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | |
| | | | ಎ | ಗುಂ | | ಎ | ಗುಂ | | ಎ | ಗುಂ |
| ೧ | ತುಮಕೂರು | ೨೧೫೬ | ೫೫೮೪ | ೧ | ೧೮೭೦ | ೧೦೯೫ | ೦೧ | ೦ | ೦ | ೦೦ |
| ೨ | ಗುಬ್ಬಿ | ೬೯೧ | ೧೨೦೦ | ೪ | ೧೦೩೦ | ೨೦೩೪ | ೨೭ | ೦ | ೦ | ೦೦ |
| ೩ | ಕುಣಿಗಲ್ | ೬೯೩ | ೧೦೬೭ | ೩೧ | ೧೧೯೬ | ೩೬೭೮ | ೧೯ | ೦ | ೦ | ೦೦ |
| ೪ | ತಿಪಟೂರು | ೧೧೭ | ೩೨೦ | ೩೮ | ೧೬೪ | ೪೫೯ | ೦೨ | ೦ | ೦ | ೦೦ |
| ೫ | ತುರುವೇಕೆರೆ | ೬೪ | ೧೭೮ | ೧೯ | ೩೯೭ | ೧೫೭೫ | ೦೩ | ೦ | ೦ | ೦೦ |
| ೬ | ಚಿ.ನಾ ಹಳ್ಳಿ | ೨೯೫ | ೮೧೧ | ೦ | ೯೬೪ | ೩೩೬೦ | ೧೧ | ೦ | ೦ | ೦೦ |
| ೭ | ಮಧುಗಿರಿ | ೩೧೫ | ೯೧೮ | ೨೭ | ೬೨೪ | ೨೫೮೩ | ೧೦ | ೦ | ೦ | ೦೦ |
| ೮ | ಕೊರಟಗೆರೆ | ೧೨೩ | ೬೨೩ | ೫ | ೪೦೪ | ೨೦೧೦ | ೦೯ | ೦ | ೦ | ೦೦ |
| ೯ | ಶಿರಾ | ೮೭೨ | ೧೮೦೭ | ೦ | ೧೦೮೭ | ೩೧೬೮ | ೦೦ | ೦ | ೦ | ೦೦ |
| ೧೦ | ಪಾವಗಡ | ೫ | ೪೫ | ೩ | ೪೧ | ೫೫೯ | ೩೨ | ೬ | ೪೩ | ೧೫ |
| ಒಟ್ಟು | | ೫೩೩೧ | ೧೨೫೫೪ | ೧೨೮ | ೭೭೭೭ | ೩೦೪೬೨ | ೧೧೪ | ೬ | ೪೩ | ೧೫ |

## ನಮೂನೆ ೭ 'ಎ'

### ಕೋಷ್ಟಕ ೯.೧೧ ಕರ್ನಾಟಕ ಭೂಸುಧಾರಣಾ ಕಾಯ್ದೆಯಡಿ ಸ್ವೀಕೃತವಾದ ಸಂಖ್ಯೆ, ವಿಲೇವಾರಿ ಹಾಗೂ ಬಾಕಿ ಇರುವ ಮಾಹಿತಿಯನ್ನು ತೋರಿಸುವ ತ:ಖ್ತೆ

### (ಪ್ರಾರಂಭದಿಂದ ೨೦೧೨-೧೩ ಮಾರ್ಚ್ ೨೦೧೩ರ ಮಾಹೆಯ ಅಂತ್ಯಕ್ಕೆ)

| ಕ್ರ. ಸಂ. | ತಾಲ್ಲೂಕು | ಒಟ್ಟು ಸ್ವೀಕರಿಸಲಾದ ಅರ್ಜಿಗಳು | | | ಒಟ್ಟು ವಿಲೇವಾರಿ ಮಾಡಿದ ಅರ್ಜಿಗಳು | | | ಅರ್ಜಿದಾರರ ಪರವಾಗಿ ವಿಲೇಯಾದ ಅರ್ಜಿಗಳು | | | |
|---|---|---|---|---|---|---|---|---|---|---|---|
| | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ |
| | | | ಎ | ಗುಂ | | ಎ | ಗುಂ | | ಎ | ಗುಂ | |
| ೧ | ತುಮಕೂರು | ೪೩೫ | ೪೭೩ | ೦೨ | ೪೦೫ | ೩೬೮ | ೧೪ | ೪೫ | ೮೨ | ೦೪ | ೩೬೦ |
| ೨ | ಗುಬ್ಬಿ | ೧೭೬ | ೪೩೧ | ೩೦ | ೧೭೩ | ೪೧೮ | ೨೬ | ೪ | ೫ | ೨೨ | ೧೬೯ |
| ೩ | ಕುಣಿಗಲ್ | ೬೪ | ೧೭೨ | ೦೨ | ೬೨ | ೧೬೨ | ೧೭ | ೨ | ೧ | ೧೧ | ೬೦ |
| ೪ | ತಿಪಟೂರು | ೪೩೮ | ೬೫೨ | ೨೮ | ೪೩೮ | ೬೫೨ | ೨೮ | ೯ | ೧೧ | ೦೦ | ೪೨೯ |
| ೫ | ಚಿ.ನಾ ಹಳ್ಳಿ | ೧೭೮ | ೬೭೦ | ೩೯ | ೧೭೮ | ೬೭೦ | ೩೯ | ೦ | ೦ | ೦ | ೧೭೮ |
| ೬ | ತುರುವೇಕೆರೆ | ೧೨೭ | ೧೮೭ | ೩೫ | ೧೨೭ | ೧೮೭ | ೩೫ | ೦ | ೦ | ೦ | ೧೨೭ |
| ೭ | ಮಧುಗಿರಿ | ೧೨೭ | ೨೬೨ | ೩೨ | ೧೦೫ | ೨೫೨ | ೩೮ | ೪ | ೩೭ | ೦ | ೧೦೧ |
| ೮ | ಶಿರಾ | ೧೨೧ | ೨೯೩ | ೧೧ | ೧೨೧ | ೨೯೩ | ೧೧ | ೧೨೧ | ೨೯೩ | ೧೧ | ೦ |
| ೯ | ಕೊರಟಗೆರೆ | ೮೩ | ೩೧೫ | ೨೨ | ೮೩ | ೩೧೫ | ೨೨ | ೦ | ೦ | ೦ | ೮೩ |
| ೧೦ | ಪಾವಗಡ | ೧೧೪೧ | ೧೧೭೩೮ | ೨೦ | ೧೧೪೧ | ೧೧೭೩೮ | ೨೦ | ೫೦೨ | ೪೮೯೫ | ೦೧ | ೬೩೯ |
| ಒಟ್ಟು | | **೨೮೯೦** | **೧೫೧೯೫** | **೨೨೧** | **೨೮೩೩** | **೧೫೦೫೮** | **೨೫೦** | **೬೮೭** | **೫೩೨೪** | **೪೯** | **೨೧೪೬** |

| ಕ್ರ. ಸಂ. | ತಾಲ್ಲೂಕು | ಒಟ್ಟು ವಿಲೇವಾರಿ ಮಾಡಿದ ಅರ್ಜಿಗಳು | | ಬಾಕಿ ಉಳಿದ ಅರ್ಜಿಗಳು | | |
|---|---|---|---|---|---|---|
| | | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | |
| | | ಎ | ಗುಂ | | ಎ | ಗುಂ |
| ೧ | ತುಮಕೂರು | ೨೮೬ | ೧೦ | ೩೦ | ೧೦೪ | ೨೮ |
| ೨ | ಗುಬ್ಬಿ | ೪೧೩ | ೦೪ | ೩ | ೧೩ | ೦೪ |
| ೩ | ಕುಣಿಗಲ್ | ೧೬೧ | ೦೬ | ೨ | ೯ | ೨೫ |
| ೪ | ತಿಪಟೂರು | ೬೪೧ | ೨೮ | ೦ | ೦ | ೦೦ |
| ೫ | ಚಿ.ನಾ ಹಳ್ಳಿ | ೬೭೦ | ೩೯ | ೦ | ೦ | ೦೦ |
| ೬ | ತುರುವೇಕೆರೆ | ೧೮೭ | ೩೫ | ೦ | ೦ | ೦೦ |
| ೭ | ಮಧುಗಿರಿ | ೨೧೫ | ೩೮ | ೨೨ | ೯ | ೩೪ |
| ೮ | ಶಿರಾ | ೦ | ೦೦ | ೦ | ೦ | ೦೦ |
| ೯ | ಕೊರಟಗೆರೆ | ೩೧೫ | ೨೨ | ೦ | ೦ | ೦೦ |
| ೧೦ | ಪಾವಗಡ | ೬೮೪೩ | ೧೯ | ೦ | ೦ | ೦೦ |
| ಒಟ್ಟು | | **೯೭೩೩** | **೨೦೧** | **೫೭** | **೧೩೬** | **೯೧** |

**ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು**

## ೨೧. ಹೆಚ್ಚುವರಿ ಭೂಮಿ

### ಕೋಷ್ಟಕ ೯.೧೨ ಕರ್ನಾಟಕ ಭೂ ಸುಧಾರಣೆ ಕಾಯಿದೆ ೧೯೬೧ರ ಅಡಿಯಲ್ಲಿ ಹೆಚ್ಚುವರಿ ಭೂಮಿ ಎಂದು ಘೋಷಿಸಲ್ಪಟ್ಟ ಜಮೀನಿನ ವಿವರ–ಮಾರ್ಚ್ ೨೦೧೩

| ಕ್ರ ಸಂ | ತಾಲೂಕಿನ ಹೆಸರು | ಘೋಷಿಸಲಾದ ಹೆಚ್ಚುವರಿ ಭೂಮಿ | | ನ್ಯಾಯಾಲಯದಿಂದ ತಡೆಯಾಜ್ಞೆ ಇರುವ ವಿಸ್ತೀರ್ಣ | | | | ಉಳಿಕೆ ಪ್ರಕರಣಗಳು | | ಹಂಚಿಕೆಯಾದ ವಿಸ್ತೀರ್ಣ | | ಹಂಚಿಕೆಗೆ ಬಾಕಿ ಲಭ್ಯವಿರುವ ವಿಸ್ತೀರ್ಣ | |
|---|---|---|---|---|---|---|---|---|---|---|---|---|---|
| | | | ಸ್ವಾಧೀನಕ್ಕೆ ಮುಂಚೆ | | ಸ್ವಾಧೀನದ ನಂತರ | | | | | | | | |
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೧ | ತುಮಕೂರು | ೩೧ | ೧೦೬.೩೪ | ೨ | ೪೮.೧೦ | ೦ | ೦ | ೦ | ೦ | ೨೯ | ೫೮.೨೫ | ೨ | ೪೮.೦೯ |
| ೨ | ಗುಬ್ಬಿ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೩ | ಕುಣಿಗಲ್ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೪ | ತಿಪಟೂರು | ೬ | ೧೨.೩೦ | ೦ | ೦ | ೦ | ೦ | ೦ | ೦ | ೬ | ೧೨.೩೦ | ೦ | ೦ |
| ೫ | ಚಿ.ನಾ ಹಳ್ಳಿ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೬ | ತುರುವೇಕೆರೆ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೭ | ಮಧುಗಿರಿ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೮ | ಶಿರಾ | ೧೨೧ | ೨೯೩.೧೧ | ೦ | ೦ | ೦ | ೦ | ೦ | ೦ | ೧೨೧ | ೨೯೩.೧೧ | ೦ | ೦ |
| ೯ | ಕೊರಟಗೆರೆ | ೧೮ | ೩೧.೩೮ | ೦ | ೦ | ೦ | ೦ | ೦ | ೦ | ೧೮ | ೩೧.೩೮ | ೦ | ೦ |
| ೧೦ | ಪಾವಗಡ | ೩೬೮ | ೭೪೮.೧೫ | ೦ | ೦ | ೦ | ೦ | ೦ | ೦ | ೩೬೮ | ೭೪೮.೧೫ | ೦ | ೦ |
| | **ಒಟ್ಟು** | **೫೪೪** | **೧೧೯೧.೨೮** | **೨** | **೪೮.೧೦** | **೦** | **೦** | **೦** | **೦** | **೫೪೨** | **೧೧೪೩.೧೯** | **೨** | **೪೮.೦೯** |

**ಗೇಣಿದಾರಿ ರದ್ದತಿ:** ಮೇಲ್ಕಂಡ ಸುಧಾರಣೆಯನ್ವಯ ಸೈನಿಕರು ಹಾಗೂ ನಾವಿಕರ ಹೊಲಗಳ ಹೊರತಾಗಿ, ಗೇಣಿದಾರಿ ಪದ್ಧತಿ ರದ್ದಾಗಿ ಭೂಮಾಲೀಕರ ಮತ್ತು ಗೇಣಿದಾರರ ಸಂಬಂಧ ಕೊನೆಗೊಂಡಿತು. ಈ ಕಾನೂನು ಕೇವಲ ಸ್ವಂತ ಉಳುಮೆ ಮಾಡುವವರು ಮಾತ್ರ ಭೂಮಿ ಹೊಂದುವ ಹಕ್ಕನ್ನು ನೀಡುತ್ತದೆ. ಮಾಲೀಕ ತನ್ನ ಸ್ವಂತ ದೈಹಿಕ ಶ್ರಮದಿಂದಾಗಲೀ, ತನ್ನ ಮನೆ ಮಂದಿಯ ದೈಹಿಕ ಶ್ರಮದಿಂದಾಗಲೀ ಉಳುಮೆ ಮಾಡುವುದನ್ನು ಸ್ವಂತ ಉಳುಮೆ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ತಮ್ಮ ಮೇಲ್ವಿಚಾರಣೆಯಲ್ಲಿ ಕೂಲಿಯಾಳುಗಳ ಸಹಾಯದಿಂದ ಉಳುಮೆ ಮಾಡಿಸಿ, ಅವರಿಗೆ ಹಣದ ರೂಪದಲ್ಲಿ ಕೂಲಿ ನೀಡಬಹುದೇ ಹೊರತು ಧಾನ್ಯದ ರೂಪದಲ್ಲಲ್ಲ. ಈ ಶಾಸನದ ವಿರುದ್ಧ ಸಾಗುವಳಿ ಮಾಡಿಸಿದಲ್ಲಿ ಆ ಜಮೀನನ್ನು ಯಾವ ಪರಿಹಾರವನ್ನೂ ನೀಡದೆ ಸರ್ಕಾರ ವಹಿಸಿಕೊಳ್ಳುತ್ತದೆ.

ಭೂ ನ್ಯಾಯಮಂಡಳಿ: ಕರ್ನಾಟಕ ಭೂಸುಧಾರಣಾ ಕಾಯ್ದೆ ೧೯೬೧ರ ೪೮ನೇ ವಿಧಿಯಂತೆ ಪ್ರತೀ ತಾಲೂಕಿಗೆ ಭೂ ನ್ಯಾಯಮಂಡಳಿಗಳನ್ನು ರಚಿಸಲು ಅವಕಾಶವಿದ್ದಿತು. ಪ್ರತೀ ಮಂಡಳಿಯಲ್ಲಿ ನಾಲ್ಕು ಜನ ಸರ್ಕಾರೇತರ ಸದಸ್ಯರು ಸಂಬಂಧಪಟ್ಟ ಉಪವಿಭಾಗದ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಕಾನೂನಿನಂತೆ ಸರ್ಕಾರೇತರ ಸದಸ್ಯರಲ್ಲಿ ಒಬ್ಬ ಪರಿಶಿಷ್ಟ ಜಾತಿ ಅಥವಾ ಪಂಗಡದ ಸದಸ್ಯರಿರುತ್ತಾರೆ. ಪ್ರಕರಣಗಳು ಬಹುಮತದಿಂದ ತೀರ್ಮಾನವಾಗುತ್ತದೆ. ಮೂರು ಜನ ಸದಸ್ಯರು ಹಾಗೂ ಅಧ್ಯಕ್ಷರೂ ಸೇರಿದರೆ ಅವಶ್ಯ ಹಾಜರಿ (ಕೋರಂ) ಆಗುತ್ತದೆ. ಅರ್ಜಿದಾರರ ಅನುಕೂಲಕ್ಕೆ ಪ್ರತೀ ತಾಲೂಕಿನಲ್ಲೂ ಒಂದೊಂದು ನ್ಯಾಯಮಂಡಳಿ ರಚಿತವಾಗಿದೆ.

ನ್ಯಾಯಮಂಡಳಿಯು ಅರೆ ನ್ಯಾಯಾಸ್ಥಾನದ ರೂಪದ ಸಂಸ್ಥೆಯಾಗಿದ್ದು (ಕ್ವಾಸಿ ಜುಡಿಷಿಯಲ್ ಬಾಡಿ) ಸಂಕ್ಷಿಪ್ತ ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿರುತ್ತದೆ. ಗೇಣಿದಾರ ಮತ್ತು ಭೂಮಾಲೀಕರ ಮಧ್ಯೆ ಇರುವ ವ್ಯಾಜ್ಯಗಳನ್ನು ವಿಚಾರಣೆಯ ನಂತರ ಪರಿಹರಿಸಲಾಗುತ್ತದೆ. ಗೇಣಿದಾರನು ಆರ್ಥಿಕವಾಗಿ ದುರ್ಬಲನಾಗಿದ್ದರೆ ಆತನಿಗೆ ನೆರವು ನೀಡಲು ಶಾಸನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸರ್ಕಾರವು ಗೇಣಿದಾರರ ಸಹಾಯಕ್ಕೆಂದೇ 'ಕಾನೂನು ಸಲಹಾ ಕೋಶ

(ಸೆಲ್)' ವನ್ನು ಸಚಿವಾಲಯದಲ್ಲಿ ಸ್ಥಾಪಿಸಿದೆ. ನ್ಯಾಯಮಂಡಳಿಗಳ ತೀರ್ಮಾನದ ವಿರುದ್ಧವಾಗಲೀ, ಭೂಮಾಲೀಕರ ರಿಟ್ ಅರ್ಜಿಗಳ ವಿರುದ್ಧವಾಗಲೀ ಈ ಕೋಶದಲ್ಲಿ ಗೇಣಿದಾರರು ರಕ್ಷಣೆ ಪಡೆಯಬಹುದು. ಭೂ ನ್ಯಾಯ ಮಂಡಳಿಯು ಅರೆ ನ್ಯಾಯಾಲಯ ಸ್ವರೂಪ ಹೊಂದಿದ್ದು, ಸಂಕ್ಷಿಪ್ತ ವಿಚಾರಣೆ ನಡೆಸುವ ಅಧಿಕಾರ ಹೊಂದಿರುತ್ತದೆ. ಪ್ರಾರಂಭದಲ್ಲಿ ಭೂ ನ್ಯಾಯ ಮಂಡಳಿಗಳ ಮುಂದೆ ವಕೀಲರು ಹಾಜರಾಗುವುದನ್ನು ನಿಷೇಧಿಸಲಾಗಿತ್ತು. ಆದರೆ ೧೯೯೧ರಲ್ಲಿ ಕಾಯಿದೆಗೆ ಮಾಡಿದ ತಿದ್ದುಪಡಿಯು ವಕೀಲರು ಹಾಜರಾಗಲು ಅವಕಾಶವನ್ನು ದೊರಕಿಸಿದೆ. ಭೂ ನ್ಯಾಯ ಮಂಡಳಿ ತನ್ನ ತೀರ್ಪನ್ನು ಬಹುಮತದಿಂದ ನೀಡಬೇಕು. ಒಂದು ವೇಳೆ ಅಧ್ಯಕ್ಷರ ಅಭಿಪ್ರಾಯಕ್ಕೆ ತದ್ವಿರುದ್ಧ ಅಭಿಪ್ರಾಯವು ಬಹುಮತದಿಂದ ಹೊರಟರೆ ಆ ಬಹುಮತದ ತೀರ್ಪೇ ಕಾನೂನು ಪ್ರಕಾರ ಸಿಂಧುವಾಗುತ್ತದೆ.

ಕೃಷಿ ಭೂಮಿಯನ್ನು ಓರ್ವ ಗೇಣಿದಾರನಿಗೆ ಖಾಯಂ ಮಾಡಿದ ಆದೇಶವನ್ನು ಹೊರಡಿಸಿದ ನಂತರ ತಹಸೀಲ್ದಾರನು ಹಕ್ಕುಪತ್ರಗಳನ್ನು ನಮೂನೆ ೧೦ರಲ್ಲಿ ಗೇಣಿದಾರನಿಗೆ ಕೊಡುತ್ತಾರೆ. ಈ ಹಕ್ಕುಪತ್ರವನ್ನು ಪಡೆದ ದಿನದಿಂದ ೧೫ ವರ್ಷಗಳವರೆಗೆ ಆ ಜಮೀನನ್ನು ಅವನು ಪರಭಾರೆ ಮಾಡುವಂತಿಲ್ಲ. ಅದಿಭೋಗದಾರಿಕೆ ಹಕ್ಕನ್ನು ಪಡೆದ ಮಾಜಿ ಗೇಣಿದಾರನು/ಹೊಸ ಹಿಡುವಳಿದಾರನು ಸರಕಾರಕ್ಕೆ ಆ ಜಮೀನಿನ ಬಾಬ್ತು ವಾರ್ಷಿಕ ಭೂ ತೆರಿಗೆ ಕಟ್ಟಲು ಹಾಗೂ ನಿಗದಿಪಡಿಸಿದ ಮೊಬಲಗನ್ನೂ ಪಾವತಿಸಲು ಬಾಧ್ಯಸ್ಥನಾಗಿರುತ್ತಾನೆ.

ಭೂಸುಧಾರಣಾ ಮೇಲ್ಮನವಿ ಪ್ರಾಧಿಕಾರ: ಕರ್ನಾಟಕ ಭೂ ಸುಧಾರಣಾ ಕಾಯಿದೆಯನ್ವಯ ಭೂ ನ್ಯಾಯ ಮಂಡಳಿಗಳಿಗೆ ವ್ಯಾಪಕ ಮತ್ತು ಅಪರಿಮಿತ ಅಧಿಕಾರಗಳಿದ್ದು ರಾಜ್ಯಾದ್ಯಂತ ಲಕ್ಷಾಂತರ ಗೇಣಿದಾರಿಕೆ ಅರ್ಜಿಗಳು, ಮನೆ ನಿವೇಶನ ಅರ್ಜಿಗಳು, ಹೆಚ್ಚುವರಿ ಜಮೀನಿನ ಘೋಷಣೆಗಳು ತೀರ್ಮಾನವಾಗಿವೆ. ಭೂ ನ್ಯಾಯ ಮಂಡಳಿಯು ಮಾಡುವ ಆದೇಶ ಪ್ರಶ್ನಾತೀತವಾಗಿದ್ದು, ಬೇರಾವುದೇ ಸಿವಿಲ್ ನ್ಯಾಯಾಲಯವು ಅದು ನೀಡುವ ಆಜ್ಞೆಯ ಕುರಿತಾಗಿ ಯಾವುದೇ ಕ್ರಮವನ್ನು ಜರುಗಿಸುವ ಅಧಿಕಾರ ಹೊಂದಿರುವುದಿಲ್ಲ. ಆದರೆ ನ್ಯಾಯ ಮಂಡಳಿಯ ಆಜ್ಞೆಯಿಂದ ಬಾಧೆಗೊಳಗಾದವರು ರಾಜ್ಯದ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದಿತ್ತು. ಭೂ ನ್ಯಾಯ ಮಂಡಳಿಗಳು ವಿಚಾರಣೆ ನಡೆಸುವಾಗ ಸೂಕ್ತ ಕಾನೂನಿನ ಕ್ರಮಗಳ ಪಾಲನೆಯಾಗಿಲ್ಲವೆಂದು ಆರೋಪಿಸಿ ಸಹಸ್ರಾರು ಮೊಕದ್ದಮೆಗಳನ್ನು ಉಚ್ಚ ನ್ಯಾಯಾಲಯ (ಹೈಕೋರ್ಟ್)ದಲ್ಲಿ ದಾಖಲು ಮಾಡಲಾಯಿತು. ಆದರೆ ಉಚ್ಚ ನ್ಯಾಯಾಲಯವು ಕೂಡ ತಾನೇ ವಿಚಾರಣೆ ನಡೆಸಿ ತೀರ್ಪು ನೀಡುವ ಹಾಗೆ ಇಲ್ಲವಾದುದರಿಂದ, ಮರು ವಿಚಾರಣೆ ನಡೆಸುವ ಅಗತ್ಯವಿದೆಯೆಂದು ಹೇಳಿ ಭೂ ನ್ಯಾಯ ಮಂಡಳಿಗಳಿಗೇ ಅವುಗಳನ್ನು ಹಿಂತಿರುಗಿಸುತ್ತಾ ಬಂದಿತು. ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಪ್ರಕರಣಗಳು ಉಚ್ಚ ನ್ಯಾಯಾಲಯದ ಮುಂದೆ ಬರುತ್ತಿದ್ದುದರಿಂದ ಇತರ ಪ್ರಕರಣಗಳ ವಿಲೇವಾರಿ ವೇಗವು ಕುಂಠಿತವಾಗತೊಡಗಿತು. ಈ ಪರಿಸ್ಥಿತಿಯನ್ನು ಗಮನಿಸಿದ ಸರಕಾರವು ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ತಂದು (೧೯೮೬) ಜಿಲ್ಲೆಗೊಂದರಂತೆ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ಸೆಕ್ಷನ್ ೧೧೬-ಎ ಪ್ರಕಾರ ಸ್ಥಾಪಿಸಿತು. ಇಂತಹ ಪ್ರತಿಯೊಂದು ಪ್ರಾಧಿಕಾರದಲ್ಲಿ ನ್ಯಾಯಾಂಗ ಇಲಾಖೆಯ ಓರ್ವ ಸಿವಿಲ್ ನ್ಯಾಯಾಧೀಶರು(ಜಡ್ಜ್) ಮತ್ತು ಕಂದಾಯ ಇಲಾಖೆಯ ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯೊಬ್ಬರು ಜೊತೆಯಾಗಿ ಕುಳಿತು ಮೇಲ್ಮನವಿಗಳನ್ನು ಆಲಿಸಿ ತೀರ್ಪು ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಉಚ್ಚ ನ್ಯಾಯಾಲಯದಲ್ಲಿದ್ದ ಸಹಸ್ರಾರು ಪ್ರಕರಣಗಳನ್ನು ಈ ಮೇಲ್ಮನವಿ ಪ್ರಾಧಿಕಾರಗಳಿಗೆ ವರ್ಗಾಯಿಸಲಾಯಿತು.

ಸರಕಾರವು ೮-೧೦-೧೯೯೦ರಲ್ಲಿ ಕಾಯಿದೆಗೆ ಮತ್ತೊಂದು ತಿದ್ದುಪಡಿ ಮಾಡಿ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರಗಳನ್ನು ರದ್ದುಗೊಳಿಸಿತು. ನಿರೀಕ್ಷೆಯಂತೆಯೇ ಹಿಂದೆ ಉಂಟಾಗಿದ್ದ ಸಮಸ್ಯೆಗಳೇ ಪುನರಾವರ್ತನೆಯಾ ಗತೊಡಗಿದವು. ಉಚ್ಚ ನ್ಯಾಯಾಲಯವು ಪುನ: ಮೇಲ್ಮನವಿ ಪ್ರಾಧಿಕಾರಗಳನ್ನು ಸ್ಥಾಪಿಸಲು ಸರಕಾರಕ್ಕೆ ಸೂಚನೆ ನೀಡಿತು. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ (ಕೆ.ಎ.ಟಿ)ಕ್ಕೆ ಮೇಲ್ಮನವಿ ಸಲ್ಲಿಸಲು ಕರ್ನಾಟಕ ಭೂ ಸುಧಾರಣಾ ಕಾಯ್ದೆ ೧೯೬೧ ರ ಅಡಿಯಲ್ಲಿ ಜಿಲ್ಲಾಧಿಕಾರಿಯವರು ಅಥವಾ ೭೭ ಅಧಿನಿಯಮ ೧ನೇ ಅಧಿನಿಯಮ ಅಥವಾ ೮೩ನೇ ಅಧಿನಿಯಮದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು ನೀಡಿದ ಆದೇಶದ ವಿರುದ್ಧ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ (ಕೆ.ಎ.ಟಿ)ಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲು ಅಧಿನಿಯಮದ ೧೧೮ರ ೨ನೇ ಉಪ ಅಧಿನಿಯಮಕ್ಕೆ ತಿದ್ದುಪಡಿ ತರಲಾಯಿತು.

ಹೆಚ್ಚುವರಿ ಭೂಮಿ ಹಂಚಿಕೆ: ಸರ್ಕಾರ ವಹಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಸ್ಥಾನಭ್ರಷ್ಟ ಗೇಣಿದಾರರಿಗೆ, ಕೃಷಿ ಕೂಲಿಕಾರರಿಗೆ, ಭೂರಹಿತರಿಗೆ ಮತ್ತು ೨,೦೦೦ ರೂ.ಗಳಿಗಿಂತ ಹೆಚ್ಚು ವಾರ್ಷಿಕ ಆದಾಯವಿಲ್ಲದ ಮಾಜಿ ಸೈನಿಕರಿಗೆ ಹಂಚಲು ಅವಕಾಶವಿರುತ್ತದೆ. ಈ ಹೆಚ್ಚುವರಿ ಭೂಮಿಯ ಶೇಕಡಾ ೫೦ ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನಕ್ಕೆ ಮೀಸಲಿಡಲಾಗಿದೆ.

ಸರಕಾರಿ **ಭೂಮಿಯ ವಿಲೇವಾರಿ:** ಸ್ವಾತಂತ್ರ್ಯ ಪೂರ್ವದಲ್ಲಿ ಭೂಮಿ ನೀಡಿಕೆ ಬಗ್ಗೆ ಯಾವುದೇ ಖಚಿತವಾದ ನಿಯಮಗಳಿರಲಿಲ್ಲ. ಸಾಗುವಳಿಯಾಗದ ಹಾಗೂ ಬಂಜರು ಭೂಮಿಯ ತುಂಡುಗಳನ್ನು ಹಲವಾರು ಬಾರಿ ಕೆಲವು ವರ್ಗದ ಜನರಿಗೆ ಅವರು ಮಾಡಿದ ಸೇವೆಗಳಿಗೆ ಬಳುವಳಿಯಾಗಿ ನೀಡಲಾಗುತ್ತಿತ್ತು ಅಥವಾ ಅವುಗಳನ್ನು ಸಾರ್ವಜನಿಕವಾಗಿ ಹರಾಜು ಮಾಡಲಾಗುತ್ತಿತ್ತು. ಭೂಸಾಗುವಳಿಯೇ ಇದರ ಮುಖ್ಯ ಉದ್ದೇಶವಾಗಿತ್ತು. ಸ್ವಾತಂತ್ರ್ಯಾನಂತರ ಭೂ ಮಂಜೂರಾತಿ ವಿಷಯದಲ್ಲಿ ಸಾಮಾಜಿಕ ನ್ಯಾಯನೀತಿಗಳನ್ನು ಅನುಸರಿಸಬೇಕೆಂಬ ಅಂಶವನ್ನು ಅರಿತ ಸರ್ಕಾರವು ಸಮಾಜದ ದುರ್ಬಲ ವರ್ಗದವರಿಗೆ, ಭೂರಹಿತರಿಗೆ ಹಾಗೂ ಇತರೆ ಪಾತ್ರರಿಗೆ ಪ್ರಾಧಾನ್ಯ ನೀಡಲು ನಿರ್ಧರಿಸಲಾಯಿತು. ೧೯೫೮ರಲ್ಲಿ ಇಡೀ ರಾಜ್ಯದಲ್ಲಿ ಏಕರೂಪದ ಭೂಮಂಜೂರಾತಿ ನಿಯಮ ಜಾರಿ ಮಾಡಲಾಯಿತು. ೧೯೫೦ರಲ್ಲಿ ರಚಿಸಲಾಗಿದ್ದ ಭೂಮಿ ನೀಡಿಕೆ ನಿಯಮಗಳು ರದ್ದಾಗಿ, ೧೯೬೮ರಲ್ಲಿ ನೂತನ ನಿಯಮಗಳೂ, ೧೯೬೯ರಲ್ಲಿ ಮಾರ್ಪಾಟುಗಳೂ ಜಾರಿಯಾದವು. ಕರ್ನಾಟಕ ಭೂ ಮಂಜೂರಾತಿಗೆ ನಿಯಮಗಳು ೧೯೬೪ರ ಕಾಯ್ದೆಯ ೧೯೭ನೇ ಕಲಂ ನನ್ವಯ ೩.೫.೧೯೬೯ರಿಂದ ಜಾರಿಗೆ ಬಂದವು. ಭೂಮಂಜೂರಾತಿಯಲ್ಲಿ ಇದರಂತೆ ಪ್ರಥಮಾದ್ಯತೆಯನ್ನು ಗ್ರಾಮಗಳಲ್ಲಿ ವಾಸವಾಗಿರುವ ಭೂರಹಿತರಿಗೆ ನೀಡಲಾಗಿದೆ. ತದನಂತರ ಕಡಿಮೆ ಭೂಮಿ ಹೊಂದಿದವರು, ನೆರೆ ಗ್ರಾಮದ ಭೂರಹಿತರು ಹಾಗೂ ಇತರರು ಆದ್ಯತೆ ಪಡೆಯುತ್ತಾರೆ.

ಮೇಲ್ಕಂಡ ರೀತಿಯಲ್ಲಿ ಭೂಮಿ ಪಡೆದವರು ಅದನ್ನು ೧೫ ವರ್ಷಗಳ ಅವಧಿಗೆ ಪರಭಾರೆ ಮಾಡುವಂತಿಲ್ಲ ಹಾಗೂ ಪಡೆದ ಮೂರು ವರ್ಷಗಳ ಒಳಗೆ ಮಂಜೂರಾದ ಭೂಮಿಯನ್ನು ಸಾಗುವಳಿಗೆ ಒಳಪಡಿಸಬೇಕು. ಭೂಮಿ ಪಡೆದಾತ ಅದನ್ನು ತಾನೇ ಸ್ವಂತ ಉಳುಮೆ ಮಾಡಬೇಕು ಹಾಗೂ ಬೇಸಾಯಕ್ಕಾಗಿ ಮಾತ್ರ ಉಪಯೋಗಿಸಬೇಕು. ಭೂ ವಿಲೇವಾರಿಯ ಅರ್ಜಿ, ಅದರ ಪರಿಶೀಲನೆ, ವಿಚಾರಣೆ ಹಾಗೂ ಆಖೈರಾಗಿ ಭೂಮಿಯನ್ನು ನಿಗದಿತ ವ್ಯಕ್ತಿಗೆ ಮಾತ್ರ ವಿಲೇವಾರಿಯಾಗುವುದನ್ನು ತಾಲೂಕು ತಹಸೀಲ್ದಾರರೇ ನೋಡಿಕೊಳ್ಳುತ್ತಾರೆ.

**ಇನಾಂ ರದ್ದಿಯಾತಿ:** ವಿವಿಧ ಇನಾಂ ರದ್ದಿಯಾತಿ ಕಾಯ್ದೆಗಳ ಕೆಳಗೆ, ಅಂದರೆ ಕರ್ನಾಟಕ (ಪರ್ಸನಲ್ ಮತ್ತು ಮಿಸ್ಸೆಲೇನಿಯಸ್) ಕಾಯ್ದೆ, ೧೯೫೪, ಕರ್ನಾಟಕ ಮತೀಯ ಮತ್ತು ಧಾರ್ಮಿಕ ಇನಾಂ ರದ್ದಿಯಾತಿ ಕಾಯ್ದೆ ೧೯೫೫, ಕರ್ನಾಟಕ ಗ್ರಾಮ ಕಛೇರಿ ರದ್ದಿಯಾತಿ ಕಾಯಿದೆ, ೧೯೬೧, ಕರ್ನಾಟಕ (ಸಂಡೂರು ಪ್ರದೇಶ) ಇನಾಂ ರದ್ದಿಯಾತಿ ಕಾಯ್ದೆ ೧೯೭೬, ಮತ್ತು ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ, ೧೯೭೭ಗಳ ಕೆಳಗೆ ಉಳುಮೆ ಮಾಡುತ್ತಿದ್ದ ಗೇಣಿದಾರರಿಗೆ ಇನಾಂ ಜಮೀನುಗಳ ಮರು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಅರ್ಜಿ ಸಲ್ಲಿಸಲು ಗೊತ್ತುಪಡಿಸಿದ್ದ ಅವಧಿ ಕೂಡ ಮುಕ್ತಾಯವಾಗಿದೆ.

**ಕೋಷ್ಟಕ ೯.೧೩ ಮಾರ್ಚ್ –೨೦೧೩ರ ಅಂತ್ಯಕ್ಕೆ ವಿವಿಧ ಇನಾಂ ರದ್ದಿಯಾತಿ ಕಾಯಿದೆಯಡಿ ಮರು ಮಂಜೂರು ಅರ್ಜಿಗಳ ವಿವರ (ಇನಾಂವಾರು ಘೋಷ್ವಾರೆ)**

| ಕ್ರ.ಸಂ | ವಿವಿಧ ಇನಾಂಗಳ ಹೆಸರು | ಕಾಯಿದೆಯಡಿ ಸರ್ಕಾರಕ್ಕೆ ನಿಹಿತಗೊಂಡ ಜಮೀನಿನ ವಿವರ | ಒಟ್ಟು ಸ್ವೀಕೃತ ಅರ್ಜಿಗಳು | | ಒಟ್ಟು ವಿಲೇ ಅರ್ಜಿಗಳು | | ಬಾಕಿ ಇರುವ ಅರ್ಜಿಗಳು | | ಅರ್ಜಿ ಹಾಕದೆ ಸರ್ಕಾರಕ್ಕೆ ನಿಹಿತಗೊಂಡಿರುವ ಜಮೀನಿನ ವಿಸ್ತೀರ್ಣ | ಷರಾ |
|---|---|---|---|---|---|---|---|---|---|---|
| | | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | | |
| ೧. | ಮೈಸೂರು (ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ರದ್ದಿಯಾತಿ ಕಾಯಿದೆ ೧೯೫೪ (ನಿಯಮಗಳು ಕಲಂ ೧೦) | ೧೧೦೪೫.೨೭ | ೩೪೧೨ | ೯೩೪೭.೩೭ | ೩೪೦೪ | ೯೨೬೪.೦೯ | ೮ | ೮೩.೨೮ | ೧೬೯೭.೩೦ | – |
| ೨ | ಮೈಸೂರು ಧಾರ್ಮಿಕ ದತ್ತಿ ಇನಾಂ ರದ್ದಿಯಾತಿ ಕಾಯಿದೆ ೧೯೬೫ ಕಲಂ ೯ | ೧೩೮೪೪.೧೨ ಜ | ೪೨೨೫ | ೧೨೪೧೨.೨೪ಜ | ೪೨೨೫ | ೧೨೩೪೦.೦೦ಜ | – | ೭೨.೨೪ | ೧೪೩೧.೨೮ | – |
| ೩ | ಕರ್ನಾಟಕ ಗ್ರಾಮ ಕಛೇರಿ ನೌಕರರ ರದ್ದತಿ ಕಾಯಿದೆ ೧೯೬೧. | ೧೫೪೧೩.೩೯ ಳಿ | ೫೨೩೮ | ೧೨೭೬೩.೨೦ಳಿ | ೫೦೮೨ | ೧೨೩೩೭-೨೭ಳಿ | ೧೫೬ | ೪೨೫.೩೩ | ೨೬೫೦.೧೯ | – |
| ೪ | ಕರ್ನಾಟಕ ಹಲವು ಇನಾಂಗಳ ರದ್ದಿಯಾತಿ ಕಾಯಿದೆ ೧೯೭೭ ಕಲಂ ೧೧ | ಇಲ್ಲ | | | | | | | | |
| ೫ | ಕರ್ನಾಟಕ (ಸಂಡೂರು ಪ್ರದೇಶ) ಇನಾಂ ರದ್ದಿಯಾತಿ ಕಾಯಿದೆ ೧೯೭೬ | ಈ ಜಿಲ್ಲೆಗೆ ಅನ್ವಯಿಸುವುದಿಲ್ಲ | | | | | | | | |
| | ಒಟ್ಟು | ೪೦೩೦೩.೩೯೪ | ೧೨೮೭೫ | ೩೪೫೨೪.೦೨೪ | ೧೨೭೧೧ | ೩೩೯೪೧.೩೭೪ | ೧೬೪ | ೫೮೨.೦೫ | ೫೭೭೯.೩೭ | – |

## ಕೋಷ್ಟಕ ೯.೧೪ ಮಾರ್ಚ್ –೨೦೧೩ರ ಅಂತ್ಯಕ್ಕೆ

### ವಿವಿಧ ಇನಾಂ ರದ್ದಿಯಾತಿ ಕಾಯಿದೆಯಡಿ ಮರು ಮಂಜೂರು ಅರ್ಜಿಗಳ ವಿವರ

1. ಮೈಸೂರು (ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ರದ್ದಿಯಾತಿ ಕಾಯಿದೆ ೧೯೫೪ (ನಿಯಮಗಳು ಕಲಂ ೧೦) ವಿಸ್ತೀರ್ಣ:ಎಕರೆಗಳಲ್ಲಿ

| ಕ್ರ.ಸಂ | ತಾಲೂಕು | ಕಾಯಿದೆಯಡಿ ಸರ್ಕಾರಕ್ಕೆ ನಿಹಿತಗೊಂಡ ಜಮೀನಿನ ವಿವರ | ಒಟ್ಟು ಸ್ವೀಕೃತ ಅರ್ಜಿಗಳು | | ಒಟ್ಟು ವಿಲೇ ಅರ್ಜಿಗಳು | | ಬಾಕಿ ಇರುವ ಅರ್ಜಿಗಳು | | ಅರ್ಜಿ ಹಾಕದೆ ಸರ್ಕಾರಕ್ಕೆ ವಿಹಿತಗೊಂಡಿರುವ ಜಮೀನಿನ ವಿಸ್ತೀರ್ಣ | ಷರಾ |
|---|---|---|---|---|---|---|---|---|---|---|
| | | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | | |
| ೧ | ತುಮಕೂರು | ೬೦೭೬.೩೯ | ೧೮೫೧ | ೪೬೮೨.೧೬ | ೧೮೫೧ | ೪೬೮೨.೧೬ | – | – | ೧೩೯೪.೨೩ | – |
| ೨ | ಗುಬ್ಬಿ | – | – | – | – | – | – | – | – | – |
| ೩ | ಕುಣಿಗಲ್ | ೬೪.೩೭ | ೩೯ | ೬೩.೧೧ | ೩೯ | ೨೯.೧೫ | – | ೩೩.೩೬ | ೧.೨೬ | – |
| ೪ | ತಿಪಟೂರು | ೧೪೨೪.೨೬ | ೪೦೪ | ೧೪೨೪.೨೬ | ೪೦೪ | ೧೪೨೪.೨೬ | – | – | – | – |
| ೫ | ತುರುವೇಕೆರೆ | ೮೦.೧೮ | ೧೪ | ೮೦.೧೮ | ೬ | ೩೦.೨೬ | ೮ | ೪೯.೩೨ | – | – |
| ೬ | ಚಿ.ನಾ ಹಳ್ಳಿ | – | – | – | – | – | – | – | – | – |
| ೭ | ಮಧುಗಿರಿ | ೨೬೯.೩೬ | ೬೩ | ೨೬೯.೩೬ | ೬೩ | ೨೬೯.೩೬ | – | – | – | – |
| ೮ | ಶಿರಾ | ೨೨೭೭.೦೪ | ೮೭೫ | ೨೨೭೧.೦೪ | ೮೭೫ | ೨೨೭೧.೦೪ | – | – | ೬.೦೦ | – |
| ೯ | ಕೊರಟಗೆರೆ | – | – | – | – | – | – | – | – | – |
| ೧೦ | ಪಾವಗಡ | ೮೫೧.೨೭ | ೧೬೬ | ೫೫೬.೦೬ | ೧೬೬ | ೫೫೬.೦೬ | – | – | ೨೯೫.೨೧ | – |
| | ಒಟ್ಟು | ೧೧೦೪೫.೨೭ | ೩೪೧೨ | ೯೩೪೭.೩೭ | ೩೪೦೪ | ೯೨೬೪.೦೯ | ೮ | ೮೩.೨೮ | ೧೬೯೭.೩೦ | – |

## ಕೋಷ್ಟಕ ೯.೧೫ ಮಾರ್ಚ್ –೨೦೧೩ರ ಅಂತ್ಯಕ್ಕೆ

### ವಿವಿಧ ಇನಾಂ ರದ್ದಿಯಾತಿ ಕಾಯಿದೆಯಡಿ ಮರು ಮಂಜೂರು ಅರ್ಜಿಗಳ ವಿವರ (ಇನಾಂವಾರು ಘೋಷ್ವಾರೆ)

### ೨. ಮೈಸೂರು ಧಾರ್ಮಿಕ ದತ್ತಿ ಇನಾಂ ರದ್ದಿಯಾತಿ ಕಾಯಿದೆ ೧೯೬೫ ಕಲಂ ೯

| ಕ್ರ.ಸಂ | ತಾಲೂಕು | ಕಾಯಿದೆಯಡಿ ಸರ್ಕಾರಕ್ಕೆ ನಿಹಿತಗೊಂಡ ಜಮೀನಿನ ವಿವರ | ಒಟ್ಟು ಸ್ವೀಕೃತ ಅರ್ಜಿಗಳು | | ಒಟ್ಟು ವಿಲೇ ಅರ್ಜಿಗಳು | | ಬಾಕಿ ಇರುವ ಅರ್ಜಿಗಳು | | ಅರ್ಜಿ ಹಾಕದೆ ಸರ್ಕಾರಕ್ಕೆ ವಿಹಿತಗೊಂಡಿರುವ ಜಮೀನಿನ ವಿಸ್ತೀರ್ಣ | ಷರಾ |
|---|---|---|---|---|---|---|---|---|---|---|
| | | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | | |
| ೧ | ತುಮಕೂರು | ೨೨೯.೦೧ | ೯೧ | ೨೨೯.೦೧ | ೯೧ | ೨೨೯.೦೧ | – | – | – | – |
| ೨ | ಗುಬ್ಬಿ | ೩೦೨೩.೨೩ | ೩೭೪ | ೩೦೨೩.೨೩ | ೩೭೪ | ೩೦೨೩.೨೩ | – | – | – | – |
| ೩ | ಕುಣಿಗಲ್ | ೩೦೩೬.೧೦ | ೧೮೬೬ | ೨೨೩೧.೦೩ | ೧೮೬೬ | ೨೨೫೮.೧೯ | – | ೨೭.೧೯* ೪೫.೦೫ | ೮೦೫.೦೭ | – |
| ೪ | ತಿಪಟೂರು | ೨೯೪೫.೧೭ಊ | ೮೪೦ | ೨೯೪೫.೧೭ಊ | ೮೪೦ | ೨೯೪೫.೧೭ಊ | – | – | – | – |
| ೫ | ತುರುವೇಕೆರೆ | ೮೦.೩೭ | ೧೨ | ೮೦.೩೭ | ೧೨ | ೮೦.೩೭ | – | – | – | – |
| ೬ | ಚಿ.ನಾ ಹಳ್ಳಿ | ೨೧೩೮.೩೮ | ೬೭೮ | ೨೧೩೮.೩೮ | ೬೭೮ | ೨೧೩೮.೩೮ | – | – | – | – |
| ೭ | ಮಧುಗಿರಿ | ೧೮೭.೩೯ | ೩೦ | ೧೮೭.೩೯ | ೩೦ | ೧೮೭.೩೯ | – | – | – | – |
| ೮ | ಶಿರಾ | ೧೯೯.೦೪ | ೫೭ | ೧೬೬.೧೨ | ೫೭ | ೧೬೬.೧೨ | – | – | ೩೨.೩೨ | – |
| ೯ | ಕೊರಟಗೆರೆ | ೪೦೧.೨೨ | ೧೦೫ | ೧೯೪.೦೭ | ೧೦೫ | ೧೯೪.೦೭ | – | – | ೨೦೭.೧೫ | – |
| ೧೦ | ಪಾವಗಡ | ೧೬೦೧.೨೧ | ೧೭೨ | ೧೨೧೫.೦೭ | ೧೭೨ | ೧೨೧೫.೦೭ | – | – | ೩೮೬.೧೪ | – |
| | ಒಟ್ಟು | ೧೩೮೪೪.೧೨ಊ | ೪೨೨೫ | ೧೨೪೧೨.೨೪ಊ | ೪೨೨೫ | ೧೨೩೪೦.೦೦ಊ | – | ೭೨.೨೪ | ೧೪೩೧.೨೮ | – |

## ಕೋಷ್ಟಕ ೯.೧೬ ಮಾರ್ಚ್ –೨೦೧೩ರ ಅಂತ್ಯಕ್ಕೆ

### ವಿವಿಧ ಇನಾಂ ರದ್ದಿಯಾತಿ ಕಾಯಿದೆಯಡಿ ಮರು ಮಂಜೂರು ಅರ್ಜಿಗಳ ವಿವರ (ಇನಾಂವಾರು ಘೋಷ್ವಾರೆ)
### ಕರ್ನಾಟಕ ಗ್ರಾಮ ಕಛೇರಿ ನೌಕರರ ರದ್ದತಿ ಕಾಯಿದೆ ೧೯೬೧.

| ಕ್ರ.ಸಂ | ತಾಲೂಕು | ಕಾಯಿದೆಯಡಿ ಸರ್ಕಾರಕ್ಕೆ ನಿಹಿತಗೊಂಡ ಜಮೀನಿನ ವಿವರ | ಒಟ್ಟು ಸ್ವೀಕೃತ ಅರ್ಜಿಗಳು | | ಒಟ್ಟು ವಿಲೇ ಅರ್ಜಿಗಳು | | ಬಾಕಿ ಇರುವ ಅರ್ಜಿಗಳು | | ಅರ್ಜಿ ಹಾಕದೆ ಸರ್ಕಾರಕ್ಕೆ ವಿಹಿತಗೊಂಡಿರುವ ಜಮೀನಿನ ವಿಸ್ತೀರ್ಣ | ಷರಾ |
|---|---|---|---|---|---|---|---|---|---|---|
| | | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | | |
| ೧ | **ತುಮಕೂರು** | ೩,೬೬೨.೦೪ | ೯೪೧ | ೩,೨೪೫.೩೩ | ೮೮೫ | ೩,೦೯೦.೭ | ೫೬ | ೧೫೫.೨೬ | ೪೧೬.೧೧ | – |
| ೨ | **ಗುಬ್ಬಿ** | ೨,೨೨೧.೨೫ | ೭೩೬ | ೧,೦೩೧.೨೯ | ೭೩೬ | ೧,೦೩೧.೨೯ | – | – | ೧೧೮೯.೩೬ | – |
| ೩ | **ಕುಣಿಗಲ್** | ೧,೭೭೪.೨೭ | ೧,೨೩೮ | ೧,೨೫೮.೦೭ | ೧,೨೩೮ | ೧,೨೫೮.೦೭ | – | – | ೫೧೬.೨೦ | – |
| ೪ | **ತಿಪಟೂರು** | ೪೯೯.೩೪ | ೬೫೦ | ೪೯೯.೩೪ | ೬೫೦ | ೪೯೯.೩೪ | – | – | – | – |
| ೫ | **ತುರುವೇಕೆರೆ** | ೪೫೪.೧೬ | ೬೩ | ೪೫೪.೧೬ | ೧೫ | ೨೪೩.೨೦ | ೪೮ | ೨೧೦.೩೬ | – | – |
| ೬ | **ಚಿ.ನಾ ಹಳ್ಳಿ** | ೨೪೨.೩೨ | ೨೮೧ | ೨೪೨.೩೨ | ೨೩೧ | ೨೦೩.೨೬ | ೫೦ | ೩೯.೦೬ | – | – |
| ೭ | **ಮಧುಗಿರಿ** | ೫೯೮.೧೫ | ೧೬೭ | ೫೭೪.೦೨ | ೧೬೭ | ೫೭೪.೦೨ | – | – | ೨೪.೧೩ | – |
| ೮ | **ಶಿರಾ** | ೪೬೬.೦೫ | ೧೨೭ | ೨೮೭.೦೫ | ೧೨೫ | ೨೬೭.೦೦ | ೨ | ೨೦.೦೫ | ೧೭೯.೦೦ | – |
| ೯ | **ಕೊರಟಗೆರೆ** | ೨,೧೧೭.೦೮ | ೮೪೨ | ೧,೮೧೫.೨೭ | ೮೪೨ | ೧,೮೧೫.೨೭ | – | – | ೩೦೧.೨೧ | – |
| ೧೦ | **ಪಾವಗಡ** | ೩೬,೩೭೬.೩೩ | ೧೯೩ | ೩,೩೫೩.೩೫ | ೧೯೩ | ೩,೩೫೩.೩೫ | – | – | ೨೨.೩೮ | – |
| | **ಒಟ್ಟು** | ೧೫,೪೧೩.೩೯ | ೫೨೩೮ | ೧೨,೭೬೩.೨೦ | ೫,೦೮೨ | ೧೨,೩೩೭.೨೭ | ೧೫೬ | ೪೨೫.೩೩ | ೨,೬೫೦.೧೯ | – |

**ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬಳಸುವುದು:** ವೈಯಕ್ತಿಕವಾಗಿ ಕೃಷಿ ಮಾಡುವವನನ್ನು ಹೊರತುಪಡಿಸಿ ಬೇರಾವುದೇ ವ್ಯಕ್ತಿ ಭೂ ಮಾಲೀಕ ಅಥವಾ ಗೇಣಿದಾರನಾಗಿರುವಂತಿಲ್ಲ. ಒಂದು ಕುಟುಂಬ ಹೊಂದಿರಬಹುದಾದ ಭೂಮಿಯ ಪರಿಮಿತಿ ಈಗ ೧೦ ಯೂನಿಟ್ (೫.೪ ಎಕರೆ "ಡಿ" ವರ್ಗದ ಜಮೀನು) ಗಳು ಮಾತ್ರ. ಶೈಕ್ಷಣಿಕ, ಧಾರ್ಮಿಕ ಅಥವಾ ಧಾರ್ಮಿಕ ದತ್ತಿ ಸಂಸ್ಥೆಗಳು ಅಥವಾ ಸೊಸೈಟಿ ಅಥವಾ ಭೂಮಿಯ ಆದಾಯವನ್ನು ಪೂರ್ಣವಾಗಿ ತನ್ನ ಸಂಸ್ಥೆಗೆ ಬಳಸಿಕೊಳ್ಳುವ ಟ್ರಸ್ಟ್, ಸೊಸೈಟಿ ಮುಂತಾದವು ೨೦ ಯೂನಿಟ್‌ಗಳಷ್ಟು ಭೂಮಿಯನ್ನು ಹೊಂದಬಹುದು. ಅದೇ ರೀತಿ ಭೂಮಿಯನ್ನು ಸಂಪೂರ್ಣವಾಗಿ ಸಂಶೋಧನೆ ಅಥವಾ ಬೀಜ ಕೇಂದ್ರ ಅಥವಾ ಎರಡೂ ಉದ್ದೇಶಕ್ಕೆ ಬಳಸಿಕೊಳ್ಳುವ ಸಕ್ಕರೆ ಕಾರ್ಖಾನೆ ೫೦ ಯೂನಿಟ್ಟು ಭೂಮಿಯನ್ನು ಹೊಂದಬಹುದು. ಈ ರೀತಿಯ ನಿರ್ಬಂಧಗಳು ಮತ್ತು ಪರಿಮಿತಿಗಳ ಹೊರತಾಗಿಯೂ, ಕೃಷಿಯೇತರ ಉದ್ದೇಶಗಳಾದ ಕೈಗಾರಿಕೆ, ಶಿಕ್ಷಣ, ವಸತಿ, ತೋಟಗಾರಿಕೆ, ಹೂಬನ, ಧಾರ್ಮಿಕ ಅವಶ್ಯಕತೆಗಳಿಗಾಗಿ ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಸೆಕ್ಷನ್ ೧೦೯ (೧) ರಡಿಯಲ್ಲಿ ಕ್ರಮವಾಗಿ ೨೦, ೪, ೧೦, ೨೦ ಮತ್ತು ೧ ಯೂನಿಟ್‌ಗಳಷ್ಟು ಕೃಷಿ ಭೂಮಿಯನ್ನು ಹೊಂದಬಹುದಾಗಿದೆ. ಒಂದು ವೇಳೆ ಉದ್ದೇಶ ಮತ್ತು ವಿಸ್ತೀರ್ಣ ಬದಲಾದರೆ ಅಥವಾ ಮೀರಿದರೆ ಸೆಕ್ಷನ್ ೧೦೯ (೧ಎ) ಅಡಿಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಉನ್ನತ ಅಧಿಕಾರಸ್ಥ ಸಮಿತಿಯ ಶಿಫಾರಸ್ಸಿನೊಂದಿಗೆ ಮತ್ತು ಸಚಿವ ಸಂಪುಟದ ಅನುಮೋದನೆಯೊಂದಿಗೆ ಸರ್ಕಾರವು ವಿನಾಯಿತಿ ಅಥವಾ ಅನುಮತಿ ನೀಡಬಹುದಾಗಿದೆ. ಈ ನಿಯಮಾವಳಿಗೆ ಅನುಸಾರವಾಗಿ ಜಿಲ್ಲಾಧಿಕಾರಿಗಳಿಂದ ಅಥವಾ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಂಡು ಯಾವುದೇ ನೊಂದಾಯಿತ ಸೊಸೈಟಿ ಅಥವಾ ಸಂಸ್ಥೆಯು ಕೃಷಿ ಭೂಮಿಯನ್ನು ಹೊಂದಬಹುದು.

ಕರ್ನಾಟಕ ಭೂ ಸುಧಾರಣಾ ಕಾಯಿದೆ ೧೯೬೧ರ ಸೆಕ್ಷನ್ ೧೦೯(೧) ರಲ್ಲಿ ಹೇಳಿರುವ ಉದ್ದೇಶಗಳಿಗಾಗಿ ಜಮೀನುಗಳನ್ನು ಸದರಿ ನಿಯಮದ ಸೆಕ್ಷನ್ ೬೩, ೭೯ಎ, ೭೯ಬಿ ಮತ್ತು ೮೦ರಲ್ಲಿನ ಕೆಲವು ಅಧಿಕಾರಗಳನ್ನು ಅಧಿಸೂಚನೆ ಸಂಖ್ಯೆ: ಸಂವ್ಯಶಾಇ ४೭ ಶಾಸನ ೨೦೦೧, ದಿನಾಂಕ ೨೪-೦೪-೨೦೦೩ರಲ್ಲಿ ತಿದ್ದುಪಡಿ ಮಾಡಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾ ಯೋಜನೆ ಮಾಡಲಾಗಿದೆ. ಇದರ ವಿವರಗಳು ಕೆಳಕಾಣಿಸಿರುವಂತಿವೆ.

| | |
|---|---|
| ೧) ಕೈಗಾರಿಕಾ ಉದ್ದೇಶಗಳಿಗಾಗಿ | ೧೦ ಯೂನಿಟ್‌ಗಳನ್ನು ಮೀರದಂತೆ |
| ೨) ಶೈಕ್ಷಣಿಕ ಸಂಸ್ಥೆಗಳಿಗೆ | ೨ ಯೂನಿಟ್‌ಗಳಿಗೆ ಮೀರದಂತೆ |
| ೩) ಧಾರ್ಮಿಕ ಸಂಸ್ಥೆಗಳಿಗೆ | ೧/೪ ಯೂನಿಟ್‌ಗಳನ್ನು ಮೀರದಂತೆ |
| ೪) ಗೃಹ ಯೋಜನೆ | ೧೦ ಯೂನಿಟ್‌ಗಳನ್ನು ಮೀರದಂತೆ |
| ೫) ತೋಟಗಾರಿಕೆ ಮತ್ತು ಪುಷ್ಪೋದ್ಯಮ | ೧೦ ಯೂನಿಟ್‌ಗಳನ್ನು ಮೀರದಂತೆ |

ಕರ್ನಾಟಕ ಭೂ ಸುಧಾರಣಾ ಕಾಯ್ದೆ, ೧೯೬೧ರ ಸೆಕ್ಷನ್ ೧೦೯ (೧ಎ) ಪ್ರಕಾರ ಯಾವುದೇ ಉದ್ದೇಶಕ್ಕಾದರೂ ೧/೨ ಹೆಕ್ಟೇರ್ ಮೀರದಂತೆ ಭೂಮಿ ಖರೀದಿಸಲು ಅಥವಾ ಹೊಂದಲು ಜಿಲ್ಲಾಧಿಕಾರಿಗಳಿಗೆ ಮಾರ್ಚ್ ೨೦೦೪ರಲ್ಲಿ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

**ಸರಕಾರಿ ಭೂಮಿಯ ವಿಲೇವಾರಿ (ಭೂಮಂಜೂರಾತಿ):** ಸರಕಾರಕ್ಕೆ ಸೇರಿದ ಜಮೀನುಗಳನ್ನು ೧೮೬೨-೬೩ಕ್ಕೆ ಪೂರ್ವದಲ್ಲಿ ಎರಡು ರೀತಿಯ ಗೇಣಿಗಳನ್ನಾಗಿ ವಿಂಗಡಿಸಲಾಗಿತ್ತು: ೧) ಒಂದು ಗೊತ್ತಾದ ಮೊತ್ತದ ಹಣದ ಆಕರಣೆಯುಳ್ಳ ಅಥವಾ ಕಂದಾಯದ ಜಮೀನು ಮತ್ತು (೨) ಬೆಳೆದ ಧಾನ್ಯ ಮುಂತಾದ್ದನ್ನು ಸರಕಾರದೊಡನೆ ಪಾಲು ಮಾಡಿಕೊಳ್ಳುವ ಬಟಾಯಿ ಜಮೀನು. ರೈತನು ಇಚ್ಛಿಸಿದರೆ ಬಟಾಯಿ ಜಮೀನನ್ನು ಕಂದಾಯದ ಜಮೀನಾಗಿ ಪರಿವರ್ತಿಸಲು ಸರಕಾರವು ಸದಾ ಸಿದ್ಧವಿರುತ್ತಿತ್ತು. ಕಂದಾಯದ ಜಮೀನನ್ನು ವಾರ್ಷಿಕ ಪಟ್ಟಾ ಅಥವಾ ಗೇಣಿ ಕರಾರು ಮೇಲೆ ನೀಡಲಾಗುತ್ತಿತ್ತು; ಆದರೆ, ಸಾಮಾನ್ಯವಾಗಿ ಅದರ ಮೇಲೆ ವಿಧಿಸುತ್ತಿದ್ದ ಕಂದಾಯದ ಮೊತ್ತವನ್ನು ಹೆಚ್ಚಿಸುತ್ತಿರಲಿಲ್ಲ. ಕಂದಾಯದ ಮೇಲೆ ತೆಗೆದುಕೊಂಡ ಜಮೀನನ್ನು ಅನುವಂಶಿಕವಾಗಿ ಅನುಭೋಗಿಸುವ ಹಕ್ಕನ್ನು ರೈತರು ಹೊಂದಿದ್ದರು. ವಾರ್ಷಿಕ ಕಂದಾಯವನ್ನು ಮಾತ್ರ ತಪ್ಪದೇ ನೀಡಬೇಕೆಂಬ ಷರತ್ತನ್ನು ಇದಕ್ಕಾಗಿ ಅವರು ಪಾಲಿಸಲೇಬೇಕಿತ್ತು. ಇಂತಹ ಜಮೀನನ್ನು ಮಾರಾಟ ಮಾಡುವ ಹಕ್ಕು ರೈತರಿಗೆ ಇರಲಿಲ್ಲವಾದರೂ ಆತನಿಗಿದ್ದ ಪರಿಪೂರ್ಣ ಗೇಣಿ ಹಕ್ಕಿನಿಂದಾಗಿ,

ಸರಕಾರವು ಪರಸ್ಪರ ಒಪ್ಪಿಗೆ ಅಥವಾ ಭೂ ಸ್ವಾಧೀನ ಕಾನೂನು ಪ್ರಕಾರ ಮಾತ್ರ ಪರಿಹಾರ ನೀಡಿಯೇ ಯಾವುದೇ ಕಂದಾಯ ಭೂಮಿಯನ್ನು ಪಡೆದುಕೊಳ್ಳಲು ಸಾಧ್ಯವಿತ್ತು.

ಮೂಲ ಸರ್ವೇಕ್ಷಣೆ ಮತ್ತು ಕಂದಾಯ ನಿಗದಿ ಕಾರ್ಯಗಳನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ತನ್ನ ಜಮೀನನ್ನು ಬೇರೊಬ್ಬನಿಗೆ ವರ್ಗಾವಣೆ ಮಾಡಲಿಚ್ಛಿಸುವ ರೈತನು ಅಮಲ್‌ದಾರನಿಗೆ ಒಂದು "ರಾಜೀನಾಮೆ" ಬರೆದು ಸಲ್ಲಿಸುತ್ತಿದ್ದನು; ಅದೇ ವೇಳೆ ಹಾಗೆ ಬಿಟ್ಟುಕೊಟ್ಟ ಜಮೀನನ್ನು ಇಂತಹ ನಿರ್ದಿಷ್ಟ ವ್ಯಕ್ತಿಗೆ ನೀಡಬಹುದೆಂದು ಕೋರಿಕೆಯನ್ನು ಸಹ ಸಲ್ಲಿಸುತ್ತಿದ್ದನು. ಆ ಎರಡನೇ ವ್ಯಕ್ತಿಯು ಮತ್ತೊಂದು ಅರ್ಜಿ ನೀಡಿ ಮೊದಲನೇ ವ್ಯಕ್ತಿಯು ರಾಜೀನಾಮೆ ನೀಡಿ ಹಿಂತಿರುಗಿಸಿರುವ ಭೂಮಿಯನ್ನು ಅದೇ ಮೊತ್ತದ ಕಂದಾಯಕ್ಕೆ ಅಥವಾ ಮಾಮೂಲು ಪ್ರಕಾರ ತನಗೆ ಮಂಜೂರು ಮಾಡಬೇಕೆಂದು ಕೋರಿಕೆ ಸಲ್ಲಿಸುತ್ತಿದ್ದನು. ಅದರ ಪ್ರಕಾರ ವರ್ಗಾವಣೆಯನ್ನು ಒಪ್ಪಿಕೊಂಡು ಹೊಸ "ಪಟ್ಟಾ" ನೀಡಲಾಗುತ್ತಿತ್ತು. ಇದರಿಂದ ತಿಳಿದುಬರುವುದೇನೆಂದರೆ, ವ್ಯವಸಾಯಕ್ಕಾಗಿ ಜಮೀನು ಪಡೆದುಕೊಳ್ಳುವುದು ಆ ಕಾಲದಲ್ಲಿ ಕಠಿಣ ಸಮಸ್ಯೆಯೇನೂ ಆಗಿರಲಿಲ್ಲ. ವ್ಯವಸಾಯ ಮಾಡಲು ಬೇಕಾದ ಸಂಪನ್ಮೂಲ ಅಥವಾ ಸಾಧನ ಸಲಕರಣೆಗಳ ಅನುಕೂಲವಿದ್ದವರಿಗೆ ಬಯಸಿದಾಗ ಭೂಮಿ ಸಿಗುತ್ತಿತ್ತು. ಜನಸಂಖ್ಯೆಯ ಒತ್ತಡ ಕಡಿಮೆ ಇದ್ದುದು ಇದಕ್ಕೊಂದು ಕಾರಣ ಎನ್ನಬಹುದು. ಆಗೆಲ್ಲಾ ಸಾಮಾನ್ಯವಾಗಿ ಖುದ್ದು ವ್ಯವಸಾಯ ಮಾಡುವವರೇ ಭೂಮಿಯನ್ನು ಹೊಂದಿರುತ್ತಿದ್ದರು. ಮಳೆ ಕಡಿಮೆಯಾಗಿ ಅಥವಾ ಬೇರಾವುದಾದರೂ ಕಾರಣದಿಂದ ಬೆಳೆ ಕಡಿಮೆಯಾಗುವ ಅಥವಾ ವಿಫಲವಾಗುವ ಸಾಧ್ಯತೆ ಇದ್ದಲ್ಲಿ ವಾರ್ಷಿಕ ಪಟ್ಟಾ ಪಡೆದುಕೊಳ್ಳುವ ಮುನ್ನ ಬಟಾಯಿ ಪದ್ಧತಿಯನ್ನು ಆಯ್ದುಕೊಳ್ಳುವ ಅಥವಾ ಆ ವರ್ಷದ ಮಟ್ಟಿಗೆ ಪಟ್ಟಾ ನಿರಾಕರಿಸುವ ಅವಕಾಶ ಜಮಾಬಂದಿ ಸಮಯದಲ್ಲಿ ರೈತನಿಗಿತ್ತು. ಕಂದಾಯ ಮಾಫಿ ಪ್ರಶ್ನೆಯನ್ನು ಸಹ ವೈಯಕ್ತಿಕ ಹಿಡುವಳಿದಾರರ ಮಟ್ಟದಲ್ಲಿ ಅದೇ ಸಮಯದಲ್ಲಿ ತೀರ್ಮಾನಿಸಿ ಬಿಡಲಾಗುತ್ತಿತ್ತು. ನೈಸರ್ಗಿಕ ಪ್ರಕೋಪವೇ ಮುಂತಾದ ಘಟನೆಗಳು ಕಂದಾಯ ಮಾಫಿಗೆ ಸರ್ವ ಸಮ್ಮತ ಕಾರಣಗಳಾಗಿದ್ದವು.

ಡಿಸೆಂಬರ್ ೧೯೦೫ರಲ್ಲಿ ಹೊರಡಿಸಿದ ಸರ್ಕಾರದ ಆದೇಶದಲ್ಲಿರುವಂತೆ ಭೂ ಕಂದಾಯ ಆಕರಣೆಯಾಗಿರದ ಸರ್ವೆ ನಂಬರಿನ ಒಂದು ಭಾಗಕ್ಕೆ, ಗೋಮಾಳ ಸರ್ವೆ ನಂಬರು ಸೇರಿದಂತೆ, ಪೂರ್ವ ಮಂಜೂರಾತಿ ಪಡೆದಿರುವ ಅರ್ಜಿಯ ಬಗ್ಗೆ ಜಿಲ್ಲಾಧಿಕಾರಿ ಒಪ್ಪಿಗೆ ನೀಡಿದರೆ, ಅದನ್ನು ಕಂದಾಯ ನಿರೀಕ್ಷಕ ಅಥವಾ ಬೇರೆ ತಾಲೂಕು ಅಧಿಕಾರಿಗಳು, ಅಗತ್ಯವೆನಿಸಿದಲ್ಲಿ ಜಿಲ್ಲಾ ಸರ್ವೇಯರನ ಸಾಮಾನ್ಯ ಮೇಲ್ವಿಚಾರಣೆಯಲ್ಲಿ, ಕೂಡಲೇ ಅಳತೆ ಮಾಡಿಸಿ ಗುರ್ತುಗಳನ್ನು ಹಾಕಿಸಬೇಕಾಗಿತ್ತು. ಸುತ್ತಮುತ್ತಲಿನ ಪ್ರದೇಶದಲ್ಲಿರುವ ಅಂಥದೇ ವರ್ಣನೆಯ ಜಮೀನುಗಳಿಗೆ ಗೊತ್ತುಪಡಿಸಲಾಗಿರುವ ಆಕರಣೆ ದರಗಳ ಆಧಾರದ ಮೇಲೆ ಇದಕ್ಕೂ ಜಿಲ್ಲಾಧಿಕಾರಿಯು ಆಕರಣೆಯನ್ನು ನಿಗದಿ ಮಾಡಬೇಕಾಗಿತ್ತು.

ಈ ಕೆಳಗೆ ಕಾಣಿಸಿರುವ ವಿಧದ ಜಮೀನುಗಳ ಪುಕ್ಕಟೆ ಮಂಜೂರಾತಿಯನ್ನು ೧೯೨೦ ರಿಂದ ನಿರ್ಬಂಧಿಸಲಾಯಿತು.

(೧) ಆಕರಣೆ ನಿಗದಿಯಾಗಿರದ ಜಮೀನುಗಳು ಮತ್ತು ಯಾವುದೇ ಸಾರ್ವಜನಿಕ, ಸಾಮುದಾಯಿಕ ಅಥವಾ ಸ್ಥಳೀಯ ಸಂಸ್ಥೆಯ ಉಪಯೋಗಕ್ಕಾಗಿ ಮೀಸಲಾಗಿರಿಸಿರುವ ಗೋಮಾಳ, ಗ್ರಾಮದ ಅರಣ್ಯ, ರಾಜ್ಯ ಅರಣ್ಯ, ಈಚಲು ವನ, ಮುಂತಾದವು.

(೨) ರೈಲ್ವೆ ನಿಲ್ದಾಣಕ್ಕೆ ಸಮೀಪದಲ್ಲಿರುವ ಜಮೀನುಗಳು.

(೩) ಭಾರಿ ಪ್ರಮಾಣದ ನೀರಾವರಿ ಯೋಜನೆಗಳಿಂದ ನೀರಾವರಿಯಾಗುತ್ತಿರುವ ಅಥವಾ ನೀರಾವರಿಯಾಗುವ ಸಾಧ್ಯತೆ ಇರುವ ಜಮೀನುಗಳು.

(೪) ಶ್ರೀಗಂಧದ ವೃಕ್ಷಗಳಿರುವ ಜಮೀನುಗಳು.

(೫) ಅಮೂಲ್ಯ ಫಲಗಳು ಅಥವಾ ಇತರೆ ವೃಕ್ಷಗಳು, ಬಾವಿಗಳು ಅಥವಾ ಕಟ್ಟಡಗಳಿರುವ ಜಮೀನುಗಳು.

ಕೆಲವು ವರ್ಗಗಳ ಜಮೀನುಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಅಥವಾ ನಿಗದಿತ ಬೆಲೆ ನೀಡಲು ಅವಕಾಶವಿತ್ತು. ಯಾವುದೇ ಒಂದು ದರಖಾಸ್ತನ್ನು ಸಾಮಾನ್ಯ ನಿಯಮವಾದ ಪುಕ್ಕಟೆ ಅನುದಾನದಡಿಯಲ್ಲಿ ವ್ಯವಹರಿಸಬೇಕೋ ಅಥವಾ ಬೇರೆ ರೀತಿಯಲ್ಲಿಯೋ ಎಂಬುದನ್ನು ನಿರ್ಧರಿಸುವ ಮುನ್ನ "ಖೇತವಾರು ಪತ್ರಿಕೆ"ಯನ್ನು

ಪರಾಮರ್ಶಿಸಬೇಕಿತ್ತು. ಅದರಲ್ಲಿ ಬೇಕಾದ ವಿವರಗಳು ಲಭ್ಯವಾಗದಿದ್ದಲ್ಲಿ, ದರಖಾಸ್ತನ್ನು ಗ್ರಾಮಾಧಿಕಾರಿಗಳಿಗೆ ಕಳುಹಿಸಿ ಒಂದು ಟಿಪ್ಪಣಿ ಸಿದ್ಧಪಡಿಸಿ ಕಳುಹಿಸಬೇಕೆಂದು ತಿಳಿಸಲಾಗುತ್ತಿತ್ತು. ಕಂದಾಯ ನಿರೀಕ್ಷಕನ ಮೂಲಕ ಅಮಲ್ದಾರನಿಗೆ ಟಿಪ್ಪಣಿ ತಲುಪಿದ ಮೇಲೆ ಕೆಳಗಿನ ಮೂರು ಪರ್ಯಾಯ ಕ್ರಮಗಳಲ್ಲಿ ಒಂದನ್ನು ಅವನು ನಿಶ್ಚಯಿಸಬೇಕಾಗಿತ್ತು: ೧) ಪುಕ್ಕಟೆಯಾಗಿ ಮಂಜೂರು ಮಾಡುವುದು; ೨) ಸಾರ್ವಜನಿಕವಾಗಿ ಹರಾಜು ಹಾಕುವುದು ಹಾಗೂ ೩) ನಿಗದಿತ ಬೆಲೆಗೆ ನೀಡುವುದು. ಈ ಮೂರರಲ್ಲಿ (೧)ನೇ ಅಥವಾ (೨)ನೇ ಕ್ರಮಗಳನ್ನು ತೆಗೆದುಕೊಂಡಾಗ, ಅಮಲ್ದಾರನು ತಾನೇ ಒಂದು ಸಾಗುವಳಿ ಚೀಟಿಯನ್ನು ನೀಡಬೇಕಿತ್ತು ಅಥವಾ ಮಾರಾಟ ಪ್ರಕಟಣೆಯನ್ನು ಹೊರಡಿಸಬೇಕಿತ್ತು. ಮೂರನೇ ಪರ್ಯಾಯದಂತೆ ನಡೆದುಕೊಳ್ಳುವ ನಿರ್ಧಾರ ಮಾಡಿದಲ್ಲಿ ಉಪವಿಭಾಗಾಧಿಕಾರಿಯ ಆದೇಶಕ್ಕಾಗಿ ದರಖಾಸ್ತು ದಾಖಲೆಗಳನ್ನು ತನ್ನ ಅಭಿಪ್ರಾಯದೊಡನೆ ಕಳುಹಿಸಬೇಕಿತ್ತು. ಕಂದಾಯ ನಿಗದಿಯಾಗಿರುವ ಜಮೀನುಗಳೇ ಮಂಜೂರಾತಿಗಾಗಿ ಲಭ್ಯ ಇವೆಯೆಂಬ ಕಾರಣ ನೀಡಿ ಕಂದಾಯ ನಿಗದಿಯಾಗಿಲ್ಲದ, ಆದರೆ ಹೆಚ್ಚಿನ ಬೇಡಿಕೆ ಇರುವ ಜಮೀನುಗಳನ್ನು ಕೋರಿ ಸಲ್ಲಿಸಲಾಗುವ ಅರ್ಜಿಗಳನ್ನು ತಿರಸ್ಕರಿಸಕೂಡದೆಂದು ಸರಕಾರವು ೧೯೨೫ನೇ ವರ್ಷದಲ್ಲಿ ಆದೇಶ ನೀಡಿತ್ತು.

ಇದೇ ರೀತಿ ೧೮೮೮ರ ಮೈಸೂರು ಭೂ ಕಂದಾಯ ಕಾಯ್ದೆ (೧೮೮೮ರ IV)ಯ ನಿಯಮ ೪೩(೫), (೬) ಮತ್ತು (೭) ದಲಿತ ವರ್ಗಗಳಿಗೆ ಭೂ ಮಂಜೂರಾತಿ ಮಾಡುವ ಬಗ್ಗೆ ಇವೆ. ಭೂ ರಹಿತರು ಮತ್ತು ದಲಿತ ವರ್ಗದವರಿಗೆ ಮೇಲೆ ಹೇಳಿರುವ ಪುಕ್ಕಟೆ ಜಮೀನು ಮಂಜೂರಾತಿ ಮಾತ್ರವೇ ಅಲ್ಲದೆ, ಲಭ್ಯವಿರುವ ಅಮೃತ ಮಹಲ್ ಕಾವಲುಗಳು, ಈಚಲು ವನಗಳು, ತೆರವಾಗಿರುವ ಕಾಫಿ ಮತ್ತು ಏಲಕ್ಕಿ ತೋಟ (ಫ್ಲಾಂಟೇಶನ್ನು)ಗಳ ಭಾಗಗಳನ್ನು ಮಂಜೂರು ಮಾಡಬಹುದೆಂದು ೧೯೨೫ ಮತ್ತು ೧೯೨೬ರಲ್ಲಿ ಸರಕಾರವು ಆದೇಶಿಸಿತು. ಈ ಎಲ್ಲಾ ರೀತಿಯ ಭೂ ವಿಲೇವಾರಿ ಕ್ರಮಗಳ ಮೂಲ ಉದ್ದೇಶ ಕೃಷಿಯ ವಿಸ್ತರಣೆಯೇ ಆಗಿತ್ತೆನ್ನಬಹುದು.

ಇಡೀ ಮೈಸೂರು ರಾಜ್ಯಕ್ಕೆ ಅನ್ವಯವಾಗುವ ಹೊಸ ಭೂ ಮಂಜೂರಾತಿ ನಿಯಮಗಳು ೧೯೫೮ ರಿಂದ ಜಾರಿಗೊಳಿಸಲ್ಪಟ್ಟವು. ಹೆಚ್ಚು ಸುಧಾರಿಸಿದ ಭೂ ಮಂಜೂರಾತಿ ನಿಯಮಗಳನ್ನು ೧೯೬೮ರಲ್ಲಿ ಏರ್ಪಡಿಸಲಾಯಿತು. ಇದಾದ ಮುಂದಿನ ವರ್ಷವೇ, ಅಂದರೆ, ೩ನೇ ಮೇ ೧೯೬೯ ರಿಂದ ೧೯೬೪ರ ಕಾಯ್ದೆಯ ೧೯೭ನೇ ಕಲಂನನ್ವಯ ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ನು ಜಾರಿಗೊಳಿಸಲಾಯಿತು. ಇದರಂತೆ, ಭೂಮಂಜೂರಾತಿಯಲ್ಲಿ ಈ ಕೆಳಗಿನ ವರ್ಗಗಳಿಗೆ ಆದ್ಯತೆ ನೀಡಲಾಗುತ್ತಿದೆ.

(೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು

(೨) ಅನುಭವದಾರರೆಂದು ನೋಂದಾವಣಿಯಾಗದೇ ಉಳಿದ, ಉಚ್ಚಾಟನೆಗೊಂಡ ಭೂಹೀನ ಮಾಜಿ ಗೇಣಿದಾರರು.

(೩) ಭೂಹೀನ ಕೃಷಿ ಕಾರ್ಮಿಕರು

(೪) ವಾರ್ಷಿಕ ಆದಾಯ ರೂ. ೪,೮೦೦/- (ಪ್ರಾರಂಭದಲ್ಲಿ ರೂ. ೨,೦೦೦/-) ಮೀರದಿರುವ ಮಾಜಿ ಸೈನಿಕರು ಮತ್ತು ಇತರೆ ಭೂ ಹೀನ ವ್ಯಕ್ತಿಗಳು.

(೫) ಜೀತ ವಿಮುಕ್ತ ಕಾರ್ಮಿಕರು

(೬) ವಾರ್ಷಿಕ ಆದಾಯ ರೂ. ೨,೦೦೦/- ರೂಪಾಯಿಗಳನ್ನು ಮೀರದಿರುವ ಇನ್ನಾವುದೇ ಭೂರಹಿತ ವ್ಯಕ್ತಿಗಳು, ಇಂಥವರು ಮಂಜೂರು ಮಾಡಬೇಕಾಗಿರುವ ಜಮೀನು ಇರುವ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿಯೇ ವಾಸಿಸುತ್ತಿರಬೇಕು.

ಸರ್ಕಾರದಿಂದ ಭೂ ಮಂಜೂರಾತಿ ಮಾಡಿಸಿಕೊಂಡವರು ಕನಿಷ್ಠ ೧೫ ವರ್ಷಗಳ ಪರ್ಯಂತ ಆ ಭೂಮಿಯನ್ನು ಪರಭಾರೆ ಮಾಡುವಂತಿಲ್ಲ ಮತ್ತು ಮಂಜೂರಾತಿಯಾದ ಮೂರು ವರ್ಷಗಳೊಳಗೆ ವ್ಯವಸಾಯಕ್ಕೆ ಒಳಪಡಿಸಬೇಕು. ಮರಗಳನ್ನು ಬೆಳೆಸಬೇಕು, ಭೂಮಿ ಪಡೆದುಕೊಂಡ ವ್ಯಕ್ತಿಯೇ ಅದನ್ನು ಸಾಗುವಳಿ ಮಾಡಬೇಕು ಎಂಬ ಷರತ್ತುಗಳನ್ನು ವಿಧಿಸಲಾಗುತ್ತಿತ್ತು. ಭೂ ಮಂಜೂರಾತಿಗೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಿಸಿದ ತಾಲೂಕಿನ ತಹಸೀಲ್ದಾರರೇ ಸ್ವೀಕರಿಸಬೇಕು. ಅಗತ್ಯ ವಿಚಾರಣೆ ನಡೆಸಿ ಅಂತಿಮವಾಗಿ ಮಂಜೂರಾತಿ ಆದೇಶವನ್ನು ಹೊರಡಿಸುವ ಅಧಿಕಾರವೂ ಅವರದೇ ಆಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಅರ್ಜಿಗಳನ್ನು ಪೂರ್ವಭಾವಿ ಕ್ರಮ ಜರುಗಿಸಿದ ನಂತರ ತಮ್ಮ ಅಭಿಪ್ರಾಯದೊಡನೆ ಸರಕಾರಕ್ಕೆ ಕಳುಹಿಸಿ ಮಂಜೂರಾತಿ ಪಡೆದುಕೊಳ್ಳಬೇಕಾಗಿರುತ್ತದೆ.

ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ರನ್ವಯ ಖಾಸಗಿ ಸಂಘ-ಸಂಸ್ಥೆಗಳಿಗೆ ಅಥವಾ ವಿವಿಧ ವೈಯಕ್ತಿಕ ಉದ್ದೇಶಗಳಿಗೆ ಸರ್ಕಾರಿ ಜಮೀನುಗಳ ಮಂಜೂರಾತಿಯನ್ನು ಮಾಡಲಾಗುತ್ತದೆ. ಅನೇಕ ಕಾರಣಗಳಿಂದಾಗಿ ಈ ನಿಯಮಾವಳಿಯಲ್ಲಿ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದ ನಂತರ ಸೂಕ್ತ ತಿದ್ದುಪಡಿಯನ್ನು ಮಾಡಲಾಗಿದ್ದು, ಈ ನಿಯಮಗಳು ದಿನಾಂಕ ೩೧-೦೮-೨೦೦೫ರಿಂದ ಜಾರಿಗೆ ಬಂದಿವೆ.

**ಅನಧಿಕೃತ ಸಾಗುವಳಿಯಲ್ಲಿನ ಜಮೀನುಗಳ ಸಕ್ರಮೀಕರಣ:** ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡ ಮುಂತಾದ ಕಾರಣಗಳಿಂದ ಸರ್ಕಾರಿ ಜಮೀನುಗಳ ಒತ್ತುವರಿ ನಿರಂತರವಾಗಿ ನಡೆಯುತ್ತಿದೆ. ಈ ಹಿಂದೆ ಎರಡು ಬಾರಿ ಇಂತಹ ಒತ್ತುವರಿಗಳನ್ನು ಸರ್ಕಾರವು ಸಕ್ರಮೀಕರಣಗೊಳಿಸಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ನ್ನು ಈ ಉದ್ದೇಶಕ್ಕಾಗಿಯೇ ಮೂರನೇ ಬಾರಿಗೆ ೧೯೯೧ರಲ್ಲಿ ತಿದ್ದುಪಡಿ ಮಾಡಲಾಗಿದೆ. ಇದರನ್ವಯ ಭೂರಹಿತರು, ಸಣ್ಣ ಮತ್ತು ಬಡ ರೈತರಿಗೆ ಪ್ರಸ್ತುತ ಹಿಡುವಳಿ ಜಮೀನನ್ನು ಒಳಗೊಂಡಂತೆ ಗರಿಷ್ಠ ಐದು ಎಕರೆಯಷ್ಟು ಜಮೀನನ್ನು ಸಕ್ರಮೀಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪(ಎ)ರ ತಿದ್ದುಪಡಿಯು ಅನುಕೂಲ ಮಾಡಿಕೊಟ್ಟಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೭೯(೨)ರಲ್ಲಿ ವಿಶೇಷ ಹಕ್ಕುಗಳಿಗೆ ಒಳಪಡುವ ಜಮೀನುಗಳನ್ನು ಸಕ್ರಮೀಕರಣಗೊಳಿಸಲು ಅವಕಾಶವಿದೆ. ಸಕ್ರಮೀಕರಣ ಕೋರಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ದಿನಾಂಕ ೩೦-೦೪-೧೯೯೯ರ ವರೆಗೆ ಒಟ್ಟು ೧೦.೯೪ ಲಕ್ಷ ಅರ್ಜಿಗಳು, ೨೬.೬೩ ಲಕ್ಷ ಎಕರೆ ವಿಸ್ತೀರ್ಣಕ್ಕೆ ಸಲ್ಲಿಸಲ್ಪಟ್ಟಿದ್ದವು.

**ಸರ್ಕಾರಿ ಜಮೀನುಗಳ ಅನಧಿಕೃತ ಒತ್ತುವರಿ:** ಇತ್ತೀಚಿನ ವರ್ಷಗಳಲ್ಲಿ ನಗರ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಬೆಲೆ ಬಾಳುವ ಸರ್ಕಾರಿ ಜಮೀನುಗಳ ಸಂಬಂಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಒತ್ತುವರಿ ಮಾಡಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿರುವುದು ಕಂಡು ಬರುತ್ತದೆ. ಅಲ್ಲದೇ, ಕರ್ನಾಟಕ ಭೂ ಕಂದಾಯ ನಿಯಮಗಳಲ್ಲಿನ ಉಪಬಂಧಗಳ ಉಲ್ಲಂಘನೆ ಮತ್ತು ಭೂ ಪರಿವರ್ತನೆ ಇಲ್ಲದೇ ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಗಳಿಗಾಗಿ ಬಳಸುತ್ತಿರುವ ಪ್ರಕರಣಗಳು ಏರುತ್ತಿವೆ. ಇಂತಹ ಸಮಸ್ಯೆಗಳೊಂದಿಗೆ ವ್ಯವಹರಿಸಲು ಹಿಂದೆ ರಚಿಸಲಾಗಿದ್ದ ಟಾಸ್ಕ್‌ಫೋರ್ಸ್ ತನಗೆ ವಹಿಸಲಾಗಿದ್ದ ಕಾರ್ಯ ನಿರ್ವಹಿಸುವಲ್ಲಿ ಅಷ್ಟಾಗಿ ಯಶಸ್ಸು ಕಂಡಿಲ್ಲ. ಭೂ ಕಬಳಿಕೆದಾರರು ಅಥವಾ ಒತ್ತುವರಿದಾರರನ್ನು ಬಲವಂತವಾಗಿ ಒತ್ತುವರಿಯಾಗಿರುವ ಜಮೀನುಗಳಿಂದ ಹೊರದೂಡಲು ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪ರ ಉಪಕಲಂ ೩ ಮತ್ತು ೪ರನ್ವಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುವ ಅವಕಾಶವನ್ನೂ ಸಹ ಸಮರ್ಥವಾಗಿ ಬಳಸಿಕೊಳ್ಳಲಾಗಿಲ್ಲ. ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ೯೪, ೯೬ ಮತ್ತು ೯೭ ರ ಕಲಂಗಳಿಗೆ ತಿದ್ದುಪಡಿ ಮಾಡಿ ಅಪರಾಧಗಳು ಮತ್ತು ಶಿಕ್ಷೆಗಳು ಎಂಬ ಹೊಸ ಅಧ್ಯಾಯವನ್ನು ಸೇರಿಸಿ ಅನಧಿಕೃತವಾಗಿ ಸರ್ಕಾರಿ ಜಮೀನಿನ ಸ್ವಾಧೀನವನ್ನು ಭಾರತೀಯ ದಂಡ ಸಂಹಿತೆಯಡಿ ಶಿಕ್ಷಾರ್ಹ ಮತ್ತು ಜಾಮೀನುರಹಿತ ಅಪರಾಧವೆಂದು ಪ್ರಸ್ತಾಪಿಸಲು ನಿರ್ಣಯಿಸಲಾಯಿತು. ಇಂತಹ ಒತ್ತುವರಿಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲು ದಿನಾಂಕ ೧೧-೧೨-೨೦೦೬ ರಿಂದ ಜಾರಿಗೆ ತಂದ ಈ ತಿದ್ದುಪಡಿ ಅವಕಾಶ ಮಾಡಿಕೊಟ್ಟಿದೆ. ಹೀಗೆ ಮರು ಸ್ವಾಧೀನ ಮಾಡಿಕೊಂಡ ಬೆಲೆ ಬಾಳುವ ಜಮೀನುಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಕಲಂ ೭೯ (ಎ) ನ್ನು ಹೊಸತಾಗಿ ಕಾಯ್ದೆ ೧೯೬೪ ರಲ್ಲಿ ಸೇರ್ಪಡೆ ಮಾಡಲಾಗಿದೆ.

ಸರ್ಕಾರಿ ಜಮೀನುಗಳನ್ನು ಕೃಷಿ ಮತ್ತು ಕೃಷಿಯೇತರ ಉದ್ದೇಶಗಳಿಗಾಗಿ ಮಂಜೂರು ಮಾಡುವ ಸಂಬಂಧ ಕರ್ನಾಟಕ ಭೂ ಕಂದಾಯ ನಿಯಮಾವಳಿ ೧೯೬೬ರ ನಿಯಮ ೧೦೮ (ಐ) ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ ೧೯೬೯ರ ಕೆಲವು ನಿಯಮಗಳಿಗೆ ತಿದ್ದುಪಡಿಗಳನ್ನು ತರಲಾಗಿದೆ. ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸುವ ಬಗ್ಗೆ ಅನುಮತಿ ನೀಡುವುದಕ್ಕಾಗಿ ಏಕಗವಾಕ್ಷಿ ಸಮಿತಿಯನ್ನು ರಚಿಸಿ ಸುತ್ತೋಲೆ ಸಂಖ್ಯೆ ಆರ್‌ಡಿ ೧೩ ಎಲ್‌ಜಿಪಿ ೨೦೦೫, ದಿನಾಂಕ ೦೨-೦೭-೨೦೦೫ ನ್ನು ಹೊರಡಿಸಲಾಗಿದೆ. ಈ ಸುತ್ತೋಲೆಗೆ ಕೆಲವು ತಿದ್ದುಪಡಿಗಳನ್ನು ಸಹಾ ೨೦೦೫ ಮತ್ತು ೨೦೦೮ರಲ್ಲಿ ತರಲಾಗಿದೆ.

**ಕೋಷ್ಟಕ ೯.೧೭ ಅನಧಿಕೃತ ಸಾಗುವಳಿ ಸಕ್ರಮೀಕರಣ (ನಿಯಮ ೯೪ ಎ) ಅಡಿ ಪ್ರಗತಿ (ನಮೂನೆ ೫೦) ಮಾರ್ಚ್ ೨೦೧೩**

| ಕ್ರ.ಸಂ | ಜಿಲ್ಲೆ | ಅನಧಿಕೃತ ಸಾಗುವಳಿ ಸಕ್ರಮ ಕೋರಿ ಬಂದಿರುವ ಅರ್ಜಿಗಳು | | ಸಕ್ರಮಗೊಳಿಸಲಾಗಿರುವ ಅರ್ಜಿಗಳ ಸಂಖ್ಯೆ ಪ.ಜಾ/ಪ.ಪಂ | | ಸಕ್ರಮಗೊಳಿಸಲಾಗಿರುವ ಪ್ರಕರಣಗಳಲ್ಲಿ | | | |
|---|---|---|---|---|---|---|---|---|---|
| | | | | | | ಇತರೆ | | | |
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
| ೧ | ತುಮಕೂರು | ೮೯೯೮೦ | ೨೧೦೪೮೬.೩೯ | ೪೪೭೦೨ | ೭೪೭೫೬.೩೪ | ೧೩೯೯೪ | ೨೪೧೪೪.೩೬ | ೩೦೭೦೮ | ೫೦೬೧೧.೩೮ |

| ತಿರಸ್ಕೃತ ಅರ್ಜಿಗಳು | | ಸಕ್ರಮಗೊಳಿಸಲು ಬಾಕಿಯಿರುವ ಅರ್ಜಿಗಳು | | ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳ ಸಂಖ್ಯೆ | ಸಾಗುವಳಿ ಚೀಟಿ ನೀಡದಿರುವ ಪ್ರಕರಣಗಳ ಸಂಖ್ಯೆ |
|---|---|---|---|---|---|
| ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | | |
| ೧೧ | ೧೨ | ೧೩ | ೧೪ | ೧೫ | ೧೬ |
| ೪೨೪೬೨ | ೧೧೭೪೩೧.೦೫ | ೨೮೧೬ | ೧೮೮೯೯ | ೪೦೦೦೯ | ೪೬೯೩ |

**ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆಯಡಿ ಹಕ್ಕು ಪುನರ್ ಸ್ಥಾಪನೆ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗಗಳಿಗೆ ಜಮೀನು ನೀಡುವ ವಿಷಯದಲ್ಲಿ ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. ಹಿಂದಿನ ಮೈಸೂರು ಸಂಸ್ಥಾನದ ಸರ್ಕಾರವು ೧೯೦೪ನೇ ಇಸವಿಯಲ್ಲಿಯೇ ಈ ವರ್ಗದ ಜನರಿಗೆ ಸರ್ಕಾರಿ ಜಮೀನುಗಳನ್ನು ನೀಡುವ ಸಂಬಂಧ ಡಿಪ್ರೆಸ್ಡ್ ಕ್ಲಾಸಸ್ ದರ್ಖಾಸ್ತ್ ರೂಲ್ಸ್ ಎಂಬ ಕಾನೂನನ್ನು ಜಾರಿಗೊಳಿಸಿದ್ದರು. ಅಂದಿನಿಂದ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸರ್ಕಾರಿ ಜಮೀನುಗಳನ್ನು ನೀಡುತ್ತಾ ಬರಲಾಗಿದೆ. ಹೀಗೆ ಭೂಮಿಗಳನ್ನು ಪಡೆದುಕೊಂಡಿದ್ದ ಅನೇಕರು ಭೂ ಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ತೀವ್ರ ಬಡತನ ಮತ್ತು ದುಶ್ಚಟಗಳ ಕಾರಣಗಳಿಂದ ತಮ್ಮ ಜಮೀನುಗಳನ್ನು ಇತರರ ವಶಕ್ಕೆ ನೀಡಿ ಸಂಕಷ್ಟಕ್ಕೆ ಸಿಕ್ಕಿದ್ದನ್ನು ಗಮನಿಸಿದ ರಾಜ್ಯ ಸರ್ಕಾರವು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ ೧೯೭೮ನ್ನು ಜಾರಿಗೊಳಿಸಿತು. ಇದರನ್ವಯ ನಿಯಮ ಉಲ್ಲಂಘಿಸಿ ಮಾರಾಟವಾದ ಜಮೀನುಗಳನ್ನು (ಹಿಂಪಡೆದು) ಮೂಲ ಮಂಜೂರಿದಾರರಿಗೆ ವಶಕ್ಕೆ ವಾಪಸ್ಸು ಕೊಡಿಸಲಾಗುವುದು. ಉಪವಿಭಾಗಾಧಿಕಾರಿಯು ಸಕ್ಷಮ ಪ್ರಾಧಿಕಾರಿಯಾಗಿದ್ದು, ಜಿಲ್ಲಾಧಿಕಾರಿ ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ. ನಂತರದ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರಲ್ಲಿ ವಿಹಿತವಾಗಿರುತ್ತದೆ. ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವಾಗಿ ಉಚ್ಚ ನ್ಯಾಯಾಲಯಕ್ಕೆ ಮಾತ್ರವೇ ಅಪೀಲು ಸಲ್ಲಿಸಬಹುದಾಗಿದೆ.

**ಕೋಷ್ಟಕ ೯.೧೮ ೧೯೭೮ರ ಪಿ.ಟಿ.ಸಿ.ಎಲ್ ಕಾಯಿದೆ ಅನ್ವಯ ಪರಭಾರೆ ಮತ್ತು ಪುನರ್ ಸ್ಥಾಪಿಸುವ ಬಗ್ಗೆ–ಪ್ರಗತಿ ವರದಿ (ಪ್ರಾರಂಭದಿಂದ ೨೦೧೨–೧೩ ಮಾರ್ಚ್ ಮಾಹೆಯ ಅಂತ್ಯಕ್ಕೆ)**

| ಕ್ರ.ಸಂ | ಉಪವಿಭಾಗಾಧಿ ಕಾರಿಗಳು | ಈವರೆವಿಗೆ ಪರಿಶಿಷ್ಟ ಜಾತಿ/ಪಂಗಡದವ–ರಿಗೆ ಜಮೀನು ಮಂಜೂರು ಮಾಡಿರುವುದು | | ಈವರೆಗೆ ಷರತ್ತು ನಿಯಮ ಉಲ್ಲಂಘನೆ ಮಾಡಿರುವ ಪತ್ತೆ ಹಚ್ಚಲಾದ ಒಟ್ಟು ಪ್ರಕರಣಗಳು | | ಈವರೆಗೆ ವಿಲೇವಾರಿಯಾದ ಪ್ರಕರಣಗಳು | |
|---|---|---|---|---|---|---|---|
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೧ | ೨ | ೩ | ೪ | ೫ | ೬ | ೭ | ೮ |
| ೧ | ತುಮಕೂರು | ೧೭೩೧ | ೪೩೩೦.೩೧ | ೧೦೧೮ | ೨೮೮೨.೯೯ | ೯೨೬ | ೨೬೪೯.೩೧ |
| ೨ | ತಿಪಟೂರು | ೧೨೬೨೩ | ೩೬೬೪೬.೧೧ | ೨೨೬೭ | ೭೬೬೪.೧೬ | ೨೨೪೧ | ೭೫೮೬.೦೮ |
| ೩ | ಮಧುಗಿರಿ | ೪೬೮೦ | ೧೨೭೫೪.೦೦ | ೧೪೮೪ | ೫೨೧೨.೩೭ | ೧೩೭೭ | ೪೫೯೯.೧೪ |
| ಒಟ್ಟು | | ೧೯೦೩೪ | ೫೩೭೩೧.೦೨ | ೪೭೬೯ | ೧೫೭೬೦.೦೨ | ೪೫೪೪ | ೧೪೮೦೫.೧೩ |

| ಕ್ರ.ಸಂ | ಮೂಲ ಮಂಜೂರಿದಾರರಿಗೆ ಭೌತಿಕವಾಗಿ ಸ್ವಾಧೀನ ನೀಡಿದ ಪ್ರಕರಣಗಳು | | ಮೂಲ ಮಂಜೂರಿದಾರರ ಹೆಸರಿಗೆ ಸ್ವಾಧೀನಕ್ಕೆ ನೀಡಲು ಬಾಕಿ ಇರುವ ಪ್ರಕರಣಗಳು | | ಸ್ವಾಧೀನಕ್ಕೆ ನೀಡಲು ಬಾಕಿಯಿರುವ ಪ್ರಕರಣಗಳಲ್ಲಿ ತಡೆಯಾಜ್ಞೆ ಇರುವ ಪ್ರಕರಣಗಳ ವಿವರ | |
|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೧ | ೯ | ೧೦ | ೧೧ | ೧೨ | ೧೩ | ೧೪ |
| ೧ | ೬೬೫ | ೧೯೦೧.೦೮ | ೯೬ | ೨೫೮.೩೨.೧ | – | – |
| ೨ | ೧೫೩೮ | ೫೧೫೪.೨೦ | ೭೫ | ೨೫೦ | ೭೫ | ೨೫೦ |
| ೩ | ೫೦೧ | ೧೭೭೭.೩೨ | ೧೦೭ | ೬೪೩.೨೩ | ೦೭ | ೨೪.೦೩ |
| ಒಟ್ಟು | ೨೭೦೪ | ೮೮೩೦.೨೦ | ೨೭೮ | ೧೧೫೨.೧೫ | ೮೨ | ೨೭೪.೦೩ |

| ಕ್ರ.ಸಂ | ಮಾಹೆಯ ಆರಂಭದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು | | ಪ್ರಸಕ್ತ ಮಾಹೆಯಲ್ಲಿ ಗುರುತಿಸಿದ ಒಟ್ಟು ಉಲ್ಲಂಘನೆ ಪ್ರಕರಣಗಳು | | ಒಟ್ಟು ಇತ್ಯರ್ಥಕ್ಕೆ ಬಾಕಿ | |
|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೧ | ೧ | ೨ | ೩ | ೪ | ೫ | ೬ |
| ೧ | ೯೫ | ೨೫೬.೩೨ | ೦೧ | ೨.೦೦ | ೯೬ | ೨೫೮.೩೨ |
| ೨ | ೨೬ | ೭೮.೦೭ | ೦ | ೦ | ೨೬ | ೭೮.೦೭ |
| ೩ | ೫೭ | ೩೩೬.೨೭ | ೫೦ | ೩೦೬.೩೬ | ೧೦೭ | ೬೪೩.೨೩ |
| ಒಟ್ಟು | ೧೭೮ | ೬೭೧.೨೬ | ೫೧ | ೩೦೮.೩೬ | ೨೨೯ | ೯೮೦.೨೨ |

| ಕ್ರ.ಸಂ | ವಿಲೇ ಮಾಡಿದ ಪ್ರಕರಣಗಳು | | ಮಾಸಾಂತ್ಯಕ್ಕೆ ಬಾಕಿ ಇರುವ ಪ್ರಕರಣಗಳು | | ಉಲ್ಲಂಘನೆಗೆ ಗುರುತಿಸಿರುವ ಪ್ರಕರಣಗಳಲ್ಲಿ ಪಿಟಿಸಿಎಲ್ ಕಾಯಿದೆ ೬ ರಡಿ ಜರುಗಿಸಿದ ಪ್ರಕರಣಗಳು | |
|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೧ | ೭ | ೮ | ೯ | ೧೦ | ೧೧ | ೧೨ |
| ೧ | – | – | ೯೬ | ೨೫೮.೩೨ | – | – |
| ೨ | – | – | ೨೬ | ೭೮.೦೭ | – | – |
| ೩ | – | – | ೧೦೭ | ೬೪೩.೨೩ | – | – |
| ಒಟ್ಟು | – | – | ೨೨೯ | ೯೮೦.೨೨ | – | – |

**ಭೂ ಸ್ವಾಧೀನ:** ಮೈಸೂರು ಭೂ ಸ್ವಾಧೀನ ಅಧಿನಿಯಮ, ೧೮೯೪ (೧೮೯೪ರ VII) ಖಾಸಗಿ ಹಿಡುವಳಿಗಳನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲು ಮತ್ತು ಅಂತಹ ಆದೇಶಗಳಿಂದ ತೊಂದರೆಗೊಳಗಾದವರಿಗೆ ಪರಿಹಾರಗಳನ್ನು ನೀಡುವುದಕ್ಕಾಗಿ ಮಾಡಲಾದ ಕಾಯಿದೆ. ೧೯೨೭ರ ಅಧಿನಿಯಮ ೫ ರಲ್ಲಿ ತಿದ್ದುಪಡಿ ಮಾಡುವ ಮೂಲಕ ಯಾವುದೇ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಆ ಬಗ್ಗೆ ಘೋಷಣೆ ಹೊರಡಿಸುವ ಮುನ್ನ ಆ ಕ್ರಮದಿಂದ ಬಾಧೆಗೊಳಗಾದವರ ಆಕ್ಷೇಪಣೆಗಳನ್ನು ಆಲಿಸಿ ತೀರ್ಮಾನ ತೆಗೆದುಕೊಳ್ಳಬೇಕೆಂದು ನಿರ್ಬಂಧಿಸಲಾಯಿತು. ತಿದ್ದುಪಡಿಯಾದ ಮೈಸೂರು ಭೂ ಸ್ವಾಧೀನ ಅಧಿನಿಯಮದ ಪ್ರಕಾರ ಸರಕಾರಿ ಇಲಾಖೆಗಳ ಪರವಾಗಿ ಹಾಗೂ ಖಾಸಗಿ ಕಂಪನಿ ಮುಂತಾದವುಗಳಿಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ನಡೆಸುವ ಅಧಿಕಾರ ಜಿಲ್ಲಾಧಿಕಾರಿಗಳಿಗಿತ್ತು. ಸಾಮಾನ್ಯವಾಗಿ ಹಳ್ಳಿಗಳ ವಿಸ್ತರಣೆ ಮತ್ತು ಸುಧಾರಣೆ, ರೈಲ್ವೆ ಮಾರ್ಗಗಳ ನಿರ್ಮಾಣ, ರಸ್ತೆ ನಿರ್ಮಾಣ, ಸರ್ಕಾರಿ ಇಲಾಖೆಗಳಿಗೆ ಕಟ್ಟಡಗಳ ನಿರ್ಮಾಣ, ನೀರಾವರಿ ಯೋಜನೆಗಳು ಮುಂತಾದವುಗಳಿಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿತ್ತು. ಆಗ

ಪೂರ್ವಭಾವಿ ಅಧಿಸೂಚನೆ ಹೊರಡಿಸಿ, ಆಕ್ಷೇಪಣೆಗಳೇನಾದರೂ ಸಲ್ಲಿಸಲ್ಪಟ್ಟರೆ ಅವುಗಳನ್ನು ಪರಿಶೀಲಿಸಿ ಕೆಲವು ಬಾರಿ ಕರಾರಿನ ಮಾತುಕತೆ ನಡೆಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಿ, ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ ಮಾಡಿಕೊಳ್ಳುತ್ತಿರುವುದಾಗಿ ಘೋಷಣೆ ಹೊರಡಿಸಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಸಕಲ ಜವಾಬ್ದಾರಿ ಜಿಲ್ಲಾಧಿಕಾರಿಯದಾಗಿತ್ತು. ಹೀಗೆ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಅಧಿನಿಯಮದಲ್ಲಿ ಹೇಳಿರುವ ಪ್ರಕಾರ ಪರಿಹಾರ ಧನವನ್ನು ನಿಗದಿಪಡಿಸಿ ಪಾವತಿ ಮಾಡಬೇಕಾಗುತ್ತಿತ್ತು. ಪರಿಹಾರ ನೀಡಿಕೆಯಲ್ಲಿ ವಿಳಂಬ ಸಂಭವಿಸಿದ ಪ್ರಕರಣಗಳಲ್ಲಿ ನಿರ್ದಿಷ್ಟ ದರದಲ್ಲಿ ಬಡ್ಡಿಯನ್ನು ಕೂಡ ಭೂ ಮಾಲೀಕನಿಗೆ ನೀಡಲು ಕಾನೂನಿನಲ್ಲಿ ಅವಕಾಶವಿತ್ತು. ಹೀಗೆ ಸ್ವಾಧೀನ ಪಡಿಸಿಕೊಂಡ ಜಮೀನನ್ನು ಭೂ ಸ್ವಾಧೀನಾಧಿಕಾರಿಗಳು ಜಿಲ್ಲಾ ಸರ್ವೇಕ್ಷಣೆ ಸಿಬ್ಬಂದಿಯಿಂದ ಅಳತೆ ಮಾಡಿಸಿ ಗಡಿಗಳನ್ನು ಗುರುತಿಸಿದ ನಂತರ ವಶಕ್ಕೆ ತೆಗೆದುಕೊಳ್ಳಬೇಕಾಗಿತ್ತು.

ಭೂ ಸ್ವಾಧೀನ ಅಧಿನಿಯಮ (೧೮೯೪ರ ಕೇಂದ್ರ ಅಧಿನಿಯಮ I) ವನ್ನು ಭೂ ಸ್ವಾಧೀನ (ಕರ್ನಾಟಕ ವಿಸ್ತರಣೆ ಮತ್ತು ತಿದ್ದುಪಡಿ) ಅಧಿನಿಯಮ ೧೯೬೧, ನ್ನು ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾದ ಸಮಯದಿಂದ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಅದರಂತೆಯೇ ನಡೆಸಲಾಗುತ್ತಿದೆ. ಈ ಸಂಬಂಧ ಇರುವ ಇನ್ನಿತರ ಅಧಿನಿಯಮಗಳೆಂದರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ ೧೯೬೬ ಕರ್ನಾಟಕ ಮನೆ ನಿವೇಶನಗಳ ಮಂಜೂರಾತಿಗಾಗಿ ಭೂ ಸ್ವಾಧೀನ ಅಧಿನಿಯಮ ೧೯೭೨ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ. ಈ ಕಾಯ್ದೆಗಳಡಿಯಲ್ಲಿನ ಭೂ ಸ್ವಾಧೀನವನ್ನು ಹೊರತುಪಡಿಸಿ ಉಳಿದೆಲ್ಲಾ ಸಾರ್ವಜನಿಕ ಉದ್ದೇಶಗಳಿಗಾಗಿ ಭೂಸ್ವಾಧೀನವನ್ನು ಕಂದಾಯ ಇಲಾಖೆ ಕೈಗೊಳ್ಳುತ್ತದೆ. ಅತಿ ಹೆಚ್ಚು ಭೂ ಸ್ವಾಧೀನವನ್ನು ನೀರಾವರಿ ಯೋಜನೆಗಳಿಗಾಗಿ ಮಾಡಲಾಗುತ್ತಿದೆ. ಇದರ ನಂತರ ರಾಜ್ಯ ಹೆದ್ದಾರಿಗಳು, ವಿದ್ಯುತ್ ಯೋಜನೆಗಳು ಮುಂತಾದ ಯೋಜನೆಗಳಿಗಾಗಿ ಹೆಚ್ಚೆಚ್ಚು ವಿಸ್ತೀರ್ಣದ ಭೂಸ್ವಾಧೀನ ಮಾಡಲಾಗುತ್ತಿದೆ. ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯ, ರೈಲ್ವೆ ಇಲಾಖೆ ಮುಂತಾದವುಗಳಿಗಾಗಿ ಸಹ ಭೂ ಸ್ವಾಧೀನ ಕಾರ್ಯ ನಡೆಯುವುದು. ಸ್ಮಶಾನಗಳಿಲ್ಲದ ಗ್ರಾಮಗಳಲ್ಲಿ ಸ್ಮಶಾನದ ಉದ್ದೇಶಕ್ಕಾಗಿ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ ಹಾಗೂ ಅವಶ್ಯಬಿದ್ದರೆ ಖರೀದಿಸಲೂ ಅವಕಾಶವಿದೆ. ಕೇಂದ್ರ ಸರಕಾರವು ದಿನಾಂಕ ೨೪-೦೯-೧೯೮೪ ರಿಂದ ಜಾರಿಗೆ ಬರುವಂತೆ ಭೂ ಸ್ವಾಧೀನ ಅಧಿನಿಯಮದ ಉಪಬಂಧಗಳು ಈ ಕೆಳಕಾಣಿಸಿರುವ ವಿಷಯಗಳನ್ನು ಕುರಿತಂತೆ ಇವೆ:

(೧) ನಿರ್ದಿಷ್ಟ ಉದ್ದೇಶಕ್ಕಾಗಿ ನಿರ್ದಿಷ್ಟ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅಧಿಸೂಚನೆ ಹೊರಡಿಸುವುದು ಮತ್ತು ಇದರಿಂದ ಬಾಧೆಗೊಳಗಾದ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅವುಗಳನ್ನು ವಿಚಾರಿಸುವುದು (ಕಲಂ ೪ ಮತ್ತು ೫ಎ)

(೨) ಸರ್ಕಾರದಿಂದ ಅಂತಿಮ ಅಧಿಸೂಚನೆಯನ್ನು ಹೊರಡಿಸುವುದು (ಕಲಂ ೬)

ಅ) ೧೮೯೪ರ ಕೇಂದ್ರ ಅಧಿನಿಯಮ ೫ ನ್ನು ಅಂಗೀಕರಿಸುವ ಸಮಯದಲ್ಲಿ ಕರ್ನಾಟಕ ಶಾಸಕಾಂಗವು ಕಲಂ ೫'ಎ' ಅನ್ನು ಸೇರಿಸಿದೆ. ಇದರಂತೆ, ಜಿಲ್ಲಾಧಿಕಾರಿಯು ನಿಗದಿತ ಅವಧಿಯೊಳಗಾಗಿ ಸರಕಾರಕ್ಕೆ ವರದಿ ಸಲ್ಲಿಸಬೇಕಲ್ಲದೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವ ವ್ಯಕ್ತಿಗಳಿಗೆ ಆ ವಿಷಯವನ್ನು ತಿಳಿಸಬೇಕು.

ಆ) ನಾಲ್ಕನೇ ಕಲಂನಡಿ ಅಧಿಸೂಚನೆಯನ್ನು ಹೊರಡಿಸಿದ ಮೂರು ವರ್ಷಗಳ ತರುವಾಯ ಯಾವುದೇ ಘೋಷಣೆಯನ್ನು ೬ನೇ ಕಲಂನಡಿ ಮಾಡುವಂತಿಲ್ಲವೆಂದು ಸಹ ಅಧಿನಿಯಮವು ಉಪಬಂಧಿಸಿದೆ.

(೩) ಜಿಲ್ಲಾಧಿಕಾರಿಯಿಂದ ವಿಚಾರಣೆ ಮತ್ತು ತೀರ್ಪು (೯, ೧೦ ಮತ್ತು ೧೧ನೇ ಕಲಂಗಳಡಿಯಲ್ಲಿ)

(೧) ಕರ್ನಾಟಕ ಭೂ ಸ್ವಾಧೀನ ಅಧಿನಿಯಮವು ೧೧ನೇ ಕಲಂಗೆ ಈ ಕೆಳಗೆ ನೀಡಿರುವ ಒಂದು ಷರತ್ತು ಸಹ ಸೇರಿಸಲಾಗಿದೆ.

ಅಂತಹ ಯಾವುದೇ ತೀರ್ಪನ್ನು ರಾಜ್ಯ ಸರ್ಕಾರದ ಅಥವಾ ರಾಜ್ಯ ಸರಕಾರವು ಇದಕ್ಕಾಗಿ ನೇಮಕ ಮಾಡುವಂತಹ ಅಧಿಕಾರಿಯ ಪೂರ್ವ ಸಮ್ಮತಿ ಪಡೆದುಕೊಳ್ಳದೆ ಮಾಡುವಂತಿಲ್ಲ. ಜಿಲ್ಲಾಧಿಕಾರಿಯ ದರ್ಜೆಗಿಂತ ಕೆಳಗಿನ ಅಧಿಕಾರಿಯು ತೀರ್ಪು ನೀಡಿರುವಂತಹವನಾಗಿದ್ದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಯನ್ನೇ ರಾಜ್ಯ ಸರಕಾರವು ಇದಕ್ಕಾಗಿ ನೇಮಕ ಮಾಡಬೇಕು.

ತೀರ್ಪನ್ನು ಕೊಡುವುದರಲ್ಲಿ ಜಿಲ್ಲಾಧಿಕಾರಿಯು (ಭೂ ಸ್ವಾಧೀನ ಅಧಿನಿಯಮದಡಿ) ಸರಕಾರದ ಕಾರ್ಯಭಾರಿಯಾಗಿ ಸೂಚನೆಯೊಂದನ್ನು ಮಾಡುತ್ತಿರುವನೆಂಬುದನ್ನು ಈ ಷರತ್ತು ಮಾನ್ಯ ಮಾಡುತ್ತದೆ. ಹೀಗಾಗಿ, ಜಿಲ್ಲಾಧಿಕಾರಿಯು ಮಾಡುವ ಸೂಚನೆಯು ರಾಜ್ಯ ಸರಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ. ಹನ್ನೊಂದನೇ ಕಲಂನಡಿ ಮಾಡಿದ ತೀರ್ಪನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ರಾಜ್ಯ ಸರಕಾರದ ವಿವೇಚನೆಗೆ ಸೇರಿದ ವಿಚಾರವಾಗಿದೆ. ಸುತ್ತೋಲೆ ಸಂಖ್ಯೆ: ಆರ್‌ಡಿ: ೧೭೦ ಎಕ್ಯೂಡಬ್ಲ್ಯೂ ೮೫, ದಿನಾಂಕ ೧೨/೧೧/೧೯೮೫, ರ ಪ್ರಕಾರ ಭೂ ಸ್ವಾಧೀನ ಪ್ರಕರಣಗಳಲ್ಲಿ ಅಧಿಕಾರಿಗಳು ಅನುಮೋದಿಸಬಹುದಾದ ತೀರ್ಪಿನ ಆರ್ಥಿಕ ಮಿತಿ ಈ ಕೆಳಗೆ ನಿರ್ದಿಷ್ಟಪಡಿಸಿದಂತಿವೆ. ೧) ಜಿಲ್ಲಾಧಿಕಾರಿ – ರೂ. ೧೦ ಲಕ್ಷ ಗಳು, ೨) ಪ್ರಾದೇಶಿಕ ಆಯುಕ್ತರು – ರೂ. ೨೦ ಲಕ್ಷಗಳು ಮತ್ತು ೩) ರಾಜ್ಯ ಸರಕಾರ – ರೂ ೨೦ ಲಕ್ಷಗಳಿಗಿಂತ ಹೆಚ್ಚು

ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೆಚ್ಚು ಸಮರ್ಪಕವಾಗಿ ಕೈಗೊಳ್ಳುವ ಸಲುವಾಗಿ ಪ್ರಾದೇಶಿಕ ಆಯುಕ್ತರುಗಳಿಗೆ ಐದು ಕೋಟಿ ರೂಗಳವರೆಗೆ ಸಾಮಾನ್ಯ ಐತೀರ್ಪು ಅನುಮೋದಿಸುವ ಅಧಿಕಾರ ನೀಡಲಾಗಿದೆ. ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಪ್ರಾರಂಭಿಕ ಅಧಿಸೂಚನೆ ಹೊರಡಿಸುವುದು ಮತ್ತು ಒಂದು ಕೋಟಿ ರೂ.ಗಳವರೆಗೆ ಸಾಮಾನ್ಯ ಐತೀರ್ಪನ್ನು ಅನುಮೋದಿಸುವ ಅಧಿಕಾರವನ್ನು ನೀಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಜಮೀನು ಕಳೆದುಕೊಂಡವರ ಅತೃಪ್ತಿ ಮತ್ತು ನ್ಯಾಯಾಲಯಗಳಲ್ಲಿ ಏರುತ್ತಿರುವ ವ್ಯಾಜ್ಯಗಳ ಸಂಖ್ಯೆಯನ್ನು ಪರಿಗಣಿಸಿರುವ ರಾಜ್ಯ ಸರ್ಕಾರ ಭೂ ಸ್ವಾಧೀನ ಕಾಯ್ದೆಯ ಸೆಕ್ಷನ್ ೧೧(೨) ರನ್ವಯ ಒಪ್ಪಂದದ ಐತೀರ್ಪುಗಳನ್ನು ಅನುಸರಿಸಲು ಪ್ರೋತ್ಸಾಹ ನೀಡುತ್ತಿದೆ. ಹೆಚ್ಚುವರಿ ಪರಿಹಾರ ಬಯಸಿ ಸಿವಿಲ್ ನ್ಯಾಯಾಲಯಗಳಲ್ಲಿ ಹೂಡಲಾಗಿರುವ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಸರ್ಕಾರವು ರಾಜ್ಯ ಕಾನೂನು ನೆರವು ಮಂಡಳಿಯ ಸಹಕಾರದೊಂದಿಗೆ ಲೋಕ್ ಅದಾಲತ್ ಮೂಲಕ ಪ್ರಯತ್ನಿಸುತ್ತಿದೆ.

**ಭೂ ಸ್ವಾಧೀನ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಇನ್ನಿತರ ಅಧಿನಿಯಮಗಳು:** ೧) ಕರ್ನಾಟಕ ಹೆದ್ದಾರಿಗಳ ಅಧಿನಿಯಮ, ೧೯೬೪; ೨) ಕರ್ನಾಟಕ ನೀರಾವರಿ ಅಧಿನಿಯಮ ೧೯೬೫; ೩) ಸ್ಥಿರಾಸ್ತಿ ಅಧಿಸೂಚನೆ ಮತ್ತು ಸ್ವಾಧೀನ ಅಧಿನಿಯಮ, ೧೯೫೨ (ಕೇಂದ್ರ ಅಧಿನಿಯಮ); ಮತ್ತು ೪) ಭೂ ಸ್ವಾಧೀನ ಗಣಿಗಳ ಅಧಿನಿಯಮ, ೧೮೮೫ (ಕೇಂದ್ರ ಅಧಿನಿಯಮ)

**ಸ್ಥಳಾಂತರ ಮತ್ತು ಪುನರ್ವಸತಿ ಏರ್ಪಾಟು:** ಜಮೀನು ಹಾಗೂ ಕಟ್ಟಡಗಳ ಸ್ವಾಧೀನ ಕಾರ್ಯದಿಂದಾಗಿ ಲೆಕ್ಕವಿಲ್ಲದಷ್ಟು ಕುಟುಂಬಗಳು ಮತ್ತು ವ್ಯಕ್ತಿಗಳು ಬಾಧೆಗೆ ಸಿಲುಕುವುದು ಸಾಮಾನ್ಯ ಸಂಗತಿಯಾಗಿದೆ. ಇಂತಹವರಿಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತದಾದರೂ, ಬೇರೆ ಸ್ಥಳದಲ್ಲಿ ವಸತಿ ಮತ್ತು ಇತರೆ ಸೌಕರ್ಯಗಳನ್ನು ಒದಗಿಸಿದರೂ, ಅವರಿಗಾಗಿರುವ ಕಷ್ಟನಷ್ಟಗಳಿಗೆ ಸರಿಸಾಟಿಯಾಗುವುದಿಲ್ಲ. ರಾಜ್ಯದ ಬೃಹತ್ ಯೋಜನೆಗಳ ಸಂಬಂಧ ಭೂಸ್ವಾಧೀನ ಪ್ರಕ್ರಿಯೆಯಿಂದ ಬಾಧಿತರಾಗುವ ಕುಟುಂಬಗಳಿಗೆ ಒಂದು ವಿಶೇಷ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾರ್ಯ ರೀತಿಯೊಂದಿದೆ. ತುಮಕೂರು ಜಿಲ್ಲೆಯಲ್ಲಿ ಅಂತಹ ವಿಶೇಷ ಯೋಜನೆಗಳು ಇಲ್ಲ. ಪುನರ್ವಸತಿ ಮತ್ತು ಪುನರ್ನಿರ್ಮಾಣ ಪ್ಯಾಕೇಜ್ ಅಡಿಯಲ್ಲಿ ಕೆಳಕಂಡ ಸೌಕರ್ಯಗಳನ್ನು ಒದಗಿಸಲು ಅವಕಾಶವಿದೆ. ೧)ಉಚಿತ ಮನೆ ನಿವೇಶನಗಳು, ೨) ಮನೆ ನಿರ್ಮಾಣ ಅನುದಾನ, ೩) ಸಾಗಾಣಿಕೆ ಅನುದಾನ, ೪) ಪುನರ್ವಸತಿ ಕೇಂದ್ರಗಳಲ್ಲಿ ನೀರು ಸರಬರಾಜು, ರಸ್ತೆ ನಿರ್ಮಾಣ, ವಿದ್ಯುತ್ ಶಕ್ತಿ, ಶಾಲೆ ಮತ್ತು ಇತರೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ೫) ಉತ್ಪನ್ನದಾಯಕ ಚಟುವಟಿಕೆಗಳಿಗೆ ಅನುದಾನ, ೬) ಸಂಕಷ್ಟ ನಿವಾರಣಾ ಅನುದಾನ, ೭) ಸರ್ಕಾರಿ ಇಲಾಖೆಗಳಲ್ಲಿ ಶೇಕಡ ಐದರಷ್ಟು "ಸಿ" ಮತ್ತು "ಡಿ" ಗುಂಪಿನ ಹುದ್ದೆಗಳಲ್ಲಿ ಮೀಸಲಾತಿ, ೮) ಸ್ವಾಧೀನಪಡಿಸಿಕೊಂಡ ಕಟ್ಟಡಗಳಲ್ಲಿನ ಸಾಮಗ್ರಿಗಳನ್ನು ಕೊಂಡೊಯ್ಯುವ ಅವಕಾಶ, ಹಾಗೂ ೯) ಸ್ವಯಂ ಉದ್ಯೋಗ ತರಬೇತಿ ಯೋಜನೆಗಳ ಅನುಷ್ಠಾನ.

ಕರ್ನಾಟಕ ಪುನರ್ ವಸತಿ ವ್ಯವಸ್ಥೆ (ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ) ಅಧಿನಿಯಮ ೧೯೮೭ರಲ್ಲಿ ಅನುಮೋದನೆಯಾಗಿದ್ದು, ಅದನ್ನು ಇದುವರೆಗೂ ಜಾರಿಗೆ ತಂದಿಲ್ಲ. ಇದರಲ್ಲಿ ಹಲವಾರು ದೋಷಗಳಿರುವುದೇ ಇದಕ್ಕೆ ಕಾರಣವೆನ್ನಲಾಗಿದೆ. ಭಾರತ ಸರ್ಕಾರದ ಆರ್ ಅಂಡ್ ಆರ್ ನೀತಿಯನ್ನು ೨೦೦೩ ರಿಂದ ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಪ್ರಸ್ತುತ ರಾಜ್ಯ ಸರ್ಕಾರದ ಆರ್ ಅಂಡ್ ಆರ್ ನೀತಿಯಂತೆ ಒದಗಿಸುತ್ತಿರುವ ಸೌಲಭ್ಯಗಳು ರಾಷ್ಟ್ರೀಯ ನೀತಿಯ ಗುಣಮಟ್ಟಕ್ಕಿಂತ ಉತ್ತಮವಾಗಿವೆ ಎನ್ನಲಾಗಿದೆ. ದಿನಾಂಕ ೩೧-೧೦-೨೦೦೭ರಲ್ಲಿ ಭಾರತ ಸರ್ಕಾರವು

ಜಾರಿಗೊಳಿಸಿರುವ ಹೊಸ ಪುನರ್ವಸತಿ ಮತ್ತು ಪುನರ್ನಿರ್ಮಾಣ (ಆರ್ ಅಂಡ್ ಆರ್) ನೀತಿಯಲ್ಲಿ ಅನೇಕ ಉತ್ತಮ ಅಂಶಗಳಿರುವುದನ್ನು ಗಮನಿಸಲಾಗಿದ್ದು ರಾಜ್ಯ ಸರ್ಕಾರವೂ ಹೆಚ್ಚು ಉದಾರವಾದ ನೀತಿಯನ್ನು ರೂಪಿಸುವ ಕುರಿತು ಯೋಚಿಸುತ್ತಿದೆ ಎನ್ನಲಾಗಿದೆ.

### ಸ್ಟ್ಯಾಂಪು ಮತ್ತು ನೋಂದಣಿ (Stamps and Registration)

ಭಾರತೀಯ ಮುದ್ರಾಂಕಿತ (ಸ್ಟ್ಯಾಂಪ್) ಅಧಿನಿಯಮದಂತೆ ವಿನಿಮಯ ಪತ್ರ, ಚೆಕ್, ಪ್ರಾಮಿಸರಿ ನೋಟು, ಸಾಲ ಪತ್ರ, ಜೀವವಿಮಾ ಪಾಲಿಸಿ, ಮುಂತಾದವೆಲ್ಲ ಈ ಅಧಿನಿಯಮಕ್ಕೆ ಒಳಪಟ್ಟಿರುತ್ತವೆ. ಭಾರತೀಯ ನೋಂದಣಿ ಅಧಿನಿಯಮ ೧೯೦೮ ರಂತೆ ಕೆಲವೊಂದು ದಸ್ತಾವೇಜುಗಳನ್ನು ನೋಂದಾಯಿಸಲೇಬೇಕಾಗಿದ್ದು. ನೋಂದಾವಣಿಗೆ ಸೂಕ್ತ ದರವನ್ನು ಗೊತ್ತುಪಡಿಸಲಾಗಿರುತ್ತದೆ. ಕರ್ನಾಟಕ ಮುದ್ರಾಂಕ ಅಧಿನಿಯಮವು ಮೇಲೆ ಹೇಳಿದ ಕಾಗದ ಪತ್ರಗಳನ್ನು ಹೊರತುಪಡಿಸಿ ಇತರ ಕಾಗದ ಪತ್ರಗಳಿಗೆ ಅನ್ವಯಿಸುತ್ತದೆ. ಈ ರಾಜ್ಯ ಅಧಿನಿಯಮದಂತೆ ೫೫ ಬೇರೆ ಬೇರೆ ವಿಧದ ದಸ್ತಾವೇಜುಗಳು ಮುದ್ರಾಂಕದ ಕಕ್ಷೆಯಲ್ಲಿ ಬರುತ್ತದೆ. ಇವುಗಳನ್ನು ಸ್ಥೂಲವಾಗಿ ಸ್ಥಿರ ತೆರಿಗೆಯವು ಹಾಗೂ ನೋಂದಾಯಿಸುವ ವಸ್ತುವಿನ ಮೌಲ್ಯದ ಪ್ರಮಾಣದವು ಎಂದೂ ವರ್ಗೀಕರಿಸಬಹುದು. ಇದರಲ್ಲಿ ಮೌಲ್ಯವುಳ್ಳ ವಸ್ತುಗಳ ಮೌಲ್ಯವನ್ನು ನೋಂದಣಿ ಪತ್ರದಲ್ಲಿ ಉಲ್ಲೇಖಿಸಿ ಅದಕ್ಕನುಗುಣವಾಗಿ ಗೊತ್ತುಪಡಿಸಿದ ಛಾಪಾಕಾಗದವನ್ನು ನೋಂದಣಿ ಪತ್ರಕ್ಕೆ ಬಳಸಬೇಕು ಹಾಗೂ ಪ್ರತ್ಯೇಕ ನೋಂದಣಿ ಶುಲ್ಕ ಪಾವತಿಸಬೇಕು. ತಾತ್ಕಾಲಿಕ ವ್ಯವಹಾರಗಳಿಂದ ತಾತ್ಪೂರ್ತಿಕ ಹಸ್ತಾಂತರ ಅಥವಾ ತತ್ಸಮ ವ್ಯವಹಾರಗಳಲ್ಲಿ ಬಳಕೆಗೆ ಕೊಡದೆ ಅಡಮಾನ, ಆಸ್ತಿ ವಿಭಜನೆ, ಭದ್ರತಾ ಮುಚ್ಚಳಿಕೆ (ಶ್ಯೂರಿಟಿ) ಮುಂತಾದ ಛಾಪಾ ಕಾಗದದ ವೆಚ್ಚ ಕಡಿಮೆ ಇರುತ್ತದೆ. ಒಪ್ಪಂದದ ಕರಾರುಪತ್ರಗಳು (ಅಗ್ರಿಮೆಂಟ್ಸ್), ಪ್ರಮಾಣಪತ್ರ (ಅಫಿಡೆವಿಟ್), ದತ್ತಕ ಪ್ರಕರಣ ಇವುಗಳಿಗೆಲ್ಲಾ ನಿಗದಿಪಡಿಸಿದ ಖಚಿತವಾದ ಮಿತದರ ಇರುತ್ತದೆ. ಇದಲ್ಲದೆ ನ್ಯಾಯಾಲಯ ಸಂಬಂಧಿ ಮತ್ತು ನ್ಯಾಯಾಂಗೇತರ ಪತ್ರಗಳೆಂಬ ವರ್ಗವೂ ಇರುತ್ತದೆ. ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ಮೊಕದ್ದಮೆಗಳ ಅಧಿನಿಯಮ ೧೯೫೮ರಂತೆ ನ್ಯಾಯಾಂಗ ಸಂಬಂಧಿ ಮೊಕದ್ದಮೆಗಳಿಗೆ ಲಗತ್ತಿಸಬೇಕಾದ ಮುದ್ರಾಂಕ ಶುಲ್ಕವನ್ನು ನಿಗದಿಗೊಳಿಸಿದೆ. ಭಾರತೀಯ ಮುದ್ರಾಂಕಿತ ಅಧಿನಿಯಮ ಮತ್ತು ಕರ್ನಾಟಕ ಮುದ್ರಾಂಕ ಅಧಿನಿಯಮ ೧೯೫೮ ಇವುಗಳ ಕಕ್ಷೆಯಲ್ಲಿ ಬರುವ ಕಾಗದ ಪತ್ರಗಳು, ಕಾನೂನಿನಲ್ಲಿ ತಿಳಿಸಿರುವ ನ್ಯಾಯಾಂಗೇತರ ಛಾಪಾಕಾಗದದಲ್ಲಿ ಬರೆಯಲ್ಪಟ್ಟಿರಬೇಕೆಂದು ನಿಯಮವಿದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನೋಂದಣಿ ಅಧಿಕಾರಿಯು ತನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸ್ಥಿರ ಆಸ್ತಿಗಳ ಹಸ್ತಾಂತರದ ನೋಂದಣಿ ಮತ್ತು ಸೂಕ್ತ ಶುಲ್ಕವನ್ನು ವಸೂಲು ಮಾಡುವುದು, ಉಪನೋಂದಣಿ ಅಧಿಕಾರಿ(ಸಬ್ ರಿಜಿಸ್ಟ್ರಾರ್) ಯ ಕೆಲಸ, ಮದುವೆ, ದತ್ತಕ ಪ್ರಕರಣ ಹಾಗೂ ಉಯಿಲು (ವಿಲ್) ಗಳನ್ನೂ ಅವರೇ ನೋಂದಣಿ ಮಾಡುತ್ತಾರೆ. ೫೫ ವಿವಿಧ ದಾಖಲೆಗಳಿಗೆ ಕರ್ನಾಟಕ ಸ್ಟ್ಯಾಂಪು ವಿಧಿ ಅನ್ವಯಿಸುತ್ತದೆ. ಇವನ್ನು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ. ಮೊದಲನೆಯದು 'ಅಡ್ವೊಲೆರೆಂ' ತೆರಿಗೆ ಹಾಗೂ ಎರಡನೆಯದು ನಿರ್ಧಾರಿತ ತೆರಿಗೆ. ಅಡ್ವೊಲೆರೆಂ ವಿಭಾಗದಡಿ ಬರುವ ದಾಖಲೆಗಳನ್ನು ಕನ್ವೆಯನ್ಸ್ ದಾಖಲೆಗಳು ಮತ್ತು ಬಾಂಡ್‌ರೇಟ್ ದಾಖಲೆಗಳೆಂದು ಪುನರ್ವಿಂಗಡಿಸಲಾಗಿದೆ. ಮಾರಾಟ, ಬಹುಮಾನ ಅಥವಾ ಅದಲು ಬದಲು ಮಾಡಿಕೊಳ್ಳುವ ಸಂಪೂರ್ಣ ಹಕ್ಕನ್ನು ಹೊಂದಿದ್ದ ದಾಖಲೆಗಳ ಮೇಲೆ ಕನ್ವೆಯನ್ಸ್ ದರವನ್ನು ವಿಧಿಸಲಾಗುತ್ತದೆ. ಭೋಗ್ಯ ಪಾಲುದಾರಿಕೆ ಅಥವಾ ಸೆಕ್ಯುರಿಟಿ ಬಾಂಡ್‌ಗಳಂತಹ ಅಪೂರ್ಣ ಹಕ್ಕನ್ನು ಹೊಂದಿದ ದಾಖಲೆಗಳ ಮೇಲೆ ಬಾಂಡ್‌ರೇಟ್ ದರವನ್ನು ವಿಧಿಸಲಾಗುತ್ತದೆ. ೧೯೫೭ರಿಂದ ೧೯೭೯ರ ನಡುವೆ ಕನ್ವೆಯನ್ಸ್ ದರವನ್ನು ಹಲವಾರು ಬಾರಿ ಪರಿಷ್ಕರಿಸಲಾಗಿದೆ. ಆದರೆ ೧೯೬೦ರವರೆಗೂ ಬದಲಾಗದ ಬಾಂಡ್‌ರೇಟ್ ದರ ೧೯೭೯ರಲ್ಲಿ ಮೂರನೇ ಒಂದು ಭಾಗದಷ್ಟು ಹೆಚ್ಚಾಗಿದೆ. ಅಗ್ರಿಮೆಂಟು, ಅಫಿಡೆವಿಟ್ಟು, ದತ್ತು ದಾಖಲೆ ಮತ್ತು ಸಂಸ್ಥೆಗಳ ವಿಧಿಬದ್ಧ ದಾಖಲೆಗಳ ಮೇಲೆ ನಿರ್ದಿಷ್ಟ ದರ ನಿಗದಿಪಡಿಸಲಾಗುತ್ತದೆ. ಇದಲ್ಲದೆ ದಾಖಲೆಗಳನ್ನು ನ್ಯಾಯಾಂಗಕ್ಕೆ ಸೇರಿದ ಹಾಗೂ ಸೇರದ ದಾಖಲೆಗಳೆಂದು ವರ್ಗೀಕರಿಸಲಾಗಿದೆ. ನ್ಯಾಯಾಂಗಕ್ಕೆ ಸೇರಿದ ದಾಖಲೆಗಳ ಮೇಲಿನ ಸ್ಟ್ಯಾಂಪ್ ಶುಲ್ಕ ಕರ್ನಾಟಕ ಕೋರ್ಟ್ ಫೀ ಅಂಡ್ ಸೂಟ್ ವಾಲ್ಯುಯೇಷನ್ ಕಾಯ್ದೆ ೧೯೫೮ರನ್ವಯ ನಿಯಂತ್ರಿಸಲ್ಪಟ್ಟಿದೆ. ಭಾರತೀಯ ಸ್ಟ್ಯಾಂಪ್ ಕಾಯಿದೆಯಡಿ ಬರುವ ವಿಷಯಗಳನ್ನು ನಾನ್ ಜುಡಿಷಿಯಲ್ ಕಾಗದದ ಮೇಲೆ ಬರೆಯಬೇಕಾಗುತ್ತದೆ.

ತುಮಕೂರು ಜಿಲ್ಲಾ ನೋಂದಣಿ ಕಛೇರಿಯು ದಿನಾಂಕ ೧೫.೩.೧೯೮೯ ರಿಂದ ಪುನರ್ ರಚನೆಯಾಗಿ (Re-organize) ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ಇದಕ್ಕೂ ಮೊದಲು ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಜಿಲ್ಲಾ ನೋಂದಣಿ ಅಧಿಕಾರಿಯಾಗಿದ್ದು, ಈ ಇಲಾಖೆಯ ಅಧಿಕಾರಿ ಕೇಂದ್ರಸ್ಥಾನಿಕ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ತುಮಕೂರು ಜಿಲ್ಲೆಗೆ ಸೀಮಿತವಾದಂತೆ ೧೧ ಉಪನೋಂದಣಿ ಕಛೇರಿಗಳಿರುತ್ತವೆ. ತುಮಕೂರು, ತಿಪಟೂರು, ಕುಣಿಗಲ್, ಗುಬ್ಬಿ, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಕೊರಟಗೆರೆ, ಮಧುಗಿರಿ, ಶಿರಾ, ಪಾವಗಡ ಮತ್ತು ಹುಲಿಯೂರುದುರ್ಗ. ೨೦೦೩ ರಿಂದ ನೋಂದಣಿಯನ್ನು ಗಣಕೀಕೃತಗೊಳಿಸಲಾಗಿದೆ. ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಕೇಂದ್ರಸ್ಥಾನ ಸಹಾಯಕರೆಂದು ಅಧಿಕಾರಿಗಳಿದ್ದು, ತಾಲೂಕು ಮಟ್ಟದ ಅಧಿಕಾರಿ ಮತ್ತು ಪ್ರಾಧಿಕಾರಿಗಳಾಗಿ (೧) ತುಮಕೂರು, ತಿಪಟೂರು, ಕುಣಿಗಲ್ ಮೂರು ತಾಲೂಕುಗಳಲ್ಲಿ ಹಿರಿಯ ಉಪನೋಂದಣಾಧಿಕಾರಿಗಳು (೨) ಶಿರಾ, ಮಧುಗಿರಿ, ಪಾವಗಡ, ಕೊರಟಗೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಹುಲಿಯೂರುದುರ್ಗ ಸೇರಿದಂತೆ ಎಂಟು ತಾಲೂಕುಗಳಲ್ಲಿ ಉಪನೋಂದಣಾಧಿಕಾರಿಗಳು ಇವರ ಅಧೀನದಲ್ಲಿ ಕೆಲಸ ಮಾಡುತ್ತಾರೆ.

ಮೈಸೂರಿನಲ್ಲಿ ೧೮೩೧–೩೨ರಿಂದಲೇ ಮುದ್ರಾಂಕ ಶುಲ್ಕಗಳನ್ನು ಸಂಗ್ರಹಿಸಲಾಗುತ್ತಿತ್ತು. ಆದರೆ ಅದರ ದರಗಳು ಬಹಳ ಕಡಿಮೆ ಇದ್ದುದಲ್ಲದೆ ಹೆಚ್ಚು ವ್ಯಾಪಕವೂ ಆಗಿರಲಿಲ್ಲ. ಈ ಮೂಲದಿಂದ ಸರ್ಕಾರಕ್ಕೆ ೧೮೩೧ ಮತ್ತು ೧೮೬೧ರ ಅವಧಿಯಲ್ಲಿ ವಾರ್ಷಿಕ ಆದಾಯವು ರೂ. ೬,೦೦೦ ದಿಂದ ರೂ. ೯,೦೦೦ ಮಾತ್ರವಾಗಿತ್ತು. ಆ ವರ್ಷಗಳಲ್ಲಿ ಕೋರ್ಟ್ ಫೀಗಳನ್ನು ನಾಣ್ಯದ ರೂಪದಲ್ಲಿ ಕೊಡುತ್ತಿದ್ದು ಬೇರೆ ಆದಾಯಗಳೊಡನೆ ಇದರ ಲೆಕ್ಕಪತ್ರಗಳೂ ಮಿಶ್ರವಾಗಿರುತ್ತಿದ್ದವು. ಸ್ಥಳೀಯ ಕಾನೂನಿನಲ್ಲಿ ೧೮೬೨ರಲ್ಲಿ ಮಾಡಿದ ಕೆಲವು ಬದಲಾವಣೆಗಳಿಂದಾಗಿ ಮುದ್ರಾಂಕ ಶುಲ್ಕಗಳ ಸಂಗ್ರಹ ಹೆಚ್ಚಳ ಕಂಡ ೧೮೬೨ರಲ್ಲಿ ಮಾಡಿದ ಕೆಲವು ಬದಲಾವಣೆಗಳಿಂದಾಗಿ ಮುದ್ರಾಂಕ ಶುಲ್ಕಗಳ ಸಂಗ್ರಹ ಹೆಚ್ಚಳ ಕಂಡು ೧೮೬೪–೬೫ರ ವೇಳೆಗೆ ವಾರ್ಷಿಕ ಆದಾಯ ರೂ. ೨,೪೧,೦೦೦/–ಗಳಾಯಿತು. ಭಾರತೀಯ ಮುದ್ರಾಂಕ ಅಧಿನಿಯಮವನ್ನು ೧೮೬೫ರಲ್ಲಿ ಜಾರಿಗೊಳಿಸಲಾಯಿತು ಮತ್ತು ಈ ಮೂಲದ ಆದಾಯವು ವರ್ಷೇ ವರ್ಷೇ ಜಾಸ್ತಿಯಾಗತೊಡಗಿತು. ಮುಂದಿನ ವರ್ಷಗಳಲ್ಲಿ ಈ ಅಧಿನಿಯಮ ಮತ್ತು ನಿಯಮಾವಳಿಗಳಿಗೆ ಅನೇಕ ತಿದ್ದುಪಡಿಗಳನ್ನು ತರಲಾಯಿತು. ಈಗ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಮುಂದೆ ಕಾಣಿಸಿರುವ ಕಾಯ್ದೆ ಮತ್ತು ನಿಯಮಗಳನ್ನು ಜಾರಿಗೊಳಿಸುತ್ತಿದೆ.

೧. ನೋಂದಣಿ ಅಧಿನಿಯಮ ೧೯೦೮
೨. ಕರ್ನಾಟಕ ನೋಂದಣಿ ನಿಯಮ ೧೯೬೫
೩. ಕರ್ನಾಟಕ ಸ್ಟ್ಯಾಂಪ್ ಕಾಯ್ದೆ ೧೯೫೭ ಹಾಗೂ ನಿಯಮ ೧೯೫೮
೪. ಕರ್ನಾಟಕ ಕೋರ್ಟ್ ಫೀ ಅಂಡ್ ಸೂಟ್ಸ್ ವ್ಯಾಲುಯೇಷನ್ ಅಧಿನಿಯಮ ೧೯೫೮
೫. ಭಾರತೀಯ ಪಾಲುಗಾರಿಕೆ ಅಧಿನಿಯಮ ೧೯೩೨
೬. ಭಾರತೀಯ ಮುದ್ರಾಂಕ ಅಧಿನಿಯಮ ೧೮೯೯
೭. ಹಿಂದೂ ವಿವಾಹ ಅಧಿನಿಯಮ ೧೯೫೨, ವಿಶೇಷ ವಿವಾಹ ಅಧಿನಿಯಮ ೧೯೫೪
೮. ಕರ್ನಾಟಕ ಸಂಘ–ಸಂಸ್ಥೆಗಳ ನೋಂದಣಿ ಅಧಿನಿಯಮ ೧೯೬೦

ತನ್ನ ಪ್ರಾಂತದ ಸ್ಥಿರಾಸ್ತಿಯ ದಾಖಲೆಗಳ ನೋಂದಣಿ ಹಾಗೂ ನೋಂದಣಿ ಶುಲ್ಕದ ವಸೂಲಿ ಕೆಲಸವನ್ನು ಉಪನೋಂದಣಾಧಿಕಾರಿಗೆ ವಹಿಸಲಾಗಿದೆ. ವಿವಿಧ ವಿವಾಹ ಕಾಯ್ದೆಗಳಡಿ ಬರುವ ವಿವಾಹಗಳ ನೋಂದಣಾಧಿಕಾರಿಯೂ ಇವರೇ ಆಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ನೋಂದಣಾಧಿಕಾರಿಯು ತನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸ್ಥಿರ ಆಸ್ತಿಗಳ ಹಸ್ತಾಂತರದ ನೋಂದಣಿ ಮತ್ತು ಶುಲ್ಕವನ್ನು ವಸೂಲು ಮಾಡುವುದು ಉಪನೋಂದಣಾಧಿಕಾರಿಯ (ಸಬ್ ರಿಜಿಸ್ಟ್ರಾರ್) ಕೆಲಸ. ವಿವಾಹ, ದತ್ತಕ ಪ್ರಕರಣ ಹಾಗೂ ಉಯಿಲು (ವಿಲ್) ಗಳನ್ನೂ ನೋಂದಣಿ ಮಾಡುತ್ತಾರೆ. ಆಸ್ತಿಗಳ ಮಾರಾಟ ಬೆಲೆ ನಿಗದಿಗಾಗಿ ಮಾರ್ಗಸೂಚಿ ಬೆಲೆಯನ್ನು ಆಗಾಗ್ಗೆ ಪರಿಷ್ಕರಿಸಲಾಗುತ್ತದೆ. ಅದಕ್ಕಾಗಿ ಪ್ರತ್ಯೇಕ ಸಮಿತಿ ರಚಿಸಲಾಗಿದೆ (ಕೇಂದ್ರ ಮೌಲ್ಯಮಾಪನ ಸಮಿತಿ). ಕಾಲಕಾಲಕ್ಕೆ ನಿಗದಿಪಡಿಸಿದ ಮೌಲ್ಯಮಾಪನವನ್ನು ಗಣಕೀಕೃತಗೊಳಿಸಿದ್ದು, ಜನರು ತಮ್ಮ ಆಸ್ತಿಗಳ ಮೌಲ್ಯವನ್ನು ತಾವೇ ನೋಡಿಕೊಳ್ಳಲು ಅವಕಾಶವಿದೆ. ಅದನ್ನು ರಾಜ್ಯಪತ್ರದಲ್ಲಿಯೂ ಪ್ರಕಟಿಸುವರು.

ಕರ್ನಾಟಕ ಮುದ್ರಾಂಕ ಕಾಯ್ದೆ ೧೯೫೭ರ ಕಲಂ ೪೫ ಎ ಅನ್ನು ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಸಿ ಜಾರಿಗೆ ತರಲಾಗಿ ಆ ಮೂಲಕ ಜಾರಿಗೆ ಬಂದ ವರ್ಷದಿಂದ ಪ್ರಸ್ತುತ ಕಾಯ್ದೆ ಅಡಿಯಲ್ಲಿ ವಸೂಲಾದ ರಾಜಸ್ವದ ವಿವರ ಈ ಕೆಳಕಂಡಂತಿದೆ.

**ಕೋಷ್ಟಕ ೯.೧೯ ವರ್ಷವಾರು ಶುಲ್ಕ ವಸೂಲಾತಿಯ ವಿವರ**

| ಕ್ರ.ಸಂ. | ನೋಂದಣಿ ಆದ ವರ್ಷ | ದಸ್ತಾವೇಜು | ಶೋಧನಾ ಅರ್ಜಿ | ನಕಲು ಅರ್ಜಿ | ವಸೂಲಾದ ಕಂದಾಯ | | |
|---|---|---|---|---|---|---|---|
| | | | | | ಮುದ್ರಾಂಕ ಶುಲ್ಕ | ನೋಂದಣಿ ಶುಲ್ಕ | ಒಟ್ಟು |
| ೧ | ೧೯೯೮-೯೯ | ೩೧,೦೯೪ | ೨೪,೭೮೧ | ೫,೫೦೦ | ೧೨,೯೨,೩೫,೯೫೭ | ೨,೮೭,೧೨,೯೩೨ | ೧೫,೭೯,೪೮,೮೮೯ |
| ೨ | ೧೯೯೯-೨೦೦೦ | ೩೫,೧೩೩ | ೨೮,೭೪೯ | ೫,೬೧೩ | ೧೩,೮೫,೨೩,೨೪೬ | ೩,೦೫,೨೩,೮೩೦ | ೬,೯೦,೪೭,೦೭೬ |
| ೩ | ೨೦೦೦-೦೧ | ೩೪,೨೩೨ | ೨೮,೨೭೧ | ೫,೬೬೫ | ೧೩,೧೮,೩೮,೧೭೧ | ೩,೬೪,೬೫,೨೯೯ | ೧೬,೮೩,೦೩,೪೭೦ |
| ೪ | ೨೦೦೧-೦೨ | ೪೨,೫೧೨ | ೨೯,೨೦೬ | ೫,೯೯೮ | ೧೪,೪೪,೦೯,೮೨೧ | ೩,೬೧,೯೨,೪೦೦ | ೧೮,೦೬,೦೨,೨೨೧ |
| ೫ | ೨೦೦೨-೦೩ | ೩೭,೨೪೩ | ೩೨,೮೯೩ | ೬,೧೮೦ | ೧೩,೯೧,೩೩,೮೦೨ | ೩,೯೬,೨೧,೩೫೮ | ೧೭,೮೭,೫೫,೧೬೦ |
| ೬ | ೨೦೦೩-೦೪ | ೪೫,೪೯೪ | ೩೭,೬೫೪ | ೫,೭೩೧ | ೧೨,೭೧,೩೦,೦೦೧ | ೨,೯೨,೬೨,೮೭೮ | ೧೫,೬೩,೯೨,೮೭೯ |
| ೭ | ೨೦೦೪-೦೫ | ೫೨,೩೩೭ | ೪೬,೩೩೦ | ೬,೫೮೦ | ೧೬,೨೪,೮೭,೫೪೦ | ೩,೪೨,೯೩,೨೦೪ | ೧,೯೨,೭೦,೬೫೦ |
| ೮ | ೨೦೦೫-೦೬ | ೩೮,೨೩೭ | ೫೨,೫೬೧ | ೭,೦೧೯ | ೧,೬೨,೦೯,೩೯೬ | ೩,೦೬,೧೩,೨೦೪ | ೧೯,೨೭,೦೬,೫೦೦ |
| ೯ | ೨೦೦೬-೦೭ | ೬೮,೪೮೯ | ೫೯,೦೩೪ | ೮,೨೯೮ | ೨೮,೪೧,೩೩,೦೪೨ | ೪,೯೩,೩೨,೯೩೪ | ೩೩,೩೪,೬೫,೯೭೬ |
| ೧೦ | ೨೦೦೭-೦೮ | ೭೫,೮೮೩ | ೬೦,೭೨೮ | ೧೦,೩೧೯ | ೩೫,೯೩,೨೮,೬೮೮ | ೫,೯೯,೧೨,೫೧೪ | ೪೧,೯೨,೪೧,೨೦೨ |
| ೧೧ | ೨೦೦೮-೦೯ | ೫೮,೬೭೭ | ೬೩,೫೧೮ | ೧೧,೨೮೭ | ೩೪,೭೦,೧೯,೦೬೭ | ೬,೧೫,೯೯,೨೦೩ | ೪೦,೮೬,೧೮,೨೭೦ |
| ೧೨ | ೨೦೦೯-೧೦ | ೬೭,೮೮೮ | ೬೪,೯೫೭ | ೧೦,೭೦೭ | ೨೬,೪೦,೫೮,೨೦೩ | ೬,೨೭,೪೭,೧೮೧ | ೩೨,೬೮,೦೫,೩೮೪ |
| ೧೩ | ೨೦೧೦-೧೧ | ೫೨,೫೧೧ | ೭೦,೩೦೫ | ೧೨,೭೮೫ | ೩೧,೯೯,೩೮,೭೨೦ | ೬,೬೯,೯೦,೧೯೧ | ೩೮,೬೯,೨೮,೯೧೧ |
| ೧೪ | ೨೦೧೧-೧೨ | ೮೬,೫೨೮ | ೬೩,೧೦೧ | ೧೫,೫೫೦ | ೪೭,೯೮,೪೭,೭೩೬ | ೯,೬೭,೭೯,೯೩೧ | ೫೭,೬೬,೨೭,೬೬೭ |
| ೧೫ | ೨೦೧೨-೧೩ | ೯೦,೮೬೭ | ೭೧,೯೩೦ | ೧೮,೪೬೩ | ೫೧,೨೮,೮೩,೭೮೩ | ೧೩,೩೫,೯೩,೧೩೯ | ೬೪,೬೪,೭೬,೯೨೨ |

**ಮಾಹಿತಿ ಮೂಲ: ಜಿಲ್ಲಾ ನೋಂದಣಾಧಿಕಾರಿ, ತುಮಕೂರು ಜಿಲ್ಲೆ.**

ತುಮಕೂರು ಜಿಲ್ಲಾ ನೋಂದಣಿ ಕಛೇರಿಯ ಕಾರ್ಯವ್ಯಾಪ್ತಿಗೆ ಬರುವ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ ೧೯೬೦ಕ್ಕೆ ೧೯೯೦ರಿಂದ ಜಾರಿಗೆ ಬರುವಂತೆ ತಿದ್ದುಪಡಿ ತರಲಾಗಿ, ಸಂಘ-ಸಂಸ್ಥೆಗಳ ನೋಂದಣಿ ಶುಲ್ಕವನ್ನು ೫೦ ರೂ.ಗಳಿಂದ ೧೦೦ ರೂ.ಗಳಿಗೆ ಏರಿಸಲಾಯಿತು. ವಾರ್ಷಿಕ ಲೆಕ್ಕಪತ್ರಗಳನ್ನು ಫೈಲು ಮಾಡುವ ಶುಲ್ಕವನ್ನು ವರ್ಷಕ್ಕೆ ಎರಡು ರೂ..ಗಳಿಂದ ೧೦೦ ರೂ.ಗಳಿಗೆ ಏರಿಸಲಾಯಿತು. ಇದರಿಂದಾಗಿ ವಸೂಲಾದ ರಾಜಸ್ವವು ಈ ಕೆಳಕಂಡಂತಿದೆ.

**ಕೋಷ್ಟಕ ೯.೨೦ ಜಿಲ್ಲಾ ನೋಂದಣಿ ಕಛೇರಿಯಲ್ಲಿ ನೋಂದಣಿಗೊಂಡ ಸಂಘ-ಸಂಸ್ಥೆಗಳಿಂದ ವಸೂಲಾದ ಶುಲ್ಕದ ವಿವರ**

| ಕ್ರಮ ಸಂಖ್ಯೆ | ನೋಂದಣಿಯಾದ ವರ್ಷ | ಸಂಘ | ವಸೂಲಾದ ಕಂದಾಯ | | |
|---|---|---|---|---|---|
| | | | ಮುದ್ರಾಂಕ ಶುಲ್ಕ | ನೋಂದಣಿ ಶುಲ್ಕ | ಒಟ್ಟು |
| ೧ | ೧೯೯೮-೧೯೯೯ | ೪೧೮ | ... | ೮೫,೪೫೫ | ೮೫,೪೫೫ |
| ೨ | ೧೯೯೯-೨೦೦೦ | ೪೩೦ | ೬,೪೫೦ | ೨,೦೨,೦೮೬ | ೨,೦೮,೫೩೬ |
| ೩ | ೨೦೦೦-೨೦೦೧ | ೩೫೨ | ೭,೦೪೦ | ೪,೫೬,೨೨೦ | ೪,೬೩,೨೬೦ |
| ೪ | ೨೦೦೧-೨೦೦೨ | ೪೩೪ | ೮,೬೮೦ | ೯,೪೦,೦೬೫ | ೯,೪೮,೭೪೫ |
| ೫ | ೨೦೦೨-೨೦೦೩ | ೫೦೪ | ೧೦೦೮೦ | ೫,೬೨,೬೫೦ | ೫,೭೨,೭೩೦ |
| ೬ | ೨೦೦೩-೨೦೦೪ | ೪೪೫ | ೮,೯೦೦ | ೬,೮೨,೦೩೦ | ೬,೯೦,೯೩೦ |

| | | | | | |
|---|---|---|---|---|---|
| ೭ | ೨೦೦೪–೨೦೦೫ | ೬೪೦ | ೫,೭೧೦ | ೮,೬೯,೩೧೫ | ೮,೭೫,೦೨೫ |
| ೮ | ೨೦೦೫–೨೦೦೬ | ೪೫೫ | ೭೩೧೫ | ೯,೬೬,೮೦೫ | ೯,೭೪,೧೨೦ |
| ೯ | ೨೦೦೬–೨೦೦೭ | ೪೬೦ | ೯,೨೮೦ | ೧೨,೮೯,೬೨೦ | ೧೨,೯೮,೯೦೦ |
| ೧೦ | ೨೦೦೭–೨೦೦೮ | ೩೯೨ | ೧೦,೦೪೦ | | ೮,೬೯,೮೯೦ |
| ೧೧ | ೨೦೦೮–೨೦೦೯ | ೪೨೨ | – | | ೮,೦೫,೬೭೨ |
| ೧೨ | ೨೦೦೯–೨೦೧೦ | ೪೯೮ | – | | ೧೬,೬೪,೧೫೯ |
| ೧೩ | ೨೦೧೦–೨೦೧೧ | ೬೬೮ | – | | ೧೭,೯೯,೭೦೬ |
| ೧೪ | ೨೦೧೧–೨೦೧೨ | ೫೪೪ | – | | ೧೫,೯೫,೬೨೬ |
| ೧೫ | ೨೦೧೨–೨೦೧೩ | ೬೭೧ | – | | ೮,೯೨,೨೪೦ |

**ಮಾಹಿತಿ ಮೂಲ: ಜಿಲ್ಲಾ ನೋಂದಣಾಧಿಕಾರಿ, ತುಮಕೂರು ಜಿಲ್ಲೆ.**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಕಂಇ ೧೫೨ ಮುನೋಮು ೨೦೦೮ ಬೆಂಗಳೂರು ದಿನಾಂಕ ೭.೫.೦೮ ಅನ್ವಯ ದಿನಾಂಕ ೧.೬.೨೦೦೮ ರಿಂದ ಸಂಘಗಳ ನೋಂದಣಿಯು ಸಹಕಾರ ಸಂಘಗಳ ಇಲಾಖೆಗೆ ವರ್ಗಾಯಿಸಲಾಗಿ–ತ್ತು. ಮರಳಿ ಸರ್ಕಾರದ ಅಧಿಸೂಚನೆ ಸಂಖ್ಯೆ ಎಲ್‌ಎಡಬ್ಲ್ಯೂ ೧೮ ಎಲ್‌ಜಿಎನ್ ೭೯ ದಿನಾಂಕ ೩೦–೪–೮೭ ರಂತೆ ಭಾರತೀಯ ಪಾಲುಗಾರಿಕೆ ಕಾಯ್ದೆ ೧೯೩೨ಕ್ಕೆ ತಿದ್ದುಪಡಿ ತಂದು ಪಾಲುಗಾರಿಕೆ ಸಂಸ್ಥೆಗಳಿಗೆ ನೋಂದಣಿ ಶುಲ್ಕ ಮತ್ತು ಫೈಲಿಂಗ್ ಶುಲ್ಕ ದಿನಾಂಕ ೩೦–೪–೮೭ ರಿಂದ ಜಾರಿಗೆ ಬರುವಂತೆ ಹೆಚ್ಚಿಸಿದ್ದರಿಂದ ರಾಜಸ್ವವು ಈ ಕೆಳಕಂಡಂತೆ ವಸೂಲಾಗಿರುವುದು ಕಂಡು ಬರುತ್ತದೆ.

### ಕೋಷ್ಟಕ ೯.೨೧ ಜಿಲ್ಲಾ ನೋಂದಣಿ ಕಛೇರಿಯಲ್ಲಿ ನೋಂದಣಿಗೊಂಡ ವ್ಯಾಪಾರ ಸಂಸ್ಥೆಗಳಿಂದ ವಸೂಲಾದ ಶುಲ್ಕದ ವಿವರ

| ಕ್ರಮ ಸಂಖ್ಯೆ | ನೋಂದಣಿಯಾದ ವರ್ಷ | ಸಂಘ | ವಸೂಲಾದ ಕಂದಾಯ | | |
|---|---|---|---|---|---|
| | | | ಮುದ್ರಾಂಕ ಶುಲ್ಕ | ಕ್ರಮ ಸಂಖ್ಯೆ | ನೋಂದಣಿಯಾದ ವರ್ಷ |
| ೧ | ೧೯೯೮–೯೯ | ೧೫೯ | –– | ೧೮,೭೬೫ | ೧೮,೭೬೫ |
| ೨ | ೧೯೯೯–೨೦೦೦ | ೧೮೦ | ೧,೨೦,೫೦೦ | ೨೦,೨೧೫ | ೧,೪೦,೭೧೫ |
| ೩ | ೨೦೦೦–೦೧ | ೧೪೧ | ೧,೯೫,೬೩೫ | ೨೦,೦೦೫ | ೨,೧೫,೬೪೦ |
| ೪ | ೨೦೦೧–೦೨ | ೧೨೭ | ೯೬,೦೭೦ | ೧೮,೮೮೫ | ೧,೧೪,೯೫೫ |
| ೫ | ೨೦೦೨–೦೩ | ೧೧೩ | ೮೭,೫೦೦ | ೧೬,೯೭೫ | ೧,೦೪,೪೭೫ |
| ೬ | ೨೦೦೩–೦೪ | ೯೧ | ೯೯,೦೦೦ | ೧೧,೭೭೫ | ೧,೧೦,೭೭೫ |
| ೭ | ೨೦೦೪–೦೫ | ೯೪ | ೧೦,೦೮,೦೦೦ | ೧೨,೩೫೦ | ೧೦,೨೦,೩೫೦ |
| ೮ | ೨೦೦೫–೦೬ | ೧೩೩ | ೧,೧೦,೨೫೫ | ೧೭,೨೩೫ | ೧,೨೭,೪೯೦ |
| ೯ | ೨೦೦೬–೦೭ | ೧೩೪ | ೧,೪೨,೨೯೦ | ೧೫,೮೧೫ | ೧,೫೮,೧೦೫ |
| ೧೦ | ೨೦೦೭–೦೮ | ೧೨೯ | ೧,೩೪,೪೭೦ | ೧೪,೭೯೦ | ೧,೪೯,೨೬೦ |
| ೧೧ | ೨೦೦೮–೦೯ | ೧೧೩ | ೧,೩೨,೩೦೫ | ೪,೯೬೫ | ೧,೩೭,೨೭೦ |
| ೧೨ | ೨೦೦೯–೧೦ | ೧೬೭ | ೨,೨೩,೬೯೦ | ೨,೮೨೫ | ೨,೨೬,೫೧೫ |
| ೧೩ | ೨೦೧೦–೧೧ | ೧೬೯ | ೧,೬೩,೬೬೦ | ೩,೧೨೫ | ೧,೬೬,೭೮೫ |
| ೧೪ | ೨೦೧೧–೧೨ | ೧೫೯ | ೯೯,೧೨೦ | ೧೮,೬೧೩ | ೧,೧೭,೭೩೩ |
| ೧೫ | ೨೦೧೨–೧೩ | ೨೦೦ | ೧,೭೮,೧೦೦ | ೨೪,೭೮೦ | ೨,೦೨,೮೮೦ |

**ಮಾಹಿತಿ ಮೂಲ: ಜಿಲ್ಲಾ ನೋಂದಣಾಧಿಕಾರಿ, ತುಮಕೂರು ಜಿಲ್ಲೆ ಮತ್ತು ೨೦೦೮–೦೯ರಿಂದ ೨೦೧೨–೧೩ರವರೆಗೆ ಸಹಕಾರ ಸಂಘಗಳ ಉಪನಿಬಂದಕರು**

## ಕೋಷ್ಟಕ ೯.೨೨ ೧೯೯೮-೯೯ ರಿಂದ ೨೦೦೭-೦೮ರ ವರೆಗಿನ ತಾಲೂಕುವಾರು ರಾಜಸ್ವ ವಸೂಲಿ ವಿವರ

| ಕ್ರಮ ಸಂಖ್ಯೆ | ಉಪನೋಂದಣಿ ಕಛೇರಿ ಹೆಸರು | ನೋಂದಣಿ ಆದ ದಸ್ತಾವೇಜು | ಶೋಧನಾ ಅರ್ಜಿ | ನಕಲು ಅರ್ಜಿ | ವಸೂಲಾದ ಕಂದಾಯ | | |
|---|---|---|---|---|---|---|---|
| | | | | | ಮುದ್ರಾಂಕ ಶುಲ್ಕ | ನೋಂದಣಿ ಶುಲ್ಕ | ಒಟ್ಟು |
| ೧ | ತುಮಕೂರು | ೧,೩೪,೩೯೫ | ೧,೨೪,೯೦೫ | ೨೫,೫೨೪ | ೯೪,೪೬,೨೬,೯೭೪ | ೧೫,೯೦,೩೧,೦೫೪ | ೧,೧೬,೩೬,೫೮,೦೨೮ |
| ೨ | ತಿಪಟೂರು | ೪೧,೩೫೭ | ೪೩,೧೯೪ | ೪,೪೮೧ | ೧೪,೨೫,೭೧,೪೪೪ | ೬,೦೧,೮೯,೦೧೩ | ೨೦,೨೭,೬೦,೪೫೭ |
| ೩ | ಕುಣಿಗಲ್ | ೨೫,೧೩೫ | ೧೪,೯೦೫ | ೫,೮೦೨ | ೭,೭೧,೭೩,೬೯೫ | ೧,೫೫,೭೮,೭೮೩ | ೯,೨೭,೫೨,೪೭೮ |
| ೪ | ಶಿರಾ | ೩೮,೦೫೨ | ೩೬,೩೦೬ | ೫,೧೬೪ | ೧೧,೫೫,೭೩,೦೩೨ | ೩,೪೧,೦೩,೨೯೯ | ೧೪,೯೬,೭೬,೩೩೧ |
| ೫ | ತುರುವೇಕೆರೆ | ೩೫,೧೪೫ | ೩೦,೭೦೯ | ೩,೭೪೭ | ೭,೭೮,೦೨,೯೭೫ | ೧,೭೬,೦೪,೭೮೭ | ೯,೫೪,೦೭,೭೬೨ |
| ೬ | ಗುಬ್ಬಿ | ೪,೧೭,೬೬೫ | ೪೮,೬೪೭ | ೫,೪೧೬ | ೯,೯೪,೬೪,೪೨೨ | ೨,೬೨,೧೩,೫೪೫ | ೧೨,೫೬,೭೭,೯೬೭ |
| ೭ | ಮಧುಗಿರಿ | ೩೭,೩೮೬ | ೨೨,೪೮೬ | ೫,೩೨೮ | ೮,೪೫,೧೦,೯೮೦ | ೧,೬೮,೦೨,೭೫೬ | ೧೦,೧೩,೧೩,೭೩೬ |
| ೮ | ಕೊರಟಗೆರೆ | ೨೩,೭೬೭ | ೧೫,೯೧೮ | ೪,೫೭೮ | ೩,೮೩,೫೧,೨೭೩ | ೯೨,೧೫,೬೮೫ | ೪,೭೫,೬೬,೯೫೮ |
| ೯ | ಪಾವಗಡ | ೨೭,೯೧೫ | ೨೪,೮೪೩ | ೩,೪೩೮ | ೬,೧೨,೦೯,೬೦೬ | ೧,೪೪,೦೩,೨೧೫ | ೭,೫೬,೧೨,೮೨೧ |
| ೧೦ | ಚಿ.ನಾ.ಹಳ್ಳಿ | ೩೦,೬೩೧ | ೩೨,೦೧೭ | ೩,೨೯೨ | ೮,೪೩,೯೨,೧೪೫ | ೧,೭೪,೮೭,೧೫೧ | ೧೦,೧೮,೭೯,೨೯೬ |
| ೧೧ | ಹು.ದುರ್ಗ | ೧೩,೩೬೪ | ೭,೯೬೦ | ೧,೧೧೪ | ೩,೪೬,೯೯,೪೫೮ | ೭೪,೦೨,೯೪೪ | ೪,೨೧,೦೨,೪೦೨ |

ಮಾಹಿತಿ ಮೂಲ: ಜಿಲ್ಲಾ ನೋಂದಣಾಧಿಕಾರಿ, ತುಮಕೂರು ಜಿಲ್ಲೆ

## ಕೋಷ್ಟಕ ೯.೨೩ ೨೦೦೮-೦೯ ರಿಂದ ೨೦೧೨-೧೩ರ ವರೆಗಿನ ತಾಲೂಕುವಾರು ರಾಜಸ್ವ ವಸೂಲಿ ವಿವರ

| ಕ್ರ.ಸಂ | ಉಪನೋಂದಣಿ ಕಛೇರಿ ಹೆಸರು | ನೋಂದಣಿ ಆದ ದಸ್ತಾವೇಜು | ಶೋಧನಾ ಅರ್ಜಿ | ನಕಲು ಅರ್ಜಿ | ವಸೂಲಾದ ಕಂದಾಯ | | ಒಟ್ಟು |
|---|---|---|---|---|---|---|---|
| | | | | | ಮುದ್ರಾಂಕ ಶುಲ್ಕ | ನೋಂದಣಿ ಶುಲ್ಕ | |
| | | | ೨೦೦೮-೦೯ | | | | |
| ೧ | ತುಮಕೂರು | ೧೬,೨೩೭ | ೧೭,೪೨೮ | ೪೧೭೦ | ೧೯,೮೦,೩೮,೬೦೯ | ೩,೨೩,೧೯,೬೦೮ | ೨೩,೦೩,೫೮,೨೧೭ |
| ೨ | ತಿಪಟೂರು | ೪,೫೬೧ | ೫,೫೯೧ | ೬೮೪ | ೨,೫೦,೭೮,೯೧೮ | ೪೧,೬೩,೫೨೦ | ೨,೯೨,೪೨,೪೩೮ |
| ೩ | ಕುಣಿಗಲ್ | ೨,೮೩೪ | ೪,೩೨೧ | ೯೦೧ | ೧,೪೬,೭೯,೪೫೯ | ೨೮,೦೭,೫೬೦ | ೧,೭೪,೭೭,೦೫೯ |
| ೪ | ಶಿರಾ | ೬,೩೮೩ | ೭,೦೫೭ | ೯೪೮ | ೩೦,೦೨,೭೪೬ | ೬೫,೭೫,೧೩೦ | ೯೫,೭೭,೮೭೬ |
| ೫ | ತುರುವೇಕೆರೆ | ೪,೪೫೯ | ೩,೬೧೦ | ೬೦೮ | ೯೪,೦೦,೯೫೦ | ೧೮,೦೬,೪೫೪ | ೧,೧೨,೦೭,೪೦೪ |
| ೬ | ಗುಬ್ಬಿ | ೫,೭೧೩ | ೭,೭೦೮ | ೯೯೩ | ೧,೬೭,೦೬,೩೯೧ | ೩೧,೨೪,೬೦೩ | ೧,೯೮,೩೦,೯೯೪ |
| ೭ | ಮಧುಗಿರಿ | ೪,೫೧೪ | ೩,೩೫೦ | ೯೮೫ | ೭೩,೮೮,೯೨೧ | ೨೬,೫೧,೨೩೬ | ೧,೦೦,೪೦,೧೫೭ |
| ೮ | ಪಾವಗಡ | ೪,೯೬೮ | ೬,೦೫೫ | ೩೭೨ | ೧,೫೭,೮೦,೬೬೪ | ೨೭,೨೬,೭೩೪ | ೧,೮೫,೦೭,೩೯೮ |
| ೯ | ಚಿಕ್ಕನಾಯಕನಹಳ್ಳಿ | ೩,೬೮೩ | ೪,೦೧೬ | ೪೧೪ | ೧,೨೦,೬೬,೮೨೨ | ೧೯,೭೧,೩೯೫ | ೧,೪೦,೩೮,೨೧೭ |
| ೧೦ | ಕೊರಟಗೆರೆ | ೩,೭೭೭ | ೨,೭೪೯ | ೯೦೭ | ೧,೦೧,೮೧,೯೮೭ | ೧೮,೩೯,೪೯೫ | ೧,೨೦,೨೧,೪೮೨ |
| ೧೧ | ಹುಲಿಯೂರು ದುರ್ಗ | ೧,೫೪೮ | ೧,೬೩೩ | ೩೦೫ | ೫೯,೨೯೫೧೪ | ೯,೫೧,೧೯೧ | ೬೮,೮೦,೭೦೫ |
| ೧೨ | ಜಿ.ನೋ.ಕಛೇರಿ | | | | ೧೭,೪೯,೦೪೬ | ೬,೬೨,೨೭೭ | ೨೪,೧೧,೩೨೩ |
| ಒಟ್ಟು | | ೫೮,೬೭೭ | ೬೩,೫೧೮ | ೧೧೨೯೦ | ೩೪,೭೦,೧೯,೦೬೭ | ೬,೧೫,೯೯,೨೦೩ | ೪೦,೮೬,೧೮,೨೭೦ |

| | | | | | | | |
|---|---|---|---|---|---|---|---|
| ೨೦೦೯–೧೦ | | | | | | | |
| ೧ | ತುಮಕೂರು | ೧೬,೧೮೩ | ೧೯,೩೫೪ | ೪,೧೬೫ | ೧೩,೭೯,೯೬,೫೫೧ | ೩,೦೩,೪೫,೭೪೩ | ೧೬,೮೩,೪೨,೨೯೪ |
| ೨ | ತಿಪಟೂರು | ೫,೦೩೧ | ೭,೮೨೭ | ೭೭೩ | ೨,೩೨,೬೯,೫೨೭ | ೪೯,೮೬,೨೫೯ | ೨,೮೨,೫೫,೭೮೬ |
| ೩ | ಕುಣಿಗಲ್ | ೩,೧೪೭ | ೧೨೦ | ೬೨ | ೮೭,೫೫,೫೫೪ | ೩೨,೫೬,೩೩೬ | ೧,೨೦,೧೧,೮೯೦ |
| ೪ | ಶಿರಾ | ೭,೬೨೨ | ೬,೬೮೫ | ೯೪೬ | ೨,೦೪,೩೭,೫೨೧ | ೬೫,೨೭,೬೭೫ | ೨,೬೯,೬೫,೧೯೬ |
| ೫ | ತುರುವೇಕೆರೆ | ೪,೪೦೦ | ೪,೦೮೮ | ೬೦೦ | ೮೭,೫೫,೪೪೪ | ೨೨,೩೫,೮೯೨ | ೧,೦೯,೯೧,೩೩೬ |
| ೬ | ಗುಬ್ಬಿ | ೭,೩೦೦ | ೮,೪೧೧ | ೭,೧೩೫ | ೧,೬೫,೭೫,೩೫೩ | ೩೯,೫೬,೫೫೪ | ೨,೦೫,೨೮,೯೦೭ |
| ೭ | ಮಧುಗಿರಿ | ೬,೮೯೧ | ೩,೨೮೫ | ೧,೨೭೫ | ೧,೨೩,೪೭,೩೭೪ | ೨೯,೩೩,೨೭೦ | ೧,೫೨,೮೦,೬೪೪ |
| ೮ | ಪಾವಗಡ | ೫,೧೨೮ | ೫,೮೦೩ | ೪೩೮ | ೧,೨೦,೪೮,೬೧೦ | ೨೭,೩೧,೪೪೫ | ೧,೪೭,೮೦,೦೫೫ |
| ೯ | ಚಿಕ್ಕನಾಯಕನಹಳ್ಳಿ | ೪,೪೦೬ | ೪,೯೬೭ | ೪೫೭ | ೧,೧೮,೭೧,೧೫೩ | ೨೭,೭೪,೬೯೩ | ೧,೪೬,೪೫,೮೪೬ |
| ೧೦ | ಕೊರಟಗೆರೆ | ೩,೧೪೧ | ೨,೮೭೭ | ೮೮೯ | ೬೫,೨೧,೬೬೬ | ೧೬,೬೨,೩೦೪ | ೮೧,೮೩,೯೭೦ |
| ೧೧ | ಹುಲಿಯೂರುದುರ್ಗ | ೧,೯೧೯ | ೧,೫೪೦ | ೨೮೨ | ೪೨,೯೧,೪೭೬ | ೮,೭೧,೩೮೦ | ೫೧,೬೨,೮೫೬ |
| ೧೨ | ಜಿ.ನೋ.ಕಛೇರಿ | | | | ೧೧,೮೭,೯೭೪ | ೧,೬೮,೬೩೦ | ೧೩,೫೬,೬೦೪ |
| | ಒಟ್ಟು | **೬೫,೧೬೮** | **೬೪,೯೫೭** | **೧೭,೦೨೨** | **೨೬,೪೦,೫೮,೨೦೩** | **೬,೨೪,೪೭,೧೮೧** | **೩೨,೬೫,೦೫,೩೮೪** |
| ೨೦೧೦–೧೧ | | | | | | | |
| ೧ | ತುಮಕೂರು | ೧೫,೭೧೪ | ೨೧,೮೨೫ | ೪,೯೫೦ | ೧೭,೪೯,೯೦,೭೩೮ | ೩,೪೪,೦೧,೩೬೪ | ೨೦,೯೩,೯೨,೧೦೨ |
| ೨ | ತಿಪಟೂರು | ೪,೮೨೨ | ೭,೩೩೫ | ೮೨೮ | ೨,೪೨,೦೯,೭೮೪ | ೫೨,೫೪,೩೧೧ | ೨,೯೪,೬೪,೦೯೫ |
| ೩ | ಕುಣಿಗಲ್ | ೨,೫೯೮ | ೨,೯೧೦ | ೧,೦೫೪ | ೧,೧೩,೭೭,೪೭೨ | ೨೭,೦೭,೨೫೯ | ೧,೪೦,೮೪,೭೩೧ |
| ೪ | ಶಿರಾ | ೫,೬೭೭ | ೬,೯೫೨ | ೧೧,೧೦೫ | ೨,೯೦,೬೭,೯೦೩ | ೬೯,೭೮,೫೯೬ | ೩,೬೦,೪೬,೪೯೯ |
| ೫ | ತುರುವೇಕೆರೆ | ೩,೪೭೮ | ೪,೮೩೯ | ೫೬೧ | ೧,೦೩,೦೩,೯೩೭ | ೨೨,೯೫,೧೬೭ | ೧,೨೫,೯೯,೧೦೪ |
| ೬ | ಗುಬ್ಬಿ | ೬,೧೭೫ | ೮,೬೮೦ | ೯೫೪ | ೧,೬೫,೦೫,೧೭೮ | ೪೦,೬೨,೪೯೫ | ೨,೦೫,೬೭,೬೭೩ |
| ೭ | ಮಧುಗಿರಿ | ೩,೧೩೬ | ೩,೨೩೭ | ೧,೩೧೮ | ೧,೫೪,೧೮,೪೬೫ | ೩೩,೦೨,೭೯೦ | ೧,೮೭,೨೧,೨೫೫ |
| ೮ | ಪಾವಗಡ | ೩,೯೬೨ | ೫,೭೨೫ | ೩೮೯ | ೧,೨೯,೭೨,೧೪೯ | ೨೭,೯೭,೪೬೩ | ೧,೫೭,೬೯,೬೧೨ |
| ೯ | ಚಿಕ್ಕನಾಯಕನಹಳ್ಳಿ | ೩,೦೭೯ | ೪,೫೨೮ | ೫೧೩ | ೧,೧೪,೪೦,೩೫೬ | ೨೪,೩೩,೨೫೨ | ೧,೩೮,೭೩,೬೦೮ |
| ೧೦ | ಕೊರಟಗೆರೆ | ೨,೩೮೯ | ೨,೦೨೭ | ೮೩೭ | ೮೫,೦೨,೫೬೨ | ೧೭,೫೬,೦೨೪ | ೧,೦೨,೫೮,೫೮೬ |
| ೧೧ | ಹುಲಿಯೂರುದುರ್ಗ | ೧,೪೮೧ | ೧,೪೦೦ | ೨೭೬ | ೩೯,೩೪,೦೬೯ | ೮,೬೯,೩೦೫ | ೪೮,೦೩,೩೭೪ |
| ೧೨ | ಜಿ.ನೋ.ಕಛೇರಿ | | | | ೧೨,೧೬,೧೦೭ | ೧,೩೨,೧೬೫ | ೧೩,೪೮,೨೭೨ |
| | ಒಟ್ಟು | **೫೨,೫೧೧** | **೬೫,೪೫೮** | **೧೨,೭೮೫** | **೩೧,೯೯,೩೮,೭೭೦** | **೬,೬೯,೯೦,೧೯೧** | **೩೮,೬೯,೨೮,೯೧೧** |
| ೨೦೧೧–೧೨ | | | | | | | |
| ೧ | ತುಮಕೂರು | **೨೨,೯೧೮** | **೨೪,೮೦೭** | **೬,೪೦೭** | **೨೯,೩೬,೯೧,೧೫೧** | **೫,೩೫,೪೬,೭೩೦** | **೩೪,೭೨,೩೭,೩೮೧** |
| ೨ | ತಿಪಟೂರು | ೭,೩೩೮ | ೬೯೫ | ೧,೦೨೩ | ೩,೩೩,೪೭,೮೩೯ | ೬೯,೧೦,೮೭೯ | ೪,೦೨,೫೮,೭೧೮ |
| ೩ | ಕುಣಿಗಲ್ | ೪,೫೬೦ | ೩,೭೮೮ | ೧,೪೪೪ | ೧,೪೪,೮೨,೬೧೧ | ೩೫,೧೮,೯೨೬ | ೧,೮೦,೦೧,೫೩೭ |
| ೪ | ಶಿರಾ | ೧೦,೬೯೮ | ೫೮೫ | ೧,೬೬೧ | ೩,೯೯,೪೮,೭೪೦ | ೧,೦೧,೯೨,೦೬೨ | ೫,೦೧,೪೦,೮೦೨ |
| ೫ | ತುರುವೇಕೆರೆ | ೫,೦೩೨ | ೨೯೫ | ೫೯ | ೧,೩೦,೨೯,೧೯೬ | ೩೦,೧೦,೭೮೯ | ೧,೬೦,೩೯,೯೮೫ |
| ೬ | ಗುಬ್ಬಿ | ೯,೫೩೧ | ೮,೩೫೩ | ೧,೧೨೯ | ೨,೦೩,೮೯,೯೯೩ | ೪೮,೩೬,೬೧೦ | ೨,೫೨,೨೬,೬೦೩ |
| ೭ | ಮಧುಗಿರಿ | ೬,೪೩೩ | ೪,೭೨೬ | ೧,೮೧೨ | ೧,೯೮,೩೫,೬೫೫ | ೪೨,೮೦,೫೮೫ | ೨,೪೧,೧೬,೨೪೦ |
| ೮ | ಪಾವಗಡ | ೮,೧೪೮ | ೮,೫೨೯ | ೫೩೮ | ೧,೪೫,೧೨,೨೧೦ | ೩೪,೮೭,೯೦೮ | ೧,೮೦,೦೦,೧೧೮ |
| ೯ | ಚಿಕ್ಕನಾಯಕನಹಳ್ಳಿ | ೫,೨೯೫ | ೩೧೩ | ೫೩ | ೧,೦೮,೯೯,೨೧೦ | ೨೮,೩೨,೨೭೬ | ೧,೩೭,೩೧,೪೮೬ |

| | | | | | | | |
|---|---|---|---|---|---|---|---|
| ೧೦ | **ಕೊರಟಗೆರೆ** | ೪,೩೭೮ | ೩,೨೭೦ | ೧,೧೦೦ | ೧,೩೨,೧೭,೨೬೭ | ೨೮,೫೬,೫೦೦ | ೧,೬೦,೭೩,೭೬೭ |
| ೧೧ | **ಹುಲಿಯೂರುದುರ್ಗ** | ೨,೧೯೭ | ೧,೬೪೦ | ೩೨೪ | ೪೫,೭೮,೬೫೪ | ೧೧,೪೪,೬೯೫ | ೫೭,೨೩,೩೪೯ |
| ೧೨ | **ಜಿ.ನೋ.ಕಛೇರಿ** | | | | ೧೯,೧೫,೨೧೦ | ೧,೬೨,೪೭೧ | ೨೦,೭೭,೬೮೧ |
| ಒಟ್ಟು | | ೮೬,೫೨೮ | ೬೩,೧೦೧ | ೧೫,೫೫೦ | ೪೭,೯೮,೪೭,೭೩೬ | ೯,೬೭,೭೯,೯೩೧ | ೫೭,೬೬,೨೭,೬೬೭ |
| **೨೦೧೨–೧೩** | | | | | | | |
| ೧ | **ತುಮಕೂರು** | ೨೬,೫೮೦ | ೨೬,೯೧೪ | ೭,೨೯೫ | ೩೨,೯೨,೦೭,೦೧೦ | ೭,೧೮,೩೪,೯೪೭ | ೪೦,೧೦,೪೧,೯೫೭ |
| ೨ | **ತಿಪಟೂರು** | ೭,೯೫೨ | ೬,೬೮೫ | ೧,೩೦೫ | ೩,೨೧,೨೪,೨೫೯ | ೯೬,೩೮,೯೧೦ | ೪,೧೭,೬೩,೧೬೯ |
| ೩ | **ಕುಣಿಗಲ್** | ೪,೩೧೯ | ೩,೩೦೬ | ೧೭೬೧ | ೨,೪೬,೧೨,೬೪೩ | ೬೬,೮೨,೪೩೫ | ೩,೧೨,೯೫,೦೭೮ |
| ೪ | **ಶಿರಾ** | ೧೨,೩೨೬ | ೭,೩೩೫ | ೧,೯೩೩ | ೩,೪೨,೭೬,೮೬೧ | ೧,೦೪,೬೪,೧೪೫ | ೪,೪೭,೪೧,೦೦೬ |
| ೫ | **ತುರುವೇಕೆರೆ** | ೫,೫೧೯ | ೪,೧೦೬ | ೬೮೨ | ೧,೨೬,೭೪,೯೭೮ | ೪೭,೦೭,೬೩೯ | ೧,೭೩,೮೨,೬೧೭ |
| ೬ | **ಗುಬ್ಬಿ** | ೭,೯೬೩ | ೭,೦೪೧ | ೧,೧೬೯ | ೧,೫೯,೩೯,೯೦೪ | ೬೨,೯೭,೯೨೦ | ೨,೨೨,೩೭,೮೨೪ |
| ೭ | **ಮಧುಗಿರಿ** | ೫,೭೦೪ | ೪,೦೭೦ | ೨,೦೪೧ | ೨,೦೦,೧೪,೯೨೨ | ೬೨,೬೩,೩೯೯ | ೨,೬೨,೭೮,೩೨೧ |
| ೮ | **ಪಾವಗಡ** | ೮,೩೭೨ | ೭,೨೨೬ | ೭೧೫ | ೧,೧೨,೯೫,೧೮೧ | ೪೯,೮೩,೮೩೫ | ೧,೬೨,೭೯,೦೧೬ |
| ೯ | **ಚಿಕ್ಕನಾಯಕನಹಳ್ಳಿ** | ೪,೮೬೨ | ೩೩೫ | ೫೫ | ೧,೨೨,೫೬,೭೨೫ | ೪೪,೨೭,೯೬೫ | ೧,೬೬,೮೪,೬೯೦ |
| ೧೦ | **ಕೊರಟಗೆರೆ** | ೪,೮೧೨ | ೨,೯೦೪ | ೧,೧೫೦ | ೧,೩೯,೬೮,೧೫೫ | ೪೪,೦೪,೩೫೧ | ೧,೮೩,೭೨,೫೦೬ |
| ೧೧ | **ಹುಲಿಯೂರುದುರ್ಗ** | ೨,೪೬೮ | ೨,೦೩೮ | ೩೫೭ | ೪೪,೪೭,೪೦೮ | ೧೮,೪೯,೨೮೧ | ೬೩,೩೬,೬೪೯ |
| ೧೨ | **ಜಿ.ನೋ.ಕಛೇರಿ** | – | – | – | ೨೦,೬೫,೭೩೭ | ೧೯,೯೮,೩೧೨ | ೪೦,೬೪,೦೪೯ |
| **ಒಟ್ಟು** | | **೯೦,೮೬೭** | **೭೧,೯೩೦** | **೧೮,೪೬೩** | **೫೧,೨೮,೮೩,೭೮೩** | **೧೩,೩೫,೯೩,೧೩೯** | **೬೪,೬೪,೭೬,೯೨೨** |

ಈ ಮೊದಲು ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ನಿರ್ದೇಶಕರು ಈ ಇಲಾಖೆಗೆ ಪದನಿಮಿತ್ತ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಆಗಿದ್ದರು. ದಿನಾಂಕ ೦೧–೦೬–೯೫ರಿಂದ ಈ ಇಲಾಖೆಗೆ ಪ್ರತ್ಯೇಕ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಹುದ್ದೆಯನ್ನು ಸೃಜಿಸಲಾಯಿತು. ಈಗ ಕೇಂದ್ರ ಕಛೇರಿಯಲ್ಲಿ ಮೂರು ಉಪನೋಂದಣಿ ಮಹಾಪರಿವೀಕ್ಷಕರು ಮತ್ತು ಮೂರು ಸಹಾಯಕ ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಓರ್ವ ಕೇಂದ್ರ ಸ್ಥಾನ ಸಹಾಯಕರು ಇಲಾಖಾ ಮುಖ್ಯಸ್ಥರಿಗೆ ನೆರವು ನೀಡುತ್ತಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಒಬ್ಬ ಜಿಲ್ಲಾ ನೋಂದಣಾಧಿಕಾರಿಗಳಂತೆ ೩೪ ಜನ ಜಿಲ್ಲಾ ನೋಂದಣಾಧಿಕಾರಿಗಳೂ, ೩೧ ಜನ ಕೇಂದ್ರ ಸ್ಥಾನ ಸಹಾಯಕರು ಇದ್ದಾರೆ. ಈ ಜಿಲ್ಲಾ ನೋಂದಾಣಾಧಿಕಾರಿಗಳು ಕರ್ನಾಟಕ ಸಂಘ–ಸಂಸ್ಥೆಗಳ ನೋಂದಣಿ ಅಧಿನಿಯಮ ೧೯೬೦ರ ಅಡಿಯಲ್ಲಿ ರಿಜಿಸ್ಟ್ರಾರ್ ಎಂದು ಮತ್ತು ಭಾರತೀಯ ಪಾಲುಗಾರಿಕೆ ಅಧಿನಿಯಮ ೧೯೩೨ರ ಅಡಿಯಲ್ಲಿ ರಿಜಿಸ್ಟ್ರಾರ್ ಆಫ್ ಫರ್ಮ್ಸ್ ಎಂದು ಕಾರ್ಯನಿರ್ವಹಿಸುತ್ತಿದ್ದಾರೆ. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಮುಖ್ಯ ರಾಜಸ್ವ ನಿಯಂತ್ರಣಾಧಿಕಾರಿಯಾಗಿರುತ್ತಾರೆ ಮತ್ತು ಈ ಇಲಾಖೆಯಲ್ಲಿ ೨೪೨ ಉಪನೋಂದಣಿ ಕಛೇರಿಗಳು ಇರುತ್ತವೆ (ಕಂದಾಯ ಇಲಾಖೆ ವಾರ್ಷಿಕ ವರದಿ ೨೦೧೦–೧೧).

**ಕಾವೇರಿ ಯೋಜನೆ:** ೨೦೦೩–೦೪ನೇ ಸಾಲಿನಿಂದ ಕಾವೇರಿ ಗಣಕೀಕರಣ ಯೋಜನೆ ಹಾಗೂ ತಂತ್ರಾಂಶ ಅಳವಡಿಸಿದೆ. ಮೇಲಿನ ಎಲ್ಲಾ ನೋಂದಣಾಧಿಕಾರಿಗಳ ಕಚೇರಿಗಳು ಈ ಯೋಜನೆಗೆ ಒಳಪಟ್ಟಿದ್ದು, ದಸ್ತಾವೇಜು ನೋಂದಣಿ, ವಿವಾಹ ನೋಂದಣಿ ಹಾಗೂ ಪಾಲುದಾರಿಕೆ ಸಂಸ್ಥೆಗಳ ನೋಂದಣಿ ಸೇವೆಗಳು ಸಂಪೂರ್ಣ ಗಣಕೀಕರಣಗೊಳಿಸಲ್ಪಟ್ಟಿವೆ.

ನೂತನ ಕಾವೇರಿ ಗಣಕೀಕರಣ ಯೋಜನೆ: ಕಾವೇರಿ ಭೂಮಿ ಜೋಡಣೆ, ಇ–ಸ್ಟಾಂಪ್ ಯೋಜನೆ, ಋಣಭಾರ ಪ್ರಮಾಣ ಪತ್ರದ ದಾಖಲೆಗಳ ಗಣಕೀಕರಣ ಯೋಜನೆ, ಶಾಶ್ವತ ದಾಖಲಾತಿಗಳ ಸ್ಕ್ಯಾನಿಂಗ್ ಹಾಗೂ ಮೈಕ್ರೋಫಿಲ್ಮಿಂಗ್ ಯೋಜನೆ, ಮುಂತಾದ ಯೋಜನೆಗಳು ಚಾಲ್ತಿಯಲ್ಲಿವೆ.

**ಇತರ ತೆರಿಗೆಗಳು:** ಭೂ ಕಂದಾಯವಲ್ಲದೆ, ಸರ್ಕಾರಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹಾಗೂ ಕೇಂದ್ರ ತೆರಿಗೆಗಳಲ್ಲಿ ತನ್ನ ಪಾಲಿನ ತೆರಿಗೆ ಮೂಲಕ ಹಲವಾರು ರೀತಿಯ ಅಂದರೆ ಅಬಕಾರಿ, ವಾಣಿಜ್ಯ, ನೋಂದಣಿ, ವಾಹನ, ವಿದ್ಯುಚ್ಛಕ್ತಿ, ಅರಣ್ಯ ಮುಂತಾದ ಇತರ ತೆರಿಗೆಗಳೂ ಸಂದಾಯವಾಗುತ್ತವೆ. ಕಾಲಕಾಲಕ್ಕೆ ಇವುಗಳ ದರ ಹಲವಾರು ಅಂಶಗಳನ್ನೊಳಗೊಂಡು ಪುನರ್ನಿಗದಿಗೊಳಪಡುತ್ತದೆ.

## ವಾಣಿಜ್ಯ ತೆರಿಗೆ

ರಾಜ್ಯ ಬೊಕ್ಕಸಕ್ಕೆ ಸಿಂಹಪಾಲು ತೆರಿಗೆ ನೀಡುವ ವಾಣಿಜ್ಯ ತೆರಿಗೆ ಇಲಾಖೆ ಕೆಳಕಂಡ ಕಾಯ್ದೆಗಳನ್ವಯ ಆಡಳಿತ ನಡೆಸುತ್ತದೆ.

೧. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ೧೯೫೭

೨. ಕೇಂದ್ರ ಮಾರಾಟ ತೆರಿಗೆ ಅಧಿನಿಯಮ ೧೯೫೬

೩. ಕರ್ನಾಟಕ ಮನರಂಜನಾ ಅಧಿನಿಯಮ ೧೯೫೮

೪. ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ ೧೯೫೭

೫. ಕರ್ನಾಟಕ ವೃತ್ತಿ, ವ್ಯಾಪಾರ, ಕಸುಬು ಮತ್ತು ಉದ್ಯೋಗ ತೆರಿಗೆ ಅಧಿನಿಯಮ ೧೯೭೬

೬. ಕರ್ನಾಟಕ ಭೋಗ ಸೌಲಭ್ಯ (ಹೋಟೆಲು ಹಾಗೂ ವಸತಿ ಗೃಹ) ತೆರಿಗೆ ಅಧಿನಿಯಮ ೧೯೭೬

೭. ಮೌಲ್ಯವರ್ಧಿತ ತೆರಿಗೆ (VAT) ಅಧಿನಿಯಮ ೨೦೦೫

ತುಮಕೂರು ವಾಣಿಜ್ಯ ಸಹಾಯಕ ಆಯುಕ್ತರ (ವಸೂಲಿ) ಕಛೇರಿಯು ದಿನಾಂಕ ೧-೪-೧೯೫೦ರಿಂದ ಪ್ರಾರಂಭವಾಗಿರುತ್ತದೆ. ಈ ಕಛೇರಿಯ ವ್ಯಾಪ್ತಿಗೆ ಕುಣಿಗಲ್, ತುರುವೇಕೆರೆ, ಗುಬ್ಬಿ, ಶಿರಾ ಮತ್ತು ತುಮಕೂರು ತಾಲೂಕುಗಳು ಒಳಗೊಂಡಿದ್ದು ಒಂದು ಪತ್ರಾಂಕಿತ ಅಧಿಕಾರಿಯೊಬ್ಬರು ಇದ್ದು ೧೪ ಮಂದಿ ಪತ್ರಾಂಕಿತರಲ್ಲದ ನೌಕರರೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕ ಮಾರಾಟ ತೆರಿಗೆ, ವೃತ್ತಿ ತೆರಿಗೆ ವಸೂಲಿ ಕಾಯ್ದೆಯಡಿ ಬಾಕಿ ಇರುವ ತೆರಿಗೆ ವಸೂಲಿ ಕಾರ್ಯ ನಿರ್ವಹಿಸುತ್ತಿದೆ.

ತುಮಕೂರು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿ (ವಸೂಲಿ) ತುಮಕೂರು ೧೯೯೦ರಲ್ಲಿ ಪ್ರಾರಂಭವಾಗಿದೆ. ೨೦೦೪-೦೫ನೇ ಸಾಲಿನವರೆಗೂ ತುಮಕೂರು ಜಿಲ್ಲೆಯಾದ್ಯಂತ ವಾರ್ಷಿಕ ರೂ.೧೫೦ ಲಕ್ಷಕ್ಕೂ ಅಧಿಕ ತೆರಿಗೆ ಪಾವತಿಸುವ ವರ್ತಕರು ಈ ಕಛೇರಿಯ ವ್ಯಾಪ್ತಿಗೆ ಒಳಪಡುತ್ತಾರೆ. ಪ್ರಸ್ತುತ ಈ ಕಛೇರಿಯ ಮುಖ್ಯ ಕಾರ್ಯ ಬಾಕಿ ತೆರಿಗೆ ವಸೂಲಾತಿ. ೨೦೦೪-೦೫ನೆಯ ಸಾಲಿಗೂ ಹಿಂದಿನ ಕರ ನಿರ್ಧರಣೆಗೆ ಸಂಬಂಧಿಸಿದ ಪರಿಷ್ಕರಣಾ ಆದೇಶ ಜಾರಿಗೆ ತರುವುದಾಗಿದೆ.

ತಿಪಟೂರು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿ (ವಸೂಲಿ) ತಿಪಟೂರು ಕಛೇರಿಯು ದಿನಾಂಕ ೬-೫-೧೯೭೧ ರಿಂದ ಪ್ರಾರಂಭವಾಗಿದ್ದು, ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ ತಾಲೂಕುಗಳು ಈ ಕಛೇರಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಕಛೇರಿಯು ಮೂರು ಬಾರಿ ಸ್ಥಳ ಬದಲಾವಣೆಯಾಗಿದ್ದು ೧೯೭೦-೭೧ ರಿಂದ ವಸೂಲಾದ ತೆರಿಗೆ ಅಂಕಿ ಅಂಶಗಳ ಮಾಹಿತಿ ಲಭ್ಯವಿಲ್ಲದ ಪ್ರಯುಕ್ತ ೧೯೯೭-೯೮ ರಿಂದ ಮಾಹಿತಿ ನೀಡಲಾಗಿದೆ. ಅಲ್ಲದೆ ೨೦೦೫-೬ನೆಯ ಸಾಲಿನಿಂದ ಮೌಲ್ಯವರ್ಧಿತ ತೆರಿಗೆ ಜಾರಿಗೆ ಬಂದು ಸದರಿ ಕಛೇರಿಯು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ (ಸ್ಥಿತ್ಯಂತರ) ಕಛೇರಿಯಾಗಿ ಪ್ರಸ್ತುತ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ವಸೂಲಿ) ಕಚೇರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ.

ಮಧುಗಿರಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ (ವಸೂಲಿ) ಕಛೇರಿಯು ೯/೧೯೭೯ ರಿಂದ ಪ್ರಾರಂಭವಾಗಿದ್ದು ದಿನಾಂಕ ೧-೪-೨೦೦೫ರಂದು ವಾಣಿಜ್ಯ ತೆರಿಗೆ ಸಹಾಯಕ ಅಧಿಕಾರಿಗಳು (ಸ್ಥಿತ್ಯಂತರ) ಮಧುಗಿರಿ ಎಂದು ಮರು ನಾಮಕರಣ ಹೊಂದಿದೆ. ಈ ಕಛೇರಿಯ ವ್ಯಾಪ್ತಿಗೆ ಮಧುಗಿರಿ, ಕೊರಟಗೆರೆ, ಪಾವಗಡ ತಾಲೂಕುಗಳು ಒಳಗೊಂಡಿದ್ದು ಕರ್ನಾಟಕ ಮಾರಾಟ ತೆರಿಗೆ, ಪ್ರವೇಶ ತೆರಿಗೆ ಮತ್ತು ವೃತ್ತಿ ತೆರಿಗೆಯ ಎಲ್ಲಾ ಕಾಯ್ದೆಗಳ ಹಳೇ ಬಾಕಿಯನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಮಧುಗಿರಿಯಲ್ಲಿರುವ ವಾಣಿಜ್ಯ ತೆರಿಗೆ ಅಧಿಕಾರಿ (ಸ್ಥಿತ್ಯಂತರ) ಕಛೇರಿಯು ದಿನಾಂಕ ೧–೪–೨೦೦೫ ರಿಂದ ಪ್ರಾರಂಭವಾಗಿದ್ದು ಮಧುಗಿರಿ, ಪಾವಗಡ, ತಾಲೂಕುಗಳು ಈ ಕಛೇರಿಯ ವ್ಯಾಪ್ತಿಗೆ ಒಳಪಡುತ್ತದೆ. ಪ್ರಸ್ತುತ ಕರ್ನಾಟಕ ಮಾರಾಟ ತೆರಿಗೆ, ಕೇಂದ್ರ ಮಾರಾಟ ತೆರಿಗೆ, ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಗಳಡಿಯಲ್ಲಿ ಕರ ನಿರ್ಧಾರಣೆ ಬಾಕಿ ಇರುವುದಿಲ್ಲ. ಕರ್ನಾಟಕ ಮನರಂಜನಾ ತೆರಿಗೆ ಕಾಯಿದೆ ಅಡಿಯಲ್ಲಿ ೩೧–೧೨–೦೮ಕ್ಕೆ ೯೭೧ ಕರನಿರ್ಧಾರಣೆಗಳು ಬಾಕಿ ಇವೆ. ಮಾರಾಟ ತೆರಿಗೆ, ಮನರಂಜನಾ ತೆರಿಗೆ, ಪ್ರವೇಶ ತೆರಿಗೆ, ವೃತ್ತಿ ತೆರಿಗೆ ಕಾಯ್ದೆಗಳಡಿಯಲ್ಲಿ ಒಟ್ಟು ರೂ.೧೨.೯೨ ಲಕ್ಷಗಳು ಬಾಕಿ ಇತ್ತು.

ಕರ್ನಾಟಕ ವಾಣಿಜ್ಯ ತೆರಿಗೆ ಅಧಿನಿಯಮ ೧೯೫೭ ಹಾಗೂ ಕೇಂದ್ರ ವಾಣಿಜ್ಯ ತೆರಿಗೆ ಅಧಿನಿಯಮ ೧೯೫೬ ರಾಜ್ಯದಲ್ಲಿ ಜಾರಿಯಲ್ಲಿವೆ. ರಾಜ್ಯ ರಾಜ್ಯಗಳ ನಡುವಣ ವ್ಯಾಪಾರಕ್ಕೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಯನ್ನು ಸಂಗ್ರಹಿಸುವ ರಾಜ್ಯವು ಅದನ್ನು ತಾನೇ ಇಟ್ಟುಕೊಳ್ಳಲು ಎರಡನೆಯ ಕಾನೂನು ಅವಕಾಶ ಕೊಡುತ್ತದೆ. ಈಗ ಇರುವ ವಾಣಿಜ್ಯ ತೆರಿಗೆಯಲ್ಲಿ ಏಕಸ್ಥಾನೀಯ (ಸಿಂಗಲ್ ಪಾಯಿಂಟ್) ಮತ್ತು ಬಹುಸ್ಥಾನೀಯ (ಮಲ್ಟಿ ಪಾಯಿಂಟ್) ವಸೂಲಾತಿಯ ವ್ಯವಸ್ಥೆ ಇದೆ. ಉತ್ಪಾದಕ, ಆಮದುದಾರರಿಂದ ಹಿಡಿದು ಅಂತಿಮವಾಗಿ ಬಳಕೆದಾರರವರೆಗೆ ಯಾವುದಾದರೂ ಒಂದು ಹಂತದಲ್ಲಿ ಮಾತ್ರ ಏಕಸ್ಥಾನೀಯ ತೆರಿಗೆ ವಸೂಲು ಮಾಡಲಾಗುವುದು. ಬಹುಸ್ಥಾನೀಯ ತೆರಿಗೆಯನ್ನು ವಸ್ತುವು ಮಾರಾಟದ ಕಾಲಕ್ಕೆ ಕೈಬದಲಾದಾಗೆಲ್ಲಾ ಅದರ ವ್ಯಾಪಾರಿಯಿಂದ ಸಂಗ್ರಹಿಸಲ್ಪಡುವುದು. ಏಕಸ್ಥಾನೀಯ ತೆರಿಗೆಯ ದರಗಳು ಶೇ.೧ ರಿಂದ ೧೫೦ ರವರೆಗೆ ಇರುವುದು. ೧೯೮೬ರಿಂದ ಇದನ್ನು ಶೇಕಡಾ ೨೦೦ಕ್ಕೆ ಏರಿಸಿದೆ. ಸುಮಾರು ೨೯೩ ಮುಖ್ಯ ವಸ್ತುಗಳಲ್ಲಿ ೧೭೮ ವಸ್ತುಗಳು ಏಕಸ್ಥಾನೀಯ ತೆರಿಗೆಗೆ ಒಳಪಟ್ಟಿವೆ. ಉಳಿದವು ಬಹುಸ್ಥಾನೀಯ ತೆರಿಗೆಗೆ ಬದ್ಧವಾಗಿವೆ. ಸಾಮಾನ್ಯ ವಸ್ತುಗಳು ಶೇ.೪ ಮಾರಾಟ ತೆರಿಗೆಗೆ ಒಳಪಟ್ಟಿವೆ. ಮದ್ಯಗಳು ಅಬಕಾರಿ ಸುಂಕಕ್ಕೆ ಒಳಪಡದಿದ್ದಲ್ಲಿ ಶೇ. ೨೦೦ ತೆರಿಗೆಗೆ ಪಾತ್ರವಾಗುತ್ತವೆ.

ಮಧುಗಿರಿಯಲ್ಲಿರುವ ವಾಣಿಜ್ಯ ತೆರಿಗೆ ಅಧಿಕಾರಿಯ ಕಛೇರಿ–೧೭೨, ದಿನಾಂಕ ೧–೪–೨೦೦೫ ರಿಂದ ಪ್ರಾರಂಭವಾಗಿದ್ದು, ಮಧುಗಿರಿ, ಪಾವಗಡ, ಶಿರಾ, ಕೊರಟಗೆರೆ ತಾಲೂಕುಗಳು ಈ ಕಛೇರಿಯ ವ್ಯಾಪ್ತಿಗೆ ಒಳಪಡುತ್ತದೆ. ಈ ಕಛೇರಿಗೆ ಟ್ರೇಡರ್ಸ್ ಮಾತ್ರ ತೆರಿಗೆದಾರರಾಗಿದ್ದಾರೆ. ಅಲ್ಲದೆ ಕಡಲೆಕಾಯಿ ಬೆಳೆ ಬಂದರೆ ಮಾತ್ರ ತೆರಿಗೆ ಜಾಸ್ತಿಯಾಗುತ್ತದೆ. ಕಡಲೆಕಾಯಿ ಬೆಳೆ ಇಳುವರಿ ಕಡಿಮೆಯಾದರೆ ಜಾಸ್ತಿ ತೆರಿಗೆಯು ಬರುವುದಿಲ್ಲ. ಸರ್ಕಾರದ ಆದೇಶ ಆಇ.೧೭೦/ ವಾತೆಸಿ.೨೦೧೧ ದಿನಾಂಕ ೨೬.೦೮.೨೦೧೧ರ ಪ್ರಕಾರ, ಪುನರ್ ವ್ಯವಸ್ಥೆಯಿಂದಾಗಿ ಟ್ರಾನ್ಸಿಷನ್ (ಸ್ಥಿತ್ಯಂತರ) ಬದಲಾಗಿ ಲೆಕ್ಕಪರಿಶೋಧನೆ ಮತ್ತು ವಸೂಲಿ ಎಂಬುದಾಗಿ ಮರುನಾಮಕರಣಗೊಂಡಿದೆ. ಟ್ರಾನ್ಸಿಷನ್ ಮಧುಗಿರಿ ಕಛೇರಿಯು ಬೆಂಗಳೂರಿಗೆ ಸ್ಥಳಾಂತರವಾಗಿರುತ್ತದೆ. ೩೦–೧೧–೨೦೧೨ರ ಅಂತ್ಯಕ್ಕೆ ಒಟ್ಟು ತೆರಿಗೆ ಬಾಕಿ ರೂ.೧೨.೯ ಲಕ್ಷ ಬಾಕಿ ಇರುತ್ತದೆ.

೧೯೮೪ರ ಏಪ್ರಿಲ್ ಒಂದರಿಂದ ಜಾರಿಗೆ ಬಂದ ಕಾನೂನಿನಂತೆ ರೂ. ೫೦,೦೦೦ ಅಥವಾ ಅದಕ್ಕೂ ಹೆಚ್ಚಿನ ವಾರ್ಷಿಕ ವಿಕ್ರಯ ವಹಿವಾಟು ನಡೆಸುವ ವ್ಯಾಪಾರಿಯು ರೂ. ೨೦೦ ಪಾವತಿ ಮಾಡಿ ತನ್ನನ್ನು ನೋಂದಾಯಿಸಿಕೊಳ್ಳಬೇಕು. ಅವನ ವಾರ್ಷಿಕ ವಿಕ್ರಯ ಒಂದು ಲಕ್ಷಕ್ಕೂ ಮೀರಿದ್ದರೆ ಅವನು ವಾಣಿಜ್ಯ ತೆರಿಗೆ ಕೊಡಲೇಬೇಕು. ೧೯೮೫ರಿಂದ ನೋಂದಣಿಗೆ ಬೇಕಾದ ವಿಕ್ರಯದ ಮಿತಿಯನ್ನು ರೂ. ೭೫,೦೦೦ಕ್ಕೆ ಏರಿಸಿದೆ. ನೋಂದಣಿ ಶುಲ್ಕ ರೂ. ೨೫೦ ಕ್ಕೆ ಏರಿದೆ. ಪ್ರತಿ ತಿಂಗಳ ೨೦ನೆಯ ತಾರೀಖಿಗೆ ಹಿಂದಿನ ತಿಂಗಳ ಮಾಸಿಕ ಮಾರಾಟದ ವರದಿಯನ್ನು ಇಲಾಖೆಗೆ ಒಪ್ಪಿಸಬೇಕೆಂಬ ನಿಯಮವಿದೆ. ಸರ್ಕಾರವು ನೋಂದಣಿಯ ಮಿತಿಯನ್ನು ೧೯೮೭–೮೮ರಿಂದ ರೂ.ಒಂದು ಲಕ್ಷಕ್ಕೆ ಹಾಗೂ ೧೯೯೦–೯೧ರಿಂದ ರೂ. ಎರಡು ಲಕ್ಷ ಕ್ಕೂ ಹೆಚ್ಚಿಸಿದೆ. ಬಾರ್ ಮುಂತಾದವುಗಳಿಗೆ ಈ ಮಿತಿ ಒಂದು ಲಕ್ಷ ರೂ ಮಾತ್ರ. ಮದ್ಯ ಉತ್ಪಾದಕರಿಗೂ ಮಾರಾಟದಾರರಿಗೂ ಇದೇ ಒಂದು ಲಕ್ಷದ ಮಿತಿ ಇದೆ.

ವರ್ಷಕ್ಕೆ ೧.೫೦ ಲಕ್ಷ ರೂ ಗಳಿಗೂ ಹೆಚ್ಚು ವಿಕ್ರಯ (Turn over) ವಿರುವ ವ್ಯಾಪಾರಿಗಳು ವಿಕ್ರಯ ತೆರಿಗೆಯಾಗಿ ಶೇ.೧.೫೦ರಷ್ಟು ಪಾವತಿ ಮಾಡಬೇಕು. ಐದು ಲಕ್ಷ ರೂ.ಗಳಿಗೂ ಹೆಚ್ಚಿನ ವಿಕ್ರಯವಿರುವ ವ್ಯಾಪಾರಿಗಳು ಪ್ರತೀ ಮಾರಾಟದ ವಿಶಿಷ್ಟ ಹಂತಕ್ಕೆ ಖಚಿತಗೊಳಿಸಿದ ದರದಂತೆ ಹೆಚ್ಚಿನ ತೆರಿಗೆ ಕೊಡಬೇಕು. ಈ ತೆರಿಗೆಯನ್ನು ಬಹುಸ್ಥಾನೀಯ ತೆರಿಗೆಯ

ರೂಪದಲ್ಲಿ ಸಂಗ್ರಹಿಸಲು ಕೂಡ ಅವಕಾಶವಿದೆ. ಲಾಟರಿ ಟಿಕೆಟ್‌ಗಳ ಮೇಲೆ ಶೇ.೧೦ ಮಾರಾಟ ತೆರಿಗೆಯನ್ನು ೧೯೮೬ ಏಪ್ರಿಲ್ ಒಂದರಿಂದ ಜಾರಿ ಮಾಡಿದೆ.

**ಮನರಂಜನೆ ತೆರಿಗೆ:** ಹಲವಾರು ಸಂಯುಕ್ತ ವಲಯಗಳಲ್ಲಿ ಡಿಸೆಂಬರ್ ೧೯೫೮ರವರೆಗೆ ಹಲವಾರು ಮನರಂಜನಾ ತೆರಿಗೆ ನಿಯಮಗಳು ಜಾರಿಯಲ್ಲಿದ್ದವು. ೧ನೇ ಜನವರಿ ೧೯೫೯ ರಿಂದ ರಾಜ್ಯಾದ್ಯಂತ ಅನ್ವಯವಾಗುವಂತೆ ಸಮಗ್ರ ತೆರಿಗೆ ಕಾಯ್ದೆ ಜಾರಿಯಾಯಿತು. ಅದೇ ದಿನಾಂಕದಿಂದ ಈ ಕಾಯ್ದೆ ವಾಣಿಜ್ಯ ತೆರಿಗೆ ಇಲಾಖೆಯ ಆಡಳಿತಕ್ಕೆ ಒಳಪಟ್ಟಿತು. ಸಿನಿಮಾ ಮಂದಿರ ಹಾಗೂ ಕುದುರೆ ಜೂಜಿನ ಸ್ಥಳಗಳಿಗೆ ಪ್ರವೇಶ ದರಗಳ ಮೇಲೆ ಮನರಂಜನಾ ತೆರಿಗೆ ವಿಧಿಸಲು ಈ ಕಾನೂನಿನನ್ವಯ ಅವಕಾಶವಿರುತ್ತದೆ. ನಾಟಕ, ಸಂಗೀತ ಕಾರ್ಯಕ್ರಮ ಹಾಗೂ ಇತರೆ ಮನರಂಜನೆಗಳು ಇದರ ಪರಿಧಿಗೆ ಒಳಪಡುವುದಿಲ್ಲ. ಮನರಂಜನೆ ಕರ, ಅಧಿಕ ಕರ (ಸರ್‌ಚಾರ್ಜ್) ಹಾಗೂ ಪ್ರದರ್ಶನ ಕರಗಳೆಂಬ ಮೂರು ವಿಧಗಳಲ್ಲಿ ತೆರಿಗೆ ವಸೂಲಾಗುತ್ತದೆ. ಮನರಂಜನಾ ಪ್ರವೇಶ ಹಣದ ಮೇಲೆ ಶೇಕಡಾ ೨೦ ರಿಂದ ಶೇಕಡಾ ೩೫ರವರೆವಿಗೂ ತೆರಿಗೆ ದರ ವಿಧಿಸಬಹುದಾಗಿದೆ. ೧೯೬೬ರ ಮೇ ೧೫ ರವರೆಗೆ ಟಿಕೇಟುಗಳ ಮೇಲೆ ಸರಕಾರಿ ಮುದ್ರಾಂಕ ಅಂಟಿಸುವುದರ ಮೂಲಕ ಈ ಕರವನ್ನು ನಗದು ವಸೂಲು ಮಾಡಿ ಮಾರಾಟ ಕರ ಇಲಾಖೆಯಲ್ಲಿ ಹಣ ಸಂದಾಯವಾಗುವಂತೆ ಮುದ್ರೆಯೊತ್ತಲಾಗುತ್ತದೆ.

ರಾಜ್ಯದ ಸಂಪನ್ಮೂಲಗಳನ್ನು ಉತ್ತಮಪಡಿಸಲು ಸಂಪನ್ಮೂಲ ಮತ್ತು ಆರ್ಥಿಕ ಸಮಿತಿಯ ಶಿಫಾರಸ್ಸಿನನ್ವಯ ೧೯೬೨ ರಲ್ಲಿ ಮನರಂಜನೆ ತೆರಿಗೆ ಮತ್ತು ಪ್ರದರ್ಶನ ತೆರಿಗೆಯ ಮೇಲೆ ಶೇಕಡಾ ೨೫ರಷ್ಟು ಅಧಿಕ ಕರ ವಿಧಿಸಲಾಯಿತು. ೧೯೭೧ರ ನವೆಂಬರ್ ೩೦ರವರೆಗೆ ಅಧಿಕ ಕರ ದರ, ಮನರಂಜನೆ ದರದ ಶೇಕಡಾ ೫೦ ರಷ್ಟಿತ್ತು. ಡಿಸೆಂಬರ್ ೧, ೧೯೭೧ರಿಂದ ಅದನ್ನು ಶೇಕಡಾ ೬೦ಕ್ಕೆ ಹಾಗೂ ೧೯೭೪ರಲ್ಲಿ ಶೇಕಡಾ ೧೦೦ಕ್ಕೆ ಏರಿಸಲಾಯಿತು. ಜುಲೈ ೧೯೮೨ ರಲ್ಲಿ ಪ್ರವೇಶ ಪತ್ರ (ಟಿಕೆಟ್)ದ ಮೇಲಿನ ತೆರಿಗೆಯನ್ನು ಏರಿಸಲಾಯಿತು ಮತ್ತು ಹೆಚ್ಚುವರಿ ತೆರಿಗೆಯನ್ನು ರದ್ದುಗೊಳಿಸಲಾಯಿತು. ೦೧–೦೪–೧೯೮೫ರಿಂದ ಚಲನಚಿತ್ರ ಮಂದಿರಗಳ ಪ್ರವೇಶ ತೆರಿಗೆ ದರ ಏರಿಸಲಾಯಿತು. ಒಂದು ರೂಪಾಯಿಗಿಂತ ಹೆಚ್ಚು ಬೆಲೆಯುಳ್ಳ ಪ್ರತಿ ಟಿಕೇಟಿನ ಮೇಲೆ ಶೇಕಡಾ ೧೦ ಹೆಚ್ಚಿನ ಕರ ವಿಧಿಸಲಾಯಿತು. ಅಧಿಕ ಕರದ ರೂಪದಲ್ಲಿ ಸಂದಾಯವಾದ ಹಣ ರಾಜ್ಯದ ಸ್ಥಿರ ನಿಧಿಗೆ ಸೇರುತ್ತದೆ. ಶಾಸನಾನ್ವಯ ಚಲನಚಿತ್ರ ಪ್ರದರ್ಶನಗಳಿಗೆ ಮನರಂಜನೆ ತೆರಿಗೆಯಲ್ಲದೆ ಪ್ರದರ್ಶನ ಕರವನ್ನು ನೀಡಬೇಕಾಗುತ್ತದೆ. ೧೯೬೬ರ ೧೪ನೇ ಶಾಸನ ಜಾರಿಯಾಗುವ ಮೊದಲು ಈ ಕರ ವಿನಾಯಿತಿ ನೀಡುವ ಅಧಿಕಾರ ಸರ್ಕಾರ ಅಥವಾ ಮಾರಾಟ ಕರ ಅಧಿಕಾರಿಗಳಿಗೆ ಇದ್ದಿತು. ನಂತರ ಈ ಅಧಿಕಾರವನ್ನು ಸರ್ಕಾರವೇ ವಹಿಸಿಕೊಂಡಿತು. ಇತ್ತೀಚೆಗೆ ೧.೪.೨೦೦೫ ರಿಂದ ದೇಶದಲ್ಲಿ ಮೌಲ್ಯ ವರ್ಧಿತ ತೆರಿಗೆ ಪದ್ಧತಿ (VAT-value added tax) ತೆರಿಗೆ ಪದ್ಧತಿ ಜಾರಿಗೊಳಿಸಲಾಗಿದೆ.

**ವೃತ್ತಿತೆರಿಗೆ:** ೧೯೭೬ಕ್ಕೂ ಮೊದಲು ಉದ್ಯೋಗ, ವೃತ್ತಿ ಮತ್ತು ಕಸಬುಗಳ ಮೇಲೆ ತೆರಿಗೆಯನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಮಾತ್ರ ಸಂಗ್ರಹಿಸುತ್ತಿದ್ದವು. ಕರ್ನಾಟಕ ಪುರಸಭೆಗಳ ಅಧಿನಿಯಮ ೧೯೬೪ರ ಪ್ರಕಾರ ವೃತ್ತಿ ತೆರಿಗೆ ವಸೂಲಿಗೆ ವೃತ್ತಿದಾರರನ್ನು ಒಂಬತ್ತು ಗುಂಪುಗಳಾಗಿ ವಿಭಜಿಸಲಾಗಿತ್ತು. ಆದರೆ ಉದ್ಯೋಗ, ವ್ಯಾಪಾರ ಮತ್ತು ನೌಕರಿಗಳ ಮೇಲೆ ತೆರಿಗೆಯನ್ನು ೧೯೭೬ರ ಏಪ್ರಿಲ್ ಒಂದರಿಂದ ಕರ್ನಾಟಕ ಉದ್ಯೋಗ, ವ್ಯಾಪಾರ ಮತ್ತು ವೃತ್ತಿಗಳ ಅಧಿನಿಯಮ ೧೯೭೬ರ ಮೇರೆಗೆ ಜಾರಿ ಮಾಡಲಾಯಿತು. ವೇತನ ಪಡೆಯುವ ನೌಕರರ ತೆರಿಗೆ ದರ ಅವರ ವೇತನ ಪ್ರಮಾಣದ ಮೇಲೆ ಅವಲಂಬಿಸಿವೆ. ವ್ಯಾಪಾರಿಗಳ ವಿಚಾರದಲ್ಲಿ ವಿಕ್ರಯ (turn over) ದ ಪ್ರಮಾಣವನ್ನು ತೆರಿಗೆ ನಿರ್ಣಯದಲ್ಲಿ ಪರಿಗಣಿಸಲಾಗುತ್ತಿದೆ. ನೌಕರರ ವೃತ್ತಿ ತೆರಿಗೆಯನ್ನು ಪ್ರತಿ ತಿಂಗಳು ಅವರ ಸಂಬಳದಲ್ಲಿ ಮುರಿದುಕೊಳ್ಳುವ ವ್ಯವಸ್ಥೆ ಇದೆ. ಸ್ವಉದ್ಯೋಗಿಗಳು ಆಯಾ ವರ್ಷದ ಸೆಪ್ಟಂಬರ್ ೩೦ಕ್ಕೆ ಮೊದಲು ತೆರಿಗೆ ಪಾವತಿ ಮಾಡಬೇಕು. ತುಮಕೂರು ಜಿಲ್ಲೆಯಲ್ಲಿ ೧೯೮೦ರಿಂದ ವೃತ್ತಿತೆರಿಗೆ ಅಧಿಕಾರಿ ಕಛೇರಿ ಪ್ರಾರಂಭವಾಗಿರುತ್ತದೆ.

೧ನೇ ಏಪ್ರಿಲ್ ೧೯೮೩ರಿಂದ ತಿಂಗಳಿಗೆ ರೂ.೧,೨೦೦ ಮೂಲ ವೇತನ ಅಥವಾ ಕೂಲಿ ಪಡೆಯುವವರು ಹಾಗೂ ಅದಕ್ಕೆ ಮೇಲ್ಪಟ್ಟ ಆದಾಯ ಉಳ್ಳವರಿಗೆ ಈ ತೆರಿಗೆಯು ಅನ್ವಯಿಸುತ್ತದೆ. ಸ್ವಉದ್ಯೋಗಿಗಳು ಈ ಅಧಿನಿಯಮದಡಿ ವೃತ್ತಿ ತೆರಿಗೆ ಪಾವತಿದಾರರೆಂದು ನೊಂದಾಯಿಸಿಕೊಂಡು ನಿಗದಿತ ದರದ ತೆರಿಗೆಯನ್ನು ಪ್ರತೀವರ್ಷ ಏಪ್ರಿಲ್ ೩೦ಕ್ಕೆ ಮೊದಲು

ಪಾವತಿ ಮಾಡಬೇಕು. ಕರ್ನಾಟಕ ಮಾರಾಟ ಕರ ಅಧಿನಿಯಮ ೧೯೫೦ರಂತೆ ನೋಂದಾಯಿಸಿದ ವ್ಯಾಪಾರಿಗಳು ವಾರ್ಷಿಕ ವಿಕ್ರಯ ೨೫,೦೦೦ಕ್ಕೆ ಮೇಲ್ಪಟ್ಟು ಮತ್ತು ೫೦,೦೦೦ ಕಡಿಮೆ ಇರುವವರು ವರ್ಷಕ್ಕೆ ರೂ.೧೦೦ರಂತೆ, ೫೦,೦೦೦ ರೂ.ನಿಂದ ಮೇಲ್ಪಟ್ಟು ಒಂದು ಲಕ್ಷ ರೂ.ವರೆಗೆ ವಿಕ್ರಯವಿರುವವರು ವರ್ಷಕ್ಕೆ ರೂ. ೨೫೦ರಂತೆ ತೆರಿಗೆ ಕೊಡಬೇಕು. ೧ನೇ ಆಗಸ್ಟ್ ೧೯೮೫ರಿಂದ ವಾರ್ಷಿಕ ವಿಕ್ರಯ ೭೫,೦೦೦ಕ್ಕೂ ಮೇಲ್ಪಟ್ಟು ಇರುವ ವ್ಯಾಪಾರಿಗಳು ರೂ.೨೫೦ ವಾರ್ಷಿಕ ವೃತ್ತಿ ತೆರಿಗೆ ಪಾವತಿ ಮಾಡಬೇಕು.ಕಛೇರಿ ಪ್ರಾರಂಭಿಕ ದಿನಾಂಕ (G.O.No.೭೧೧.೯೧ CSE80 Dt.೧೧.೭.೧೯೮೦) ಇದು ತುಮಕೂರು ಜಿಲ್ಲಾ ವ್ಯಾಪ್ತಿಯ ೧೦ ತಾಲೂಕುಗಳನ್ನು ಒಳಗೊಂಡಿದೆ.

| ಕ್ರಮ ಸಂಖ್ಯೆ | ವರ್ಷ | ವೃತ್ತಿ ತೆರಿಗೆ |
|---|---|---|
| ೧ | ೨೦೦೪-೦೫ | ೪೬೫.೨೨ |
| ೨ | ೨೦೦೫-೦೬ | ೪೪೫.೬೭೮ |
| ೩ | ೨೦೦೬-೦೭ | ೪೮೧.೮೫ |
| ೪ | ೨೦೦೭-೦೮ | ೬೪೦.೮೪ |
| ೫ | ೨೦೦೮-೦೯ | ೭೦೬.೬೮ |

**ಭೋಗಸೌಲಭ್ಯಗಳ ತೆರಿಗೆ:** ಕರ್ನಾಟಕ ಐಷಾರಾಮ (ಹೋಟೆಲು ಮತ್ತು ವಸತಿ ಗೃಹಗಳು) ಅಧಿನಿಯಮ ೧೯೭೯, ದಿನಾಂಕ ಒಂದನೇ ಜೂನ್ ೧೯೭೯ ರಿಂದ ಜಾರಿಯಾಯಿತು. ಭೋಗವಸ್ತುಗಳ ಮೇಲೆ ಹಾಗೂ ಹೋಟೆಲುಗಳಲ್ಲಿ ನೀಡಲ್ಪಡುವ ಯಾವುದೇ ಐಷಾರಾಮಗಳ ಮೇಲೆ ಈ ಕೆಳಕಂಡ ದರಗಳಲ್ಲಿ ೧.೮.೧೯೮೫ರಿಂದ ತೆರಿಗೆ ವಿಧಿಸಲಾಯಿತು.

೧. ದಿನಂಪ್ರತಿ ಒಬ್ಬರಿಗೆ ವಸತಿ ದರ ೩೦ ರೂ.ಗಳಿದ್ದು, ೧೫೦ ರೂ. ಮೇಲ್ಪಡದಿದ್ದಲ್ಲಿ ದರದ ಶೇಕಡಾ ೧೦

೨. ವಸತಿ ದರ ದಿನಂಪ್ರತಿ ಒಬ್ಬರಿಗೆ ೧೫೦ ರೂ. ಗಳಿದ್ದು, ೨೫೦ ರೂ. ಮೀರದಿದ್ದಲ್ಲಿ ದರದ ಶೇಕಡಾ ೧೫

೩. ವಸತಿ ದರ ದಿನಂಪ್ರತಿ ಒಬ್ಬರಿಗೆ ರೂ. ೨೫೦ ಮೀರಿದ್ದಲ್ಲಿ ದರದ ಶೇಕಡಾ ೨೦

**ಕೋಷ್ಟಕ ೯.೨೪ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ (ಲೆಕ್ಕ ಪರಿಶೋಧನೆ ಮತ್ತು ವಸೂಲಿ) ಶಿರಾ ಗೇಟ್, ತುಮಕೂರು ಕಛೇರಿಯಲ್ಲಿ ವಸೂಲಾದ ವಾಣಿಜ್ಯ ತೆರಿಗೆ ವಿವರ.**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ |
|---|---|---|---|
| ೧೯೯೮-೯೯ | ೨೦೭.೨೮ | ೬೯.೩೯ | ೬.೬೨ |
| ೧೯೯೯-೦೦ | ೩೩೬.೦೦ | ೧೧.೯೩ | ೬.೨೨ |
| ೨೦೦೦-೦೧ | ೩೦೧.೭೭ | ೧೦.೦೦ | ೫.೭೫ |
| ೨೦೦೧-೦೨ | ೨೬೩.೮೪ | ೧೦.೯೩ | ೬.೯೨ |
| ೨೦೦೨-೦೩ | ೨೬೪.೭೩ | ೭.೪೪ | ೫.೮೪ |
| ೨೦೦೩-೦೪ | ೩೦೧.೨೯ | ೧೯.೯೦ | ೧೧.೯೨ |
| ೨೦೦೪-೦೫ | ೪೧೫.೮೫ | ೧೦.೭೮ | ೧೨.೩೨ |
| ೨೦೦೫-೦೬ | ೧೮೯.೭೮ | ೨೭.೪೨ | ೪೬.೮೯ |
| ೨೦೦೬-೦೭ | ೬೪.೮೨ | ೮.೦೮ | ೨.೦೦ |

| | | | |
|---|---|---|---|
| ೨೦೦೭–೦೮ | ೫೩.೭೦ | ೧.೫೦ | ೦.೫೧ |
| ೨೦೦೮–೦೯ | ೧೪೬.೫೯ | ೧೧.೨೨ | ೦.೪೪ |
| ೨೦೦೯–೧೦ | ೨೦೧.೪೨ | ೨೦.೭೪ | – |
| ೨೦೧೦–೧೧ | ೧೪೦.೩೫ | ೦.೬೦ | ೦.೪೮ |
| ೨೦೧೧–೧೨ | ೪೪.೫೩ | ೨೪.೮೯ | ೦.೦೨ |
| ೨೦೧೨–೧೩ ಅಕ್ಟೋಬರ್ | | | |

| ವರ್ಷ | ಕರ್ನಾಟಕ ವಿಶೇಷ ತೆರಿಗೆ | ಮೌಲ್ಯ ವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|
| ೧೯೯೮–೯೯ | – | – | – | ೭.೩೧ | ೨೮೩.೯೮ |
| ೧೯೯೯–೦೦ | – | – | – | ೧.೮೨ | ೩೫೫.೯೭ |
| ೨೦೦೦–೦೧ | – | – | – | – | ೩೧೭.೫೨ |
| ೨೦೦೧–೦೨ | – | – | – | ೨.೬೩ | ೨೮೪.೩೨ |
| ೨೦೦೨–೦೩ | – | – | – | – | ೨೭೭.೦೧ |
| ೨೦೦೩–೦೪ | – | – | – | – | ೩೩೩.೧೧ |
| ೨೦೦೪–೦೫ | – | – | – | – | ೪೩೮.೯೮ |
| ೨೦೦೫–೦೬ | – | ೨.೧೪ | – | – | ೨೬೬.೨೩ |
| ೨೦೦೬–೦೭ | – | – | – | – | ೭೪.೯೦ |
| ೨೦೦೭–೦೮ | – | – | – | – | ೫೫.೭೧ |
| ೨೦೦೮–೦೯ | – | ೭.೪೩ | – | – | ೧೬೫.೬೮ |
| ೨೦೦೯–೧೦ | – | – | – | – | ೨೨೨.೧೬ |
| ೨೦೧೦–೧೧ | – | ೨೧.೨೮ | – | – | ೧೬೨.೧೭ |
| ೨೦೧೧–೧೨ | – | – | – | – | ೬೯.೪೪ |
| ೨೦೧೨–೧೩ ಅಕ್ಟೋಬರ್ | | | | | |

**ಮಾಹಿತಿ ಮೂಲ: ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಲೆಕ್ಕ ಪರಿಶೋಧನೆ ಮತ್ತು ವಸೂಲಿ), ತುಮಕೂರು**

***ಹಿಂದಿನ ವಾಣಿಜ್ಯ ತೆರಿಗೆ ಉಪ ಆಯುಕ್ತರು (ವಸೂಲಿ) ತುಮಕೂರು ಇವರ ಕಛೇರಿಯ ತೆರಿಗೆ ಸಂಗ್ರಹಣೆಯನ್ನು ಒಳಗೊಂಡಿದೆ.**

**ಕೋಷ್ಟಕ ೯.೨೫ ವಾಣಿಜ್ಯ ತೆರಿಗೆ ಉಪ ಆಯುಕ್ತರು (ವಸೂಲಿ), ತುಮಕೂರು ಕಛೇರಿಯಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ ಈ ಕೆಳಕಾಣಿಸಿದಂತಿದೆ.**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ |
|---|---|---|---|---|
| ೧೯೯೮–೯೯ | ೧೨೫೬.೫೦ | ೫೬.೦೧ | ೩.೩೧ | – |
| ೯೯–೨೦೦೦ | ೧೫೦೭.೧೬ | ೬೮.೬೬ | ೩.೨೩ | – |
| ೨೦೦೦–೦೧ | ೧೩೨೦.೩೭ | ೫೫.೭೦ | ೪.೩೪ | – |

| | | | | |
|---|---|---|---|---|
| ೨೦೦೧–೦೨ | ೧೪೧೭.೦೬ | ೪೧.೨೨ | ೪.೪೦ | – |
| ೨೦೦೨–೦೩ | ೧೨೮೩.೧೧ | ೨೨.೪೯ | ೫.೨೦ | – |
| ೨೦೦೩–೦೪ | ೧೬೫೯.೭೪ | ೧೨.೪೮ | ೫.೧೫ | – |
| ೨೦೦೪–೦೫ | ೨೩೪೯.೨೬ | ೭.೦೬ | ೮.೨೯ | – |
| ೨೦೦೫–೦೬ | ೬೩೫.೦೭ | ೨೧.೫೨ | ೦ | – |
| ೨೦೦೬–೦೭ | ೧೮೭.೮೦ | ೧೮೦.೨೦ | ೦ | – |
| ೨೦೦೭–೦೮ | ೩೫೩.೭೯ | ೧೭.೭೦ | ೦ | – |

| ವರ್ಷ | ಮೌಲ್ಯ ವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|
| ೧೯೯೮–೯೯ | – | – | – | ೧೩೧೫.೮೨ |
| ೯೯–೨೦೦೦ | – | – | – | ೧೫೭೯.೦೫ |
| ೨೦೦೦–೦೧ | – | – | – | ೧೩೮೦.೪೧ |
| ೨೦೦೧–೦೨ | – | – | – | ೧೪೬೨.೬೮ |
| ೨೦೦೨–೦೩ | – | – | – | ೧೩೧೦.೮೯ |
| ೨೦೦೩–೦೪ | – | – | – | ೧೬೭೭.೩೭ |
| ೨೦೦೪–೦೫ | – | – | – | ೨೩೬೪.೬೧ |
| ೨೦೦೫–೦೬ | – | – | – | ೬೬೬.೯೫ |
| ೨೦೦೬–೦೭ | – | – | – | ೨೦೬.೦೦ |
| ೨೦೦೭–೦೮ | – | – | – | ೩೭೧.೪೯ |

**ಕೋಷ್ಟಕ ೯.೨೬ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ), ತುಮಕೂರು {ಹಿಂದಿನ ಪದನಾಮ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಗುಪ್ತವಾರ್ತೆ), ತುಮಕೂರು} ಈ ಕಛೇರಿಯಲ್ಲಿ ೧೯೯೮–೯೯ ರಿಂದ ೨೦೧೨–೧೩ರವರೆಗೆ ವಿವಿಧ ಕಾಯ್ದೆಗಳಡಿಯಲ್ಲಿ ಸಂಗ್ರಹಿಸಿದ ರಾಜಸ್ವದ ವಿವರ (ರೂ. ಲಕ್ಷಗಳಲ್ಲಿ)**

| ವರ್ಷ | ಕೇಂದ್ರ ಮಾರಾಟ ತೆರಿಗೆ / ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ |
|---|---|---|---|---|
| ೧೯೯೮–೯೯ | ೧೨೮.೭೩ | ೨.೫೧ | – | – |
| ೧೯೯೯–೦೦ | ೧೪೪.೮೪ | ೫.೦೨ | – | – |
| ೨೦೦೦–೦೧ | ೧೫೬.೧೯ | ೭.೬೬ | – | – |
| ೨೦೦೧–೦೨ | ೧೭೯.೬೮ | ೯.೯೦ | – | ೨.೪೭ |
| ೨೦೦೨–೦೩ | ೧೪೦.೧೦ | ೧೦.೩೮ | – | – |
| ೨೦೦೩–೦೪ | ೧೯೧.೪೧ | ೪.೪೧ | – | – |
| ೨೦೦೪–೦೫ | ೨೪೧.೧೧ | ೩.೧೫ | – | – |
| ೨೦೦೫–೦೬ | – | ೧೨.೧೮ | – | – |
| ೨೦೦೬–೦೭ | – | ೨.೦೪ | – | – |
| ೨೦೦೭–೦೮ | – | ೭೩.೭೮ | – | – |
| ೨೦೦೮–೦೯ | – | ೨೪.೨೭ | – | – |

| | | | | |
|---|---|---|---|---|
| ೨೦೦೯–೧೦ | – | ೧.೦೬ | – | – |
| ೨೦೧೦–೧೧ | – | ೧.೩೭ | – | – |
| ೨೦೧೧–೧೨ | – | ೧೪.೩೩ | – | – |

| ವರ್ಷ | ಕರ್ನಾಟಕ ಮೌಲ್ಯವರ್ಧಿತ ತೆರಿಗೆ (VAT) | ಕರ್ನಾಟಕ ಮನರಂಜನಾ ತೆರಿಗೆ | ಇತರೆ | ಒಟ್ಟು (ಲಕ್ಷಗಳಲ್ಲಿ) |
|---|---|---|---|---|
| ೧೯೯೮–೯೯ | – | ೦.೧೫ | – | ೧೩೧.೩೯ |
| ೧೯೯೯–೦೦ | – | ೦.೧೧ | – | ೧೪೯.೯೭ |
| ೨೦೦೦–೦೧ | – | ೦.೩೫ | – | ೧೬೪.೨೦ |
| ೨೦೦೧–೦೨ | – | ೦.೪೧ | – | ೧೯೨.೪೬ |
| ೨೦೦೨–೦೩ | – | – | – | ೧೫೦.೪೮ |
| ೨೦೦೩–೦೪ | – | ೦.೩೯ | – | ೧೯೬.೨೧ |
| ೨೦೦೪–೦೫ | – | – | – | ೨೪೪.೨೬ |
| ೨೦೦೫–೦೬ | ೨೬೩.೪೪ | ೦.೩೦ | – | ೨೭೫.೯೨ |
| ೨೦೦೬–೦೭ | ೨೬೩.೦೧ | ೦.೩೪ | – | ೨೬೫.೩೯ |
| ೨೦೦೭–೦೮ | ೩೨೩.೨೪ | – | – | ೩೯೭.೦೨ |
| ೨೦೦೮–೦೯ | ೧೧೬.೦೯ | – | ೭.೭೩ | ೧೪೮.೧೦ |
| ೨೦೦೯–೧೦ | ೨೮೦.೪೩ | – | ೫.೩೩ | ೨೮೬.೮೩ |
| ೨೦೧೦–೧೧ | ೨೯೯.೮೧ | – | ೬.೭೬ | ೩೦೭.೯೫ |
| ೨೦೧೧–೧೨ | ೧೧೩.೩೧ | – | ೧೩.೮೧ | ೧೪೧.೪೭ |
| ೨೦೧೨–೧೩ ಅಕ್ಟೋಬರ್ | ೬೪.೦೬ | – | ೪.೪೭ | ೬೮.೫೪ |

**ಕೋಷ್ಟಕ ೯.೨೭ ವಾಣಿಜ್ಯ ತೆರಿಗೆ ಅಧಿಕಾರಿಗಳ ಐಗಿಔ–೧೭೦, ತುಮಕೂರು ಯಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ ಈ ಕೆಳಕಾಣಿಸಿದಂತಿದೆ.**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ |
|---|---|---|---|---|
| ೨೦೦೫–೦೬ | ೮೦೦.೪೧ | – | – | – |
| ೨೦೦೬–೦೭ | ೪೯೭.೮೪ | ೪.೭೬ | ೧.೬೩ | – |
| ೨೦೦೭–೦೮ | ೬೮೧.೩೨ | ೬೧.೨೩ | ೫೪.೬೫ | – |
| ೨೦೦೮–೦೯ | ೬೮೧.೬೨ | ೦.೪೧ | ೫೦.೭೪ | – |
| ೨೦೦೯–೧೦ | ೬೯೩.೮೧ | ೫.೦೩ | ೬೧.೫೯ | – |
| ೨೦೧೦–೧೧ | ೫೬೯.೮೮ | ೮೫.೭೭ | ೫೯.೭೩ | – |
| ೨೦೧೧–೧೨ | ೮.೭೪ | ೯೯.೯೪ | ೩೪೬.೫೫ | – |
| ೨೦೧೨–೧೩ ಅಕ್ಟೋಬರ್ | ೬೦.೪೭ | ೪೭.೫೦ | ೪೦೭.೩೩ | – |

| ವರ್ಷ | ಮೌಲ್ಯ ವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|
| ೨೦೦೫–೦೬ | ೨೬೪೯.೩೦ | – | – | ೩೪೪೯.೭೫ |
| ೨೦೦೬–೦೭ | ೪೩೫೨.೭೨ | – | – | ೪೮೫೬.೯೫ |
| ೨೦೦೭–೦೮ | ೫೭೬೪.೦೧ | – | – | ೬೫೬೧.೨೧ |
| ೨೦೦೮–೦೯ | ೬೫೭೪.೦೯ | – | – | ೭೩೦೬.೮೬ |
| ೨೦೦೯–೧೦ | ೬೩೦೫.೨೩ | – | – | ೭೦೬೫.೬೬ |
| ೨೦೧೦–೧೧ | ೮೬೪೭.೧೫ | – | – | ೯೩೬೩.೦೩ |
| ೨೦೧೧–೧೨ | ೮೧೮೫.೦೬ | ೮.೭೪ | ೨.೫೦ | ೮೬೫೧.೫೩ |
| ೨೦೧೨–೧೩ ಅಕ್ಟೋಬರ್ | ೪೫೮೫.೩೩ | ೯.೨೩ | ೭.೫೩ | ೫೧೧೭.೩೯ |

**ಕೋಷ್ಟಕ ೯.೨೮ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿ (ಲೆಕ್ಕಪರಿಶೋಧನೆ) ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳು (ಲೆಕ್ಕಪರಿಶೋಧನೆ) ತುಮಕೂರು ನಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ**

**ಪ್ರಸ್ತುತ ಕಛೇರಿಯು ಪ್ರಾರಂಭವಾದ ವರ್ಷ ೧–೪–೨೦೦೫ ರಿಂದ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ |
|---|---|---|---|---|
